ನಮ್ಮ ಮಾನಸ

ಸಂಪುಟ: 4 ಜುಲೈ 2010 ಸಂಚಿಕೆ : 3



ಡೆಂಗಿ ಜ್ವರ ತಡೆಗಟ್ಟುವ ಬಗ್ಗೆ ಮುಂಜಾಗ್ರತೆ ಕ್ರಮಗಳು

ಡೆಂಗಿ ಜ್ವರ ಎಂದರೇನು?

ಡೆಂಗಿಜ್ವರವು ಡೆಂಗಿ ವೈರಸ್‌ನಿಂದ ಉಂಟಾಗುವ ಕಾಯಿಲೆ. ಈ ಕಾಯಿಲೆಯು ಸೋಂಕು ಹೊಂದಿದ ಈಡಿಸ್ ಈಜಿಪ್ಟೈ ಎಂಬ ಸೊಳ್ಳೆಯ ಕಚ್ಚುವಿಕೆಯಿಂದ ಒಬ್ಬರಿಂದ ಒಬ್ಬರಿಗೆ ಹರಡುತ್ತದೆ.

ಈ ರೋಗದ ಮುಖ್ಯ ಲಕ್ಷಣಗಳು

ಇದ್ದಕ್ಕಿದ್ದಂತೆ ತೀವ್ರಜ್ವರ, ವಿಪರೀತ ತಲೆನೋವು, ಕಣ್ಣುಗಳ ಹಿಂಭಾಗದಲ್ಲಿ ನೋವು, ಮಾಂಸಖಂಡ ಮತ್ತು ಕೀಲುಗಳಲ್ಲಿ ನೋವು ಕಾಣಿಸಿಕೊಳ್ಳುವುದು ಈ ರೋಗದ ಲಕ್ಷಣ. ಹಲವು ಬಾರಿ ಮೂಗು, ಬಾಯಿ ಮತ್ತು ವಸಡುಗಳಲ್ಲಿ ರಕ್ತಸ್ರಾವದ ಚಿಹ್ನೆಗಳು ಕಂಡುಬರುತ್ತವೆ. ಈ ಲಕ್ಷಣಗಳು ಕಂಡುಬಂದಲ್ಲಿ ತಕ್ಷಣ ಹತ್ತಿರದ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿ, ರಕ್ತಪರೀಕ್ಷೆ ಮಾಡಿಸಿ, ಸೂಕ್ತ ಚಿಕಿತ್ಸೆ ಪಡೆಯುವುದು.

ಸಾರ್ವಜನಿಕರು ಡೆಂಗಿ ರೋಗವನ್ನು ತಡೆಗಟ್ಟಲು ತೆಗೆದುಕೊಳ್ಳಬೇಕಾದ ಮುನ್ನೆಚ್ಚರಿಕೆ ಕ್ರಮಗಳು

1. ಡೆಂಗಿ ಹರಡುವ ಈಜಿಪ್ಟ್ ಸೊಳ್ಳೆಗಳು ಮನೆಯಲ್ಲಿನ ನೀರು ಶೇಖರಿಸುವ ಸಿಮೆಂಟ್ ತೊಟ್ಟಿಗಳು, ಬ್ಯಾರೆಲ್‌ಗಳು, ಡ್ರಮ್‌ಗಳು, ಏರ್‌ಕೂಲರ್, ಹೂಕುಂಡದ ನೀರಿನ ಸಂಗ್ರಹಗಳು ಇತ್ಯಾದಿಗಳಲ್ಲಿ ಉತ್ಪತ್ತಿಯಾಗುವುದರಿಂದ ಇವುಗಳನ್ನು ವಾರಕ್ಕೊಮ್ಮೆ ಸಂಪೂರ್ಣವಾಗಿ ಶುಚಿಗೊಳಿಸಿ, ಯಾವಾಗಲೂ ಭದ್ರವಾದ ಮುಚ್ಚಳಿಕೆಯಿಂದ ಮುಚ್ಚಿ ಸೊಳ್ಳೆ ಉತ್ಪತ್ತಿಯಾಗದಂತೆ ಎಚ್ಚರವಹಿಸಿ.
2. ಬಯಲಲ್ಲಿ ಪೈರು, ಎಳನೀರಿನ ಚಿಪ್ಪು ಮತ್ತು ತ್ಯಾಜ್ಯ ವಸ್ತುಗಳಲ್ಲಿ ನೀರು ಸಂಗ್ರಹವಾಗುವಂತೆ ಸೂಕ್ತ ವಿಲೇವಾರಿ ಮಾಡುವುದು ಅಥವಾ ನಾಶಗೊಳಿಸುವುದು.
3. ಈ ರೋಗ ಹರಡುವ ಸೊಳ್ಳೆಗಳು ಹಗಲಲ್ಲಿ ಕಚ್ಚುವುದರಿಂದ ಸೊಳ್ಳೆ ಕಡಿತದಿಂದ ಪಾರಾಗಲು ಮಕ್ಕಳು, ವಿಶ್ರಾಂತಿ ಪಡೆಯುವ ವಯೋವೃದ್ಧರು, ಕಾಯಿಲೆಯಿಂದ ನರಳುವವರು ತಪ್ಪದೇ ಸೊಳ್ಳೆ ಪರದೆಯನ್ನು ಉಪಯೋಗಿಸುವುದು ಹಾಗೂ ಇತರೆ ಸೊಳ್ಳೆ ನಿರೋಧಕಗಳನ್ನು ಬಳಸುವುದು. ಹೀಗೆ ಮಾಡುವುದರಿಂದ ಈ ರೋಗವನ್ನು ತಡೆಗಟ್ಟುವುದು ಸುಲಭ.

ನಿಮ್ಮ ಮನೆಯ ಒಳಗೆ ಹಾಗೂ ಮನೆಯ ಸುತ್ತಮುತ್ತ
ಸೊಳ್ಳೆ ಉತ್ಪತ್ತಿಯನ್ನು ತಡೆಗಟ್ಟಿ ಡೆಂಗಿ ಜ್ವರ ನಿಯಂತ್ರಿಸಿ

ಕರ್ನಾಟಕ ವಾರ್ತೆ

ನಮ್ಮ ಮಾನಸ

ಜುಲೈ 2010
ಸಂಪುಟ : 4 ಸಂಚಿಕೆ : 3

Editor, Printer and Publisher
Rajeshwari H.S.,
No. 114/5, 9th Cross, 2nd Main
Chamarajpet, Bangalore - 560 018.
Mobile : 9449345698

Printed at
ILA Mudrana
No. 36, 40 Ft. Road, Raghavanagara,
New Timberyard Layout
Bangalore-26.
✆ : 26757159

ಚಂದಾ ವಿವರ

ಬಿಡಿಪ್ರತಿ	**8–00 ರೂ.**
ವಾರ್ಷಿಕ ಚಂದಾ	**100–00 ರೂ.**
(ವಿಶೇಷ ಸಂಚಿಕೆಯೊಂದಿಗೆ)	
ಸಂಸ್ಥೆಗಳಿಗೆ	**150–00 ರೂ.**

ನಮ್ಮ ಮಾನಸ

114/5, 9ನೇ ತಿರುವು, 2ನೇ ಮುಖ್ಯರಸ್ತೆ,
ಚಾಮರಾಜಪೇಟೆ, ಬೆಂಗಳೂರು – 560 018

ಚಂದಾಹಣವನ್ನು ಈ ವಿಳಾಸಕ್ಕೆ ಚೆಕ್ ಅಥವಾ ಡಿ.ಡಿ. ಮೂಲಕ ಕಳಿಸಬಹುದು

– – –

ಮೈಸೂರಿನಲ್ಲಿ ಓದುಗರು ಪ್ರತಿಗಳಿಗೆ ಹಾಗೂ ಚಂದಾ ನವೀಕರಣಕ್ಕೆ ಸಂಪರ್ಕಿಸಿ

ವೆಂ. ವನಜ

2329, 12ನೇ ಮೈನ್, 2ನೇ ಹಂತ,
ವಿಜಯನಗರ, ಮೈಸೂರು – 570 017

ಪ್ರಾರಂಭ : 'ಮಾನುಷಿ' (1985ರಲ್ಲಿ), ಅನಂತರ 'ಮಾನಸ', ಈಗ 'ನಮ್ಮ ಮಾನಸ'

ಸಂಪಾದಕೀಯ

ಹೆಣ್ಣು–ಕುಟುಂಬ–ಬದುಕು ಹೊಸ ಹಿಂಸೆ, ಸವಾಲುಗಳು

'ಪ್ರೇಮಿಗಳ ದಿನ'. 'ತಾಯಿಯ ದಿನ', 'ತಂದೆಯ ದಿನ' – ಹೀಗೆ ಹತ್ತು ಹಲವಾರು ದಿನಗಳನ್ನು ಶುಭ ಕೋರಿಕೆಯ ಮೂಲಕ, ಹೂ ಗುಚ್ಛಗಳ ವಿನಿಮಯ, ಎಸ್.ಎಮ್.ಎಸ್. ಮುಂತಾದವುಗಳ ಮೂಲಕ ಜಗತ್ತಿನಾದ್ಯಂತ ಆಚರಿಸುವುದನ್ನು ಕಾಣುತ್ತಿದ್ದೇವೆ. ಹೀಗೆ ಸಂಭ್ರಮಿಸುವ ಇಂತಹ ದಿನಗಳು ಚಾರಿತ್ರಿಕವಾಗಿ ಯಾವುದೇ ಬದಲಾವಣೆಯನ್ನು ವಾಸ್ತವದಲ್ಲಿ ತರಲು ಸಾಧ್ಯವಿಲ್ಲ ಎಂಬುದೂ ಕೂಡಾ ನಮಗೀಗಾಗಲೇ ತಿಳಿದಿರುವ ವಿಚಾರ. ಬಡತನದ ರೇಖೆಯ ಕೆಳಗೆ ಬದುಕುವ, ಅಸಂಘಟಿತ ಕ್ಷೇತ್ರದಲ್ಲಿ ದುಡಿಯುವ ಮಹಿಳೆಯರ ಬದುಕಿನಲ್ಲಂತೂ ಇಂತಹ ದಿನಗಳು ಏನೇನೂ ಅರ್ಥವನ್ನು ಪಡೆದುಕೊಂಡಿರುವುದಿಲ್ಲ. ಅವರ ಬದುಕಿನ ಸಂಕೀರ್ಣತೆಯು ಇಂತಹ ದಿನಗಳ ಶುಭಾಶಯಗಳ ಒಣ ಮಾತುಗಳಿಂದ ಸರಳೀಕೃತಗೊಳ್ಳುವುದಂತೂ ಸಾಧ್ಯವಿಲ್ಲದ ಮಾತಾಗಿದೆ.

70ರ ದಶಕದಲ್ಲಿ ಕೃಷಿಯಲ್ಲಿ ದುಡಿಯುವ ಮಹಿಳೆಯರ ಪ್ರಮಾಣ ಅಪಾರ ಪ್ರಮಾಣ ದಲ್ಲಿದ್ದರೂ ಹೊರ ಜಗತ್ತಿನಲ್ಲಿ ಉದ್ಯೋಗಿಗಳಾಗಿರುವ ಮಹಿಳೆಯರ ಸಂಖ್ಯೆ ಕಡಿಮೆ ಇತ್ತು. ಇಂದು ಖಾಸಗೀಕರಣ ಹಾಗೂ ಜಾಗತೀಕರಣದಿಂದಾಗಿ ಜಗತ್ತಿನಾದ್ಯಂತ ಮಹಿಳೆಯರು ಕಾಲಿಡದ ಕ್ಷೇತ್ರಗಳೇ ಇಲ್ಲ. ಸಂಘಟಿತ ಹಾಗೂ ಅಸಂಘಟಿತ ಕ್ಷೇತ್ರದಲ್ಲಿ ಕೆಲಸ ಮಾಡುವ ಎಲ್ಲಾ ಜಾತಿ–ವರ್ಗದ ಮಹಿಳೆಯರಿಗೂ ತಾಯ್ತನ ಎಂಬುದು ಲಿಂಗಾಧಾರಿತ ಸಮಾನತೆಗೆ ಸವಾಲಾಗಿರುವ ವಿಚಾರವಾಗಿದೆ. ಕುಟುಂಬದ ರಚನೆಗಳು ಹೆಣ್ಣಿನ ಶ್ರಮದ ಮೇಲೆಯೇ ಅವಲಂಬಿತವಾಗಿರುವುದಲ್ಲದೇ ಆಕೆಯ ಉದ್ಯೋಗದ ಕ್ಷೇತ್ರದಲ್ಲೂ ರಾಜಿಯಾಗುವಂತೆ ಒತ್ತಡಗಳನ್ನು ಹೇರುತ್ತಿವೆ. ಕೆಲಸ ಬಿಡುವುದು, ಪಾರ್ಟ್‌ಟೈಮ್ ಮಾಡುವುದು. 4–5 ವರ್ಷ ಉದ್ಯೋಗವಿಲ್ಲದೇ ಮನೆಯಲ್ಲಿಯೇ ಇರುವುದು ಇಂತಹ ಅನೇಕ ರಾಜಿಗಳನ್ನು ಮಾಡಿಕೊಳ್ಳುತ್ತಾ ಮಹಿಳೆಯ ಶ್ರಮವನ್ನು ಕುಟುಂಬದ ಭದ್ರ ನೆಲೆಗಾಗಿ ರೂಢಿಸುವುದು ಸಾಮಾನ್ಯವಾಗಿದೆ.

ಕಾರ್ಪೊರೇಟ್ ಜಗತ್ತು ಸದ್ಯಕ್ಕೆ ನಮ್ಮ ಮುಂದಿರುವ ಒಂದು ಚಿತ್ರಣ. ಇಲ್ಲಿ ಮಹಿಳೆಯರ ಶ್ರಮ ಅನಿವಾರ್ಯವಾದ ಹಾಗೆ 'ಫ್ಲೆಕ್ಸಿ ಟೈಮ್', 'ಪಾರ್ಟ್‌ಟೈಮ್ಸ್' ಹಾಗೂ ಮನೆಯಿಂದಲೇ ಕೆಲಸ ಮಾಡುವುದು – ಹೀಗೆ ಅನೇಕಾನೇಕ ರೀತಿಯ ಬದಲಾವಣೆಯಿಂದ ಮಹಿಳೆಯರ ಶ್ರಮವನ್ನು ಸಮರ್ಪಕವಾಗಿ ಬಳಸಿಕೊಳ್ಳಲು ಪ್ರಯತ್ನಿಸಲಾಗುತ್ತಿದೆ. ಆದರೂ ಉದ್ಯೋಗ/ ಕುಟುಂಬದ ಆಯ್ಕೆಯ ನಡುವಿನ ದ್ವಂದ್ವ ಮಹಿಳೆಯರ ಬದುಕಿನಲ್ಲಿ ಮುಂದುವರಿಯುತ್ತಲೇ ಇದೆ. ಕಾರ್ಪೊರೇಟ್ ಜಗತ್ತಿನಲ್ಲಿ ಎಲ್ಲವೂ ಚೆನ್ನಾಗಿದೆ ಎಂದೇನೂ ಅಲ್ಲ. ಹೋರಾಟದ ಮಾತಿಗೆ ಇಲ್ಲಿ ಅರ್ಥವೇ ಇಲ್ಲ. ಬೇರೆ ಬೇರೆ ಕ್ಷೇತ್ರದ ಮಹಿಳೆಯರು ಮನೆಗೆಲಸ–ಉದ್ಯೋಗದ ಹೊರೆಯನ್ನು ನಿಭಾಯಿಸಿಕೊಂಡೂ ಅನೇಕ ರೀತಿಯ ಹೋರಾಟ ನಡೆಸುತ್ತಿದ್ದಾರೆ. ಗಾರ್ಮೆಂಟ್ ಮಹಿಳೆಯರು, ಕೃಷಿಯಲ್ಲಿನ ರೈತ ಮಹಿಳೆಯರು, ನಗರದಲ್ಲಿ ರಸ್ತೆ ಗುಡಿಸುವ ಮಹಿಳೆಯರು– ಹೀಗೆ ಅನೇಕ ಸ್ತರದ ಮಹಿಳೆಯರು – ಒಟ್ಟಾಗಿ ಎಲ್ಲಾ ಜಾತಿ, ವರ್ಗದ ಮಹಿಳೆಯರಿಗೂ ಎರಡು ರೀತಿಯ ಹೊರೆಯ ಕೆಲಸದ ಸವಾಲುಗಳು ಎಂದೆಂದಿಗೂ ಎದುರಾಗುತ್ತಲೇ ಇವೆ. ಹಾಗಿದ್ದರೆ ಇದರೆಲ್ಲರ ಸಮಸ್ಯೆಯನ್ನು ಒಟ್ಟಾಗಿ ಹೋರಾಡುವಲ್ಲಿ, ಹೊಸ ರೀತಿಯ ಹಿಂಸೆ, ಸವಾಲುಗಳನ್ನು ಎದುರಿಸುವಲ್ಲಿ ಮಹಿಳಾ ಚಳವಳಿಯ ದಾರಿ ಏನಾಗಬೇಕಿದೆ ಎಂಬುದೂ ಕೂಡಾ ನಮಗೆ ತುರ್ತಾಗಿರುವ ಪ್ರಶ್ನೆಯಾಗಿದೆ.

70ರ ದಶಕದ ಸ್ತ್ರೀವಾದಿ ಚಳವಳಿಯು ಮಹಿಳೆಯರು ಕಾಮದ ವಸ್ತುವಾಗಿ, ಲೈಂಗಿಕವಾದ ಶೋಷಣೆಗೊಳಗಾಗುವುದನ್ನು ವಿರೋಧಿಸುವುದಾಗಿತ್ತು. ವಿದ್ಯಾಭ್ಯಾಸ ಆಕೆಯ

ಒಳಗಿನ ಪುಟಗಳಲ್ಲಿ....

ಹಕ್ಕೊತ್ತಾಯವಾಗಿತ್ತು. ಉದ್ಯೋಗದಲ್ಲಿ ತೊಡಗಿಸಿಕೊಂಡು ಆರ್ಥಿಕ ಸ್ವಾತಂತ್ರ್ಯದ ಜೊತೆಗೆ ಆಯ್ಕೆಯ ಸ್ವಾತಂತ್ರ್ಯವನ್ನು ಪಡೆಯುವುದಾಗಿತ್ತು. ಒಟ್ಟಾರೆಯಾಗಿ ಹೇಳುವುದಾದರೆ ಪುರುಷರ ಪ್ರಪಂಚದಲ್ಲಿ ಸಮಾನಾಂತರ ನೆಲೆಯಲ್ಲಿ ಹೆಂಗಸರು ತಮ್ಮನ್ನು ತೊಡಗಿಸಿಕೊಳ್ಳುವುದು ಎಂಬರ್ಥದಲ್ಲಿ ಮಹಿಳಾ ವಿಮೋಚನೆಯನ್ನು ಒಂದು ವಿಶಾಲವಾದ ನೆಲೆಯಲ್ಲಿ ಅರ್ಥೈಸಿಕೊಳ್ಳಲಾಗುತ್ತಿಲ್ಲ.

ಇಂದು ಎಲ್ಲಾ ಉದ್ಯೋಗರಂಗದಲ್ಲೂ ಹೆಣ್ಣು ಪಾಲ್ಗೊಳ್ಳುವುದು ಅನಿವಾರ್ಯವಾದ ಹಾಗೆ, ಕುಟುಂಬದ ಅಳಿವು-ಉಳಿವಿನಲ್ಲೂ ಆಕೆಯ ಆರ್ಥಿಕ ಕೊಡುಗೆ ಅನಿವಾರ್ಯವಾಗಿದೆ. ಆಕೆಯ ಸ್ವಾತಂತ್ರ್ಯ ಕೆಲವೊಮ್ಮೆ ಆಕೆಗೇ ಹೊರೆಯಾಗುವಷ್ಟು ದುರುಪಯೋಗದ ರೀತಿಯಲ್ಲಿ ಎಲ್ಲಾ ಸ್ತರದ ಕುಟುಂಬದ ಮಹಿಳೆಯರ ಮೇಲೂ ಕೆಲಸದ ಒತ್ತಡಗಳು ಬೀಳತೊಡಗಿವೆ. ಇಂತಹ ಸ್ಥಿತಿಯಲ್ಲಿ ಪುರುಷರನ್ನು ಕುಟುಂಬದ ಒಳಗಿನ, ಸ್ತ್ರೀವಾದಿ ಜಗತ್ತಿನ ಆವರಣದೊಳಕ್ಕೆ ಎಳೆಯುವಂತಹ ಸಾಂಸ್ಕೃತಿಕ, ರಾಜಕೀಯ, ಸಾಮಾಜಿಕ ಪ್ರಯತ್ನಗಳು ನಡೆಯಬೇಕಿದೆ. ಅದು ಮನೆಯಲ್ಲಿ ತಂದೆಯ ಪಾತ್ರವನ್ನು ಬಲಪಡಿಸುವು ದಾಗಿರಬಹುದು, ಸಮಾನ ಸಂಗಾತಿ ತನವನ್ನು ನಿರೀಕ್ಷಿಸುವುದಾಗಿರಬಹುದು, ಮಹಿಳಾ ಸಮಾನತೆಯನ್ನು ಎತ್ತಿ ಹಿಡಿಯುವ ರಾಯಭಾರಿಗಳನ್ನು ಪ್ರೋತ್ಸಾಹಿಸುವುದಾಗಿರಬಹುದು. ಕೌಟುಂಬಿಕ ಕಾರ್ಯಗಳಿಗಾಗಿ ಉದ್ಯೋಗ ರಂಗದಲ್ಲಿ ಪುರುಷರು ರಜೆ ಹೋಗುವುದನ್ನು, ಮನೆಯಿಂದ ಕೆಲಸ ಮಾಡುವುದನ್ನು ಬೆಂಬಲಿಸುವುದಾಗಿರಬಹುದು. ಇಂತಹ ಪ್ರಯತ್ನಗಳು ಇಂದು ನಡೆಯುವ ತುರ್ತಿದೆ. ಈ ಕೆಲಸಗಳು ವೈಯಕ್ತಿಕ ನೆಲೆಯಲ್ಲಿ ನಡೆದರೆ ಮಾತ್ರ ಸಾಧ್ಯವಿಲ್ಲ. ಮುಖ್ಯ ವಾಹಿನಿಯ ಸಂಸ್ಕೃತಿಯ ಪಿತೃಪ್ರಧಾನ ಮೌಲ್ಯದ ಸಾಂಸ್ಕೃತಿಕ ಮೌಲ್ಯಗಳ ಸವಾಲುಗಳನ್ನು ಎದುರಿಸುವಲ್ಲಿ ಚಳವಳಿ, ಸರ್ಕಾರ, ಸಮುದಾಯ ಒಟ್ಟಾಗಿ ಪ್ರಯತ್ನಿಸುವ ತುರ್ತು ನಮ್ಮ ಮುಂದಿದೆ.

- ಎಲ್ಲಾ ಕ್ಷೇತ್ರಗಳಲ್ಲೂ ಲಿಂಗಾಧಾರಿತ ಸಮಾನತೆಯನ್ನು ಕೇಂದ್ರೀಕರಿಸಿ ತರಬೇತಿಯನ್ನು ನೀಡುವುದು.
- ಮಹಿಳೆಯರ ಎರಡು ರೀತಿಯ ಹೊರೆಯ ಬಗ್ಗೆ ಎಲ್ಲರನ್ನೂ ಪ್ರಜ್ಞಾವಂತರನ್ನಾಗಿಸುವ ಕಾರ್ಯಕ್ರಮಗಳನ್ನು ಸರ್ಕಾರ ಹಮ್ಮಿಕೊಳ್ಳುವಂತೆ ಒತ್ತಾಯಿಸುವುದು.
- ಕುಟುಂಬದೊಳಗಿನ ಕೆಲಸ-ಕಾರ್ಯಗಳ ಹಂಚುವಿಕೆಯಲ್ಲಿ ಪುರುಷರ ಪಾತ್ರವನ್ನು ಒತ್ತಾಯಿಸಿ 'ಮಾದರಿ'ಗಳನ್ನು ನಿರ್ಮಿಸಲು ಪಠ್ಯಕ್ರಮ ರೂಪಿಸುವುದು.
- ಮಕ್ಕಳ ಲಾಲನೆ-ಪಾಲನೆಯಲ್ಲಿ ತಂದೆಯ ಪಾತ್ರವನ್ನು ಪ್ರೋತ್ಸಾಹಿಸುವುದು.
- ಮನೆಗೆಲಸಕ್ಕಾಗಿ ಪುರುಷರು ರಜೆ ತೆಗೆದುಕೊಳ್ಳುವುದನ್ನು ಸಾರ್ವಜನಿಕ ಯೋಜನೆಯ ಮೂಲಕ ಬೆಂಬಲಿಸುವುದು.
- ಕ್ಯೂಬಾ ಸರ್ಕಾರದ ಕಾನೂನಿನ ತರಹ ಪುರುಷರು ಮನೆಗೆಲಸ ಮಾಡದಿರುವುದು ಅಪರಾಧ ಎಂದು ಕಾನೂನಿನ ಮೂಲಕ ಒತ್ತಾಯ ತರುವುದು.
- ಮನೆಗೆಲಸದ 'ಶ್ರಮ'ಕ್ಕೆ ಮೌಲ್ಯದ ಒತ್ತು ನೀಡುವುದು.

ಈ ಬಗ್ಗೆ ಒಂದು ಸಮೂಹಿಕ ಚಳವಳಿ ನಡೆಸುವತ್ತ, ರಾಜಕೀಯ, ಸಾಂಸ್ಕೃತಿಕ, ಸಾಮಾಜಿಕ ಚಲನೆ ಒಳ ಮುಖವಾಗಿ ಸಾಗುವತ್ತ ಸಾಮುದಾಯಿಕ ಚಿಂತನೆ ನಡೆದು ಕಾರ್ಯಗತವಾದರೆ ಮಾತ್ರ ಬದಲಾಗುತ್ತಿರುವ ಹೆಣ್ಣಿನ ಬದುಕು ಹಾಗೂ ಒಟ್ಟಾರೆಯಾಗಿ ಕುಟುಂಬದ ಬದುಕು ಸಹನೀಯವಾಗಬಹುದು.

* * *

ಸಾಹಿತ್ಯ ಪರಿಷತ್ತು, ಬಿ. ಸರೋಜಾದೇವಿ ಮೊದಲಾದವರು ಹಲವು ಪ್ರತಿಷ್ಠಿತ ಪ್ರಶಸ್ತಿಗಳನ್ನು ಕೊಡಮಾಡುವ ಮೂಲಕ ಮಹಿಳೆಯರ ಸಾಧನೆಯನ್ನು ಗುರುತಿಸಿ ಗೌರವಿಸಿದ್ದಾರೆ. ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆಯೂ ಆಗಿ ಕೆಲಸಮಾಡಿದ್ದ ಹಿರಿಯ ಲೇಖಕಿ ವರ್ಣಚಿತ್ರಕಲಾವಿದೆ ಉಷಾ ಪಿ. ರೈ ಅವರನ್ನು ಅಭಿನಂದನಾಗ್ರಂಥ ಸಮರ್ಪಿಸಿ, ಗೌರವಿಸಲಾಗಿದೆ. ಎಚ್.ಎಸ್. ಪಾರ್ವತಿ, ನಿರುಪಮಾ ಮೊದಲಾದ ಹಿರಿಯರನ್ನು ಗೌರವಿಸುವ ಸಿದ್ಧತೆಗಳಾಗುತ್ತಿವೆ. ಇವೆಲ್ಲ ಸಂತೋಷ ತರುವ ಸಂಗತಿಗಳು. ಇದೇ ಹೊತ್ತಿನಲ್ಲಿ ವಿಕೃತವೂ ಅನಾರೋಗ್ಯಕರವೂ ಆದ ತಮ್ಮ ಮನಸ್ಸನ್ನು 'ಕವಲು' ಕೃತಿಯ ಮೂಲಕ ಮತ್ತೊಮ್ಮೆ ಅನಾವರಣಗೊಳಿಸಿದ್ದಾರೆ ಎಸ್.ಎಲ್. ಭೈರಪ್ಪ. ಈವರೆಗಿನ ಮಹಿಳಾ ಚಳವಳಿ, ಆ ಮೂಲಕ ಸಾಧಿತವಾದ ಸಂಗತಿಗಳನ್ನು ಒಂದೇ ಏಟಿಗೆ ಕ್ಷುಲ್ಲಕವಾಗಿಸಿದ ಈ ರೋಗಗ್ರಸ್ಥ ಮನಸ್ಸು ಜವಾಬ್ದಾರಿಯುತ ಸಮಾಜಕ್ಕೆ ತಗುಲಿದ ಅರ್ಬುದ ಎಂಬುದನ್ನು ಮನದಟ್ಟು ಮಾಡಿಕೊಡಬೇಕಾದ ಗುರುತರ ಜವಾಬ್ದಾರಿಯೂ ಮಹಿಳೆ ಮತ್ತು ಮಹಿಳಾಪರ ಚಿಂತಕರ ಹೊಣೆಯಾಗಿದೆ. ❑



ಹೊಸ ಉದ್ಯೋಗಾವಕಾಶಗಳಲ್ಲಿ ಮಹಿಳೆ

■ *ಚಂಪಾವತಿ ಎಚ್.ಎಸ್.*

ಮೊಲೆ-ಮುಡಿ ಮೂಡಿ ಬಂದರೆ ಹೆಣ್ಣೆಂಬರು
ಗಡ್ಡ-ಮೀಸೆ ಮೂಡಿದರೆ ಗಂಡೆಂಬರು
ನಡುವೆ ಸುಳಿವ ಆತ್ಮ ಗಂಡೂ ಅಲ್ಲ
ಹೆಣ್ಣೂ ಅಲ್ಲ ಕಾಣೋ ರಾಮನಾಥ

ದೇವರ ದಾಸಿಮಯ್ಯನವರ ವಚನ ಗಂಡೂ ಅಲ್ಲದ, ಹೆಣ್ಣೂ ಅಲ್ಲದ ಆತ್ಮದ ಬಗ್ಗೆ ಮಾತನಾಡುತ್ತದೆ. ಆತ್ಮದ ಪರಿವೀಕ್ಷಣೆಯಲ್ಲಿ ಮನುಷ್ಯನ ದೈಹಿಕ ಸ್ವರೂಪ ಮೀರಿದ ಲಿಂಗಾತೀತವಾದ ಒಂದು ಶಕ್ತಿ ಅವ್ಯಕ್ತವಾಗಿ ಕೆಲಸ ಮಾಡುತ್ತಿರುತ್ತದೆ. ಈ ಶಕ್ತಿಯಿಂದಾಗಿಯೇ, ಅಂತಹ ದೈಹಿಕ ಸ್ವರೂಪ ಮೀರಿದ ಆತ್ಮದ, ಅಂತರಂಗದ ಬಲದಿಂದಾಗಿಯೇ, ಇವತ್ತಿನ ಅಂದರೆ 21ನೆಯ ಶತಮಾನದ ಮಹಿಳೆ ಹಲವಾರು ರೀತಿಯ ಹೊಸ ಉದ್ಯೋಗಗಳಲ್ಲಿ ತನ್ನ ಪ್ರತಿಭೆಯನ್ನು ತನ್ನ ಸ್ವರೂಪವನ್ನು, ತನ್ನ ಅಂತರಂಗಿಕವಾದ ಒಂದು ಆತ್ಮದ ವಿಶೇಷ ಪಡಿಯಚ್ಚನ್ನೇ ಉದ್ಯೋಗರಂಗದಲ್ಲಿ ಮೂಡಿಸಿದ್ದಾಳೆ. ವಚನಗಳ ಸತ್ವದ ಸಾರವನ್ನು ಸಾಂಸ್ಕೃತಿಕ ವಾತಾವರಣದಲ್ಲಿ ಉಸಿರಾಗಿ ಹೊಂದಿದ ಗದಗ ಆಗಿರಬಹುದು, ಅಥವಾ ಉತ್ತರ ಕನ್ನಡದ ಇತರ ಪ್ರದೇಶಗಳಾಗಿರಬಹುದು. ಹೆಚ್ಚಿನ ಆತ್ಮಬಲದ ಬಗ್ಗೆ ಒಂದು ತಾತ್ವಿಕ ನಿಲುವನ್ನೂ ಕೂಡಾ ಹೊಂದಿರಲಿಕ್ಕೆ ಸಾಧ್ಯವಿದೆ. ಇಂತಹ ಹೆಣ್ಣಿನ ಆತ್ಮಬಲಕ್ಕೆ ಹೊಸ ಉದ್ಯೋಗಾವಕಾಶಗಳು ಒದಗಿಬಂದಿರುವ ಚಾರಿತ್ರಿಕ ಸಂದರ್ಭ, ಈಗ ನಾವು ಬದುಕುತ್ತಾ ಇರತಕ್ಕಂತಹ ಜಾಗತೀಕರಣ, ಖಾಸಗೀಕರಣದ ರಾಜಕಾರಣ – ಮಹಿಳೆಗೆ ಇಂದು ಉದ್ಯೋಗಾವಕಾಶಗಳಲ್ಲಿ ಇರುವ ಸವಾಲು. ಈ ಸವಾಲುಗಳನ್ನು ಉದ್ಯೋಗಸ್ಥ ಮಹಿಳೆ ಎದುರಿಸುತ್ತಿರುವ ರೀತಿ, ಈ ನಿಟ್ಟಿನಲ್ಲಿ ಬದಲಾಗಬೇಕಾದ ಸಮಾಜದ ಮೌಲ್ಯಗಳನ್ನು ಕುರಿತು ನಾನು ಮಾತನಾಡಲು ಬಯಸುತ್ತೇನೆ.

* * *

1990ರ ಸುಮಾರಿಗೆ ನಮ್ಮ ದೇಶದ ಆರ್ಥಿಕತೆ ಪೂರ್ಣ ಪ್ರಮಾಣದಲ್ಲಿ ಮುಕ್ತ ಮಾರುಕಟ್ಟೆಯಾಗಿ, ಮುಕ್ತ ಆರ್ಥಿಕತೆಯನ್ನು ಪ್ರತಿಪಾದಿಸುವ ಆರ್ಥಿಕ ನೀತಿಗಳು – ಜಾರಿಗೊಂಡಿದ್ದರಿಂದ ಸರ್ಕಾರಗಳು ಖಾಸಗಿ ವಲಯದ ವ್ಯಾಪಾರ-ವ್ಯವಹಾರ ನಡೆಸುವ ಕಂಪನಿಗಳ ಮೇಲೆ ತಮ್ಮ ಹಿಡಿತವನ್ನು ಕಳೆದುಕೊಂಡವು. ಬಹುರಾಷ್ಟ್ರೀಯ ಕಂಪನಿಗಳು ಮುಕ್ತ ಆರ್ಥಿಕರಂಗವಾದ ಭಾರತಕ್ಕೆ ಲಗ್ಗೆ ಇಟ್ಟವು. ಹೀಗೆ ಜಾಗತೀಕರಣದ ತೆಕ್ಕೆಗೆ ಭಾರತ ತೆರೆದುಕೊಂಡ ಸಂದರ್ಭದಲ್ಲಿ ಬೇರೆ ಬೇರೆ ಆರ್ಥಿಕ ವಲಯಗಳು ಭಿನ್ನ ಭಿನ್ನವಾದ ಅನುಭವಗಳನ್ನು ಹೊಂದಿರುವಂತಹದು ನಮ್ಮ ಗಮನಕ್ಕೆ ಬರುತ್ತಿದೆ. ಖಾಸಗೀಕರಣ ಹಾಗೂ ಜಾಗತೀಕರಣಗಳ ಪ್ರಕ್ರಿಯೆಯಗಳು ಭಿನ್ನ ಭಿನ್ನವಾದ ಆರ್ಥಿಕ ವಲಯಗಳಲ್ಲಿ ಮಹಿಳೆಯರ ಉದ್ಯೋಗಗಳ ಮೇಲೆ ಭಿನ್ನ ಭಿನ್ನವಾದ ಪರಿಣಾಮವನ್ನು ಬೀರಿವೆ. ಈ ಇಡೀ ಆರ್ಥಿಕ ಪ್ರಕ್ರಿಯೆ ಕೆಲವು ವರ್ಗದ ಮಹಿಳೆಯರಿಗೆ ಅವಕಾಶಗಳನ್ನು ಒದಗಿಸಿ-ಜಾಗತಿಕ ಮಟ್ಟದಲ್ಲಿ ಉದ್ಯೋಗಿಗಳಾಗುವ ಕನಸುಗಳನ್ನು ತುಂಬಿದರೆ, ಇದೇ ಪ್ರಕ್ರಿಯೆ ಬಡತನದ ರೇಖೆಯ ಕೆಳಗಿರುವ ಕೂಲಿ-ಕಾರ್ಮಿಕ ಮಹಿಳೆಯರ ಮೇಲೆ, ಅನಕ್ಷರಸ್ಥ ಮಹಿಳೆಯರ ದಲಿತ ಮಹಿಳೆಯರ ಉದ್ಯೋಗದ ಮೇಲೆ ದುಷ್ಪರಿಣಾಮಗಳನ್ನು ಬೀರಿ ಅವರನ್ನು ಕೆಲಸದಿಂದ ವಂಚಿತರನ್ನಾಗಿಸಿ ಇನ್ನಷ್ಟು ಮೂಲೆ ಗುಂಪಾಗಿಸಿರುವುದೂ ಕೂಡಾ ನಮ್ಮ ಗಮನಕ್ಕೆ ಬರುತ್ತದೆ. ಒಟ್ಟಾಗಿ ಹೇಳಬೇಕೆಂದರೆ ಜಾಗತೀಕರಣದ ಆರ್ಥಿಕ ಪ್ರಕ್ರಿಯೆ, ಚಲನ-ವಲನಗಳು ಪ್ಯಾರಡಾಕ್ಸಿಕಲ್ ಹಾಗೂ ವಿರೋಧಾಭಾಸ ಹೊಂದಿತಕ್ಕಂತಹ ಅನುಭವಗಳನ್ನು ಒಟ್ಟಾಗಿ ಮಹಿಳೆಯರಿಗೆ ಒದಗಿಸಿವೆ ಎಂದು ಹೇಳಬಹುದಾಗಿದೆ. ಈ ಒಂದು ಹಿನ್ನೆಲೆಯಲ್ಲಿಯೇ ಮಹಿಳೆಯರ ಹಲವಾರು ಉದ್ಯೋಗಾವಕಾಶಗಳತ್ತ ನಾವು ಕಣ್ಣು ಹಾಯಿಸಬೇಕಾಗುತ್ತದೆ.

ಶ್ರೀಮಂತ ಅಥವಾ ಉಚ್ಚ ಮಧ್ಯಮ ವರ್ಗದ ವಿದ್ಯಾವಂತ ಮಹಿಳೆಯರು ಡಿಜಿಟಲ್ ತಾಂತ್ರಿಕತೆಯಲ್ಲಿ ಹೊಂದುತ್ತಿರುವ ಉದ್ಯೋಗಾವಕಾಶಗಳು ಇಂದಿನ ಶತಮಾನದಲ್ಲಿ ಒಂದು ದೊಡ್ಡ ಕ್ರಾಂತಿಯನ್ನೇ ಮೂಡಿಸಿರುವ, ಮಹಿಳೆಯರ ಬದುಕನ್ನು ಬಹಳಷ್ಟು ಕ್ರಾಂತಿಕಾರಕವಾಗಿ ಬದಲಾಯಿಸಿರುವ ಅಂಶಗಳೆಂದು ಹೇಳಲಾಗುತ್ತದೆ. ಕಾರ್ಪೊರೇಟ್ ಸೆಕ್ಟರ್‌ನಲ್ಲಿ ಕಾಲ್‌ಸೆಂಟರ್‌ನಿಂದ ಹಿಡಿದು ಸಾಫ್ಟ್‌ವೇರ್ ಎಂಜಿನಿಯರ್ಸ್ ತನಕ ಉದ್ಯೋಗಾವಕಾಶಗಳನ್ನು ಹೊಂದಿದ ಮಹಿಳೆಯರಿದ್ದಾರೆ.

1981 – 19.7%
1991 – 22.7%
2001 – 25.7%
2005 – 30%
2007 – 35–40%
2010 – 45% ನಿಂದ 50%

(National Association of Software and Service Companies)

ಒಟ್ಟು ಉದ್ಯೋಗಿಗಳಲ್ಲಿ ಕಾರ್ಪೊರೇಟ್ ಸೆಕ್ಟರ್‌ನಲ್ಲಿ ಇರುವ ಮಹಿಳಾ ಉದ್ಯೋಗಿಗಳ ಮೇಲ್ಕಂಡ ಅಂಕಿ ಅಂಶಗಳು ಮಹಿಳಾ ಉದ್ಯೋಗಿಗಳ ಸಂಖ್ಯೆ ವಿಭಾಗದಲ್ಲಿ ಗಣನೀಯವಾಗಿ ಹೆಚ್ಚುತ್ತಿರುವುದನ್ನು ಪ್ರತಿಬಿಂಬಿಸುತ್ತದೆ. ಹಾಗೆಯೇ ಅತ್ಯಂತ ಉನ್ನತ ಹುದ್ದೆಯಲ್ಲಿರುವ ಮಹಿಳಾ ಉದ್ಯೋಗಿಗಳ ಸಂಖ್ಯೆ ನಿರಾಶಾದಾಯಕವಾಗಿ ಕೂಡಾ ಇದೆ. ಕಾರ್ಪೊರೇಟ್ ಸೆಕ್ಟರ್‌ನಲ್ಲಿ,

ಹಿರಿಯ ಮ್ಯಾನೇಜರ್ಸ್ – 10%
CEO - 4% ಗಿಂತ ಕಡಿಮೆ
ಅಧ್ಯಕ್ಷರು/ಉಪಾಧ್ಯಕ್ಷರು
COO - 3% ಗಿಂತ ಕಡಿಮೆ

ನಿರ್ಣಾಯಕ ಹುದ್ದೆಗಳಲ್ಲಿ ಮಹಿಳಾ ಉದ್ಯೋಗಿಗಳ ಸಂಖ್ಯೆ ಅತ್ಯಂತ ಕಡಿಮೆ ಇದೆ ಎಂಬುದು ಅಂಕಿ-ಅಂಶಗಳಿಂದ ತಿಳಿದುಬರುತ್ತದೆ. ಈ ಸೆಕ್ಟರ್‌ನಲ್ಲಿ ಕೆಲಸಮಾಡುವ ಮಹಿಳೆಯರು 'ಗ್ಲಾಸ್ ಸೀಲಿಂಗ್' ಹಂತದವರೆಗೆ ಉನ್ನತ ಹುದ್ದೆಗಳಿಗೆ ಹೋಗುತ್ತಾರೆ. 'ಗ್ಲಾಸ್ ಸೀಲಿಂಗ್' ಎಂದರೆ ಒಂದು ಮಟ್ಟದವರೆಗೆ ಮಾತ್ರ, ಇವರಿಗೆ ಉದ್ಯೋಗಗಳಲ್ಲಿ ನೇಮಿಸಿಕೊಳ್ಳಲಾಗುತ್ತದೆ. ಅಲ್ಲಿಂದ ಮುಂದಿನ ನಿರ್ಣಾಯಕ ಹುದ್ದೆಗಳಿಗೆ ಇವರಿಗೆ ಪ್ರವೇಶವಿರುವುದಿಲ್ಲ. ಈ ರೀತಿಯ 'ಗ್ಲಾಸ್ ಸೀಲಿಂಗ್' ಢಾಳಾಗಿ ಕಾಣಿಸುವುದಿಲ್ಲ. ಇದು ಯಾವುದೇ ಪುಸ್ತಕದಲ್ಲಿ ಬರೆದಿಟ್ಟ ಕಾನೂನಾಗಿರುವುದಿಲ್ಲ ಅಥವಾ ಉದ್ಯೋಗ ಸಂಹಿತೆಯಾಗಿಯೂ ಇರುವುದಿಲ್ಲ. ಆದರೂ ಬಹಳ ಸಹಜವೆಂಬಂತೆ ಮಹಿಳಾ ಉದ್ಯೋಗಿಗಳನ್ನು ನಿರ್ಣಾಯಕ ಹುದ್ದೆಗಳಿಂದ ಕೈ ಬಿಡಲಾಗುತ್ತದೆ. 'ಅಡ್‌ಮಿನಿಸ್ಟ್ರೇಟಿವ್ ಸೈನ್ಸ್ ಕ್ವಾರ್ಟರ್ಲಿ' ನಡೆಸಿದ ಅಧ್ಯಯನದ ಉದ್ಯೋಗಸ್ಥ ಮಹಿಳೆಯರು ತಮ್ಮ ಮಹಿಳಾ ಸಹೋದ್ಯೋಗಿಗಳ ಜೊತೆ ಉತ್ಪಾದನಾ ಸಂಬಂಧಗಳನ್ನು ಹೊಂದುವ ಸಾಮರ್ಥ್ಯ ಅಲ್ಲಿರುವ ನಿರ್ಣಾಯಕ ಹುದ್ದೆಯಲ್ಲಿರುವ ಅಥವಾ ಮೇಲಾಧಿಕಾರಿಗಳಾಗಿರುವ ಮಹಿಳೆಯರು ಎಷ್ಟಿದ್ದಾರೆ ಎಂಬುದರ ಮೇಲೆ ಅವಲಂಬಿತವಾಗಿರುತ್ತದೆಯೇ ಹೊರತು ಒಟ್ಟು ಸಂಸ್ಥೆಯಲ್ಲಿ ಎಷ್ಟು ಮಂದಿ ಮಹಿಳಾ ಉದ್ಯೋಗಿಗಳಿದ್ದಾರೆ ಎಂಬುದರ ಮೇಲಲ್ಲ ಎಂಬ ಅಂಶವನ್ನು ಎತ್ತಿ ಹಿಡಿಯುತ್ತದೆ. ಹಾಗಾಗಿ ಕಾರ್ಪೊರೇಟ್ ಸೆಕ್ಟರ್‌ನಲ್ಲಿ ಎಂಜಿನಿಯರ್ಸ್ ಅಥವಾ ಇತರ ಉದ್ಯೋಗಗಳಲ್ಲಿ ಮಹಿಳೆಯರಿಗೆ ಉದ್ಯೋಗಾವಕಾಶಗಳು ಇದ್ದರೂ ಮೂಲಭೂತವಾಗಿ ಮಹಿಳೆಯರ ವಿಚಾರದಲ್ಲಿ ಯಾವುದೇ ಕ್ರಾಂತಿಕಾರಕ ಬದಲಾವಣೆಗಳಾಗಿಲ್ಲ. ಆದರೆ ಈ ಆರ್ಥಿಕ ವಲಯದಲ್ಲಿ ಮಹಿಳೆಯರ ಕೌಶಲ್ಯ, ಸಾಮರ್ಥ್ಯಗಳನ್ನು ಉಳಿಸಿಕೊಳ್ಳುವುದಕ್ಕಾಗಿ 'ಉದ್ಯೋಗ'ದ ವ್ಯಾಖ್ಯಾನವನ್ನೇ ವಿಭಿನ್ನ ಬಗೆಯಲ್ಲಿ ವ್ಯಾಖ್ಯಾನಿಸುವ ಸಂಸ್ಥೆಗಳೂ ಇವೆ. ಮನೆಯಲ್ಲಿಯೇ ಇದ್ದು ಕೆಲಸ ಮಾಡುವುದು, ವಾರದಲ್ಲಿ 4 ದಿನಗಳಲ್ಲಿ ಕೆಲಸ ಮಾಡುವುದು, ಅವರದೇ ಆದ ಸಮಯದಲ್ಲಿ ಕೆಲಸ ಮಾಡುವುದು ಹೀಗೆ ಮಹಿಳಾ ಉದ್ಯೋಗಿಗಳನ್ನು ಒಳಗೊಳ್ಳುವುದಕ್ಕಾಗಿ ವಿಭಿನ್ನ ಅವಕಾಶಗಳನ್ನು ಒದಗಿಸಲು ಬೆರಳೆಣಿಕೆಯಷ್ಟು ಕಂಪನಿಗಳು ಪ್ರಯತ್ನಿಸಿವೆ. 22ರಿಂದ 30 ವರ್ಷದ ಮಹಿಳಾ ಉದ್ಯೋಗಿಗಳಿಗೆ ಮದುವೆ, ಹೆರಿಗೆ, ಮಕ್ಕಳು, ಕುಟುಂಬವನ್ನು ನಿಭಾಯಿಸುವುದಕ್ಕಾಗಿ ಈ ಅವಕಾಶವನ್ನು ಕೆಲವು ಕಂಪನಿಗಳು ಒದಗಿಸಿಕೊಡುತ್ತವೆ.

ಆದರೆ ಇಲ್ಲಿನ ಉದ್ಯೋಗಿಗಳು ಬೆಳಗಿನಿಂದ ಸಂಜೆಯವರೆಗೆ ದುಡಿಯುತ್ತಾರೆಂಬುದು ಸರ್ವವಿದಿತವಾದ ವಿಷಯ. ರಾತ್ರಿ ಪಾಳಿ ಅನಿವಾರ್ಯ. 23–24 ವರ್ಷಗಳಲ್ಲಿ ಸೈನ್ಸ್ ಅಥವಾ ಎಂಜಿನಿಯರಿಂಗ್ ಪದವಿ ಪಡೆದು ಉದ್ಯೋಗಗಳಿಗೆ ಕಾಲಿಡುವ ಯುವತಿಯರ ಬದುಕು ರಾತ್ರಿ ಪಾಳಿಯಲ್ಲಿ ಎಷ್ಟು ಸುರಕ್ಷಿತವಾಗಿರುತ್ತದೆ ಎಂಬುದರ ಬಗ್ಗೆ ಈಗಾಗಲೇ ಹಲವಾರು ಪ್ರಶ್ನೆಗಳು ಎದ್ದಿವೆ. ಮಹಿಳೆಯರ ಸಮಸ್ಯೆ, ಸುರಕ್ಷತೆಯ ಬಗ್ಗೆ ಈ ಆರ್ಥಿಕ ವಲಯಗಳು ಎಷ್ಟರ ಮಟ್ಟಿಗೆ ಗಮನವಹಿಸಿವೆ? ಸರ್ಕಾರಗಳು ಈ ವಿಚಾರದಲ್ಲಿ ಎಷ್ಟರ ಮಟ್ಟಿಗೆ ಮಧ್ಯೆ ಪ್ರವೇಶ ಮಾಡಿ ನೀತಿಸಂಹಿತೆ ರೂಪಿಸುವ ಸಾಮರ್ಥ್ಯ ಹೊಂದಿವೆ ಎಂಬುದರ ಬಗ್ಗೆ ಅನೇಕ ಮಹಿಳಾ ಹೋರಾಟಗಳು ಪ್ರಶ್ನೆ ಎತ್ತಿವೆ. ಜೊತೆಗೆ ಕೆಲವು ಕಂಪೆನಿಗಳಲ್ಲಿರುವ ಮಹಿಳಾ ಉದ್ಯೋಗಿಗಳ ಸಂಘಟನೆಗಳು ಮಹಿಳಾ ಉದ್ಯೋಗಿಗಳನ್ನು ಒಳಗೊಳ್ಳುವ ಪ್ರಯತ್ನವನ್ನು ಮಾಡುತ್ತಿವೆ. ಉದಾಹರಣೆಗೆ 'ಇನ್‌ಫೋಸಿಸ್ ವಿಮೆನ್ ಇನ್‌ಕ್ಲೂಸೀವ್ ನೆಟ್‌ವರ್ಕ್' (IWIN) ಮಹಿಳೆಯರ ನೆಟ್‌ವರ್ಕ್‌ಗಳನ್ನು ಮಾಡಿಕೊಳ್ಳುವುದರ ಜೊತೆಗೆ ಅವರಿಗೆ ತರಬೇತಿ ನೀಡುವುದು ಮತ್ತು ಯೋಜನೆ ಇತ್ಯಾದಿಗಳ ಬಗ್ಗೆ ತಿಳಿವಳಿಕೆ ನೀಡುತ್ತಾರೆ. 'ವಿಮನ್ ಆಫ್ ವಿಪ್ರೋ' ಮಹಿಳೆಯರ ಪ್ರತಿನಿಧೀಕರಣಕ್ಕೆ, ಉದ್ಯೋಗದ ಪ್ಯಾನಲ್‌ಗಳಲ್ಲಿ ಮಹಿಳಾ ಪ್ರತಿನಿಧಿಗಳು ಇರಲೇಬೇಕೆಂಬುದಕ್ಕೆ ಹಾಗೂ ಹೆಚ್ಚು ಮಹಿಳೆಯರನ್ನು ಉದ್ಯೋಗಕ್ಕೆ ತೊಡಗಿಸಿಕೊಳ್ಳಲು ಪ್ರಚಾರ ಕ್ರಿಯೆಯಂತಹ ಹಲವಾರು ಕಾರ್ಯಕ್ರಮಗಳನ್ನು ಯೋಜಿಸಿಕೊಂಡಿದ್ದಾರೆ. ಇಷ್ಟೆಲ್ಲದರ ನಡುವೆಯೂ ಸುರಕ್ಷತೆಯಿಲ್ಲದೇ ಕೊಲೆಯಾದ ಯುವತಿಯರಿದ್ದಾರೆ, ಈಮೇಲ್, ಮೆಸೇಜ್, ಫೋನ್ ಕಾಲ್‌ಗಳ ಮೂಲಕ ಪ್ರಾಜೆಕ್ಟ್ ಮ್ಯಾನೇಜರ್ ಅಥವಾ ಉನ್ನತ ಹುದ್ದೆಯಲ್ಲಿರುವವರಿಂದ ಲೈಂಗಿಕ ಕಿರುಕುಳ ಅನುಭವಿಸಿದ ಹೆಂಗಸರೂ ಇದ್ದಾರೆ. ಉದ್ಯೋಗದಲ್ಲಿ ಮೇಲಿನ ಮೆಟ್ಟಿಲುಗಳನ್ನೇರಲು, ಇಂತಹ ಲೈಂಗಿಕ ಅಮಿಷಗಳನ್ನು ಬಳಸಿಕೊಳ್ಳುವ ಮಹಿಳೆಯರೂ ಇದ್ದಾರೆ. ಸಮಾಜದಲ್ಲಿ ಬೇರೂರಿರುವ ಭಾವನೆಗಳು ಇಲ್ಲಿಯೂ ಅತ್ಯಂತ ಸೂಕ್ಷ್ಮ ನೆಲೆಯಲ್ಲಿ ಕೆಲಸ ಮಾಡುತ್ತವೆ. ಶ್ರೇಣೀಕೃತ ವ್ಯವಸ್ಥೆ, ಸ್ಪರ್ಧೆ, ವ್ಯಕ್ತಿಯ ಕೇಂದ್ರೀಕೃತ ಸಾಧನೆಗಳು ಇಂತಹವುಗಳಿಂದಾಗಿ ಈ ಉದ್ಯೋಗ ಹೆಚ್ಚು ವ್ಯಕ್ತಿಗತ ನೆಲೆಯಲ್ಲಿ ಇದೆಯೇ ಹೊರತು ಸಾಮುದಾಯಿಕ ನೆಲೆಯಲ್ಲಿ ಅಲ್ಲ.

ಕಾರ್ಪೊರೇಟ್ ವಲಯದ ಸರ್ವೀಸ್ ಸೆಕ್ಟರ್‌ಗಳಾದ ಕಾಲ್‌ಸೆಂಟರ್‌ಗಳು ಧ್ವನಿ ಆಧಾರಿತ ಕಂಪನಿಗಳಾದುದರಿಂದ ಇಲ್ಲಿ ಕೂಡಾ ಮಹಿಳೆಯರಿಗೆ ಉದ್ಯೋಗಾವಕಾಶಗಳು ತೆರೆದುಕೊಂಡಿವೆ. 2009ರಲ್ಲಿ ಅಮೆರಿಕಾದ ಆರ್ಥಿಕ ಹಿಂಜರಿತದಿಂದಾಗಿ ಅನೇಕ ಮಹಿಳೆಯರು ಉದ್ಯೋಗ ಕಳೆದುಕೊಂಡಿದ್ದರೂ, ಇತ್ತೀಚೆಗೆ ಇವರ ನೇಮಕಾತಿಗಳು ಈ ವಲಯದಲ್ಲಿ ಹೆಚ್ಚುತ್ತಿರುವುದು ಕಂಡುಬರುತ್ತದೆ. ಸಾಮಾನ್ಯರ ಪರಿಭಾಷೆಯಲ್ಲಿ ಕಾಲ್‌ಸೆಂಟರ್ ಎಂದು ಕರೆಯಲ್ಪಡುವ ಬಿಸಿನೆಸ್ ಪ್ರೊಸೆಸ್ ಔಟ್ ಸೋರ್ಸ್‌ಗಳು ಮಹಿಳೆಯರ ಉದ್ಯೋಗದ ಪರಿಕಲ್ಪನೆಯಲ್ಲಿ ಬದಲಾವಣೆ ತಂದಿವೆ. ಫ್ರೀಡ್‌ಮನ್‌ನ ಸಿದ್ಧಾಂತದಿಂದ ಪ್ರೇರಿತವಾದ ಈ ಕಾಲ್‌ಸೆಂಟರ್‌ಗಳು ಆಡಳಿತಾತ್ಮಕ ವೆಚ್ಚ ತಗ್ಗಿಸಲು ವ್ಯವಸ್ಥೆ ಸಂಸ್ಥೆಯ ಹೊರಗೆ ಶ್ರಮಕೇಂದ್ರಗಳನ್ನು ನಿರ್ಮಿಸುವ ವಿಧಾನ, ಇವು ಜಾಗತಿಕ ನೆಲೆಯಲ್ಲಿ ನಡೆಯುವ ಪ್ರಕ್ರಿಯೆಗಳು. ವ್ಯಾಪಾರಿ ಜಾಲದ ವಿಸ್ತರಣೆ, ತಾಂತ್ರಿಕ ಕ್ಷೇತ್ರದ ಆಡಳಿತಾತ್ಮಕ ಜವಾಬ್ದಾರಿ, ನಿರ್ವಹಣೆ, ಆರೋಗ್ಯಕ್ಷೇತ್ರದ ದಾಖಲಾತಿ ನಿರ್ವಹಣೆ, ಬ್ಯಾಂಕಿಂಗ್ ದಾಖಲಾತಿಗಳು, ಹಣಕಾಸು ಸಂಸ್ಥೆಯ ದಾಖಲಾತಿಗಳು, ಹೋಟೆಲ್, ಏರ್‌ಲೈನ್ ಹೀಗೆ ಸೇವಾಕ್ಷೇತ್ರಗಳ ನಿರ್ವಹಣೆ, ಆಡಳಿತ, ಸಂಶೋಧನೆ, ಮಾಹಿತಿ, ಸಂಪನ್ಮೂಲ ಕ್ರೋಢೀಕರಣ ಇದನ್ನೆಲ್ಲ ಈ ಕೇಂದ್ರಗಳು ನಿರ್ವಹಿಸುತ್ತವೆ. ರಾತ್ರಿಪಾಳಿ ಇಲ್ಲಿ ಅನಿವಾರ್ಯ. ಕಾಲ್‌ಸೆಂಟರ್‌ನ ಪ್ರಧಾನ ಕಛೇರಿ ಇರುವ ವಿದೇಶಿ ನೆಲದ ಕಾಲಮಾನಕ್ಕನುಗುಣವಾಗಿ ರಾತ್ರಿಪಾಳಿಯಲ್ಲಿ ಈ ಸೇವಾ ಕ್ಷೇತ್ರಗಳು ಕಾರ್ಯನಿರ್ವಹಿಸುತ್ತವೆ. ಧ್ವನಿ ಆಧಾರಿತವಾಗಿರುವ ಬಹುತೇಕ ಕಾಲ್‌ಸೆಂಟರ್‌ಗಳು ಮಧ್ಯಮವರ್ಗದ ಮಹಿಳೆಯರಿಗೆ ಸಾಕಷ್ಟು ಉದ್ಯೋಗಾವಕಾಶಗಳನ್ನು ತೆರೆದು ಸ್ತ್ರೀ ಕೇಂದ್ರಿತ ಉದ್ಯೋಗ ಇದು ಎನ್ನುವಷ್ಟರ ಮಟ್ಟಿಗೆ ಬೆಳೆದು ನಿಂತಿದೆ. ಪಿ.ಯು.ಸಿ., ಡಿಗ್ರಿ ಪಾಸಾದ, ಇಂಗ್ಲಿಷ್ ಚೆನ್ನಾಗಿ ಮಾತನಾಡಬಲ್ಲ ಉಚ್ಚಾರಣೆ ಸ್ಪಷ್ಟವಾಗಿ ಮಾಡಬಲ್ಲ, ಕಂಪ್ಯೂಟರ್‌ನಲ್ಲಿ ತರಬೇತಿ ಹೊಂದಿದ 18–19 ವರ್ಷದ ಯುವತಿಯರು ಇಂತಹ ಸೇವಾಕ್ಷೇತ್ರಗಳಿಗೆ ಅಡಿ ಇಡುತ್ತಿದ್ದಾರೆ.

ಈ ವಲಯದಲ್ಲಿ ದುಡಿಯುವ ಮಹಿಳೆಯರ ಬಗ್ಗೆ, ಇಲ್ಲಿರುವ ಲೈಂಗಿಕ ವರ್ತನೆಗಳ ಬಗ್ಗೆ ಸಮಾಜದಲ್ಲಿ ಪೂರ್ವಗ್ರಹಗಳಿವೆ. ಲೈಂಗಿಕ ದುರ್ವರ್ತನೆಗೆ ಬಳಕೆ ಯಾಗಲ್ಪಡುವ ಹೆಣ್ಣುಮಕ್ಕಳೆಂದು ಇವರನ್ನು ಕೆಳಮಟ್ಟದಲ್ಲಿ ನೋಡಲಾಗುತ್ತದೆ.

ಪ್ರತಿಭಾಳ ಅತ್ಯಾಚಾರ ಹಾಗೂ ಕೊಲೆ ಪ್ರಕರಣ – ರಾತ್ರಿ ಪಾಳಿಯ ಸುರಕ್ಷತೆಯ ಬಗ್ಗೆ ಹಲವಾರು ಪ್ರಶ್ನೆಗಳನ್ನು ಈ ವಲಯದಲ್ಲಿ ಎಬ್ಬಿಸಿದೆ. ಕೆಲಸದ ಒತ್ತಡದಿಂದಾಗಿ ಮಹಿಳೆಯರು ಮಾನಸಿಕ ಹಾಗೂ ದೈಹಿಕವಾಗಿ ಸ್ವಲ್ಪ ಸಮಯದಲ್ಲಿಯೇ ಜರ್ಝರಿತರಾಗುತ್ತಾರೆ ಹಾಗೂ ಇವರು ಯಾವಾಗಲೂ ಸ್ಪರ್ಧಾತ್ಮಕವಾಗಿಯೇ ಇರಬೇಕಾಗುತ್ತದೆ. ತರಬೇತಿ ಹೊಂದುವುದು, ಕೌಶಲಗಳನ್ನು ಆಗಾಗ್ಗೆ ಪರಿಷ್ಕೃತ ಗೊಳಿಸಿಕೊಳ್ಳುವುದು – ಹೀಗೆ ಸದಾ ಜಾಗರೂಕರಾಗಿಯೇ



ಇರಬೇಕಾಗುತ್ತದೆ. ಗ್ರಾಹಕರ ಬೇಜವಾಬ್ದಾರಿ ವರ್ತನೆ, ಭಾಷೆಯನ್ನು ಸಹಿಸಿಕೊಂಡೇ ಇವರು ಕೆಲಸ ಮಾಡಬೇಕಾಗುತ್ತದೆ. ವಾರಕ್ಕೆ ಮಹಿಳೆಯರು 35 ಘಂಟೆಗಳ ಕಾಲ ಮನೆಗೆಲಸವನ್ನು ಮಾಡುತ್ತಾರೆ. ಮನೆಗೆಲಸ, ಮಕ್ಕಳನ್ನು ನೋಡಿಕೊಳ್ಳುವುದು, ವಯಸ್ಸಾದವರನ್ನು ನೋಡಿಕೊಳ್ಳುವುದು, ಹೀಗೆ ಮನೆಯ ಜವಾಬ್ದಾರಿ ಹೊರುವುದು, ರಾತ್ರಿ ನಿದ್ದೆ ಗೆಡುವುದು, ಲೈಂಗಿಕ ಕಿರುಕುಳ, ಉದ್ಯೋಗದ ಭದ್ರತೆ ಇಲ್ಲದಿರುವುದು, ಅಸಹಕಾರ, ಉದ್ದೇಶ ಪೂರ್ವಕವಾಗಿ ಉದ್ಯೋಗದಲ್ಲಿ ಮಾಹಿತಿಗಳನ್ನು ಮರೆಮಾಡುವ ಕ್ರಮ, ರಾತ್ರಿ ಪಾಳಿಯ ಸುರಕ್ಷತೆ ಇಲ್ಲದಿರುವ ಆತಂಕ ಹೀಗೆ ಹತ್ತು ಹಲವಾರು ಆತಂಕ, ಒತ್ತಡಗಳಿಂದ ನರಳುವ ಈ ಉದ್ಯೋಗಿಗಳು ಸ್ವಲ್ಪ ವರ್ಷಗಳ ನಂತರ ಕೆಲಸಕ್ಕೆ ರಾಜೀನಾಮೆ ನೀಡುವ ಪ್ರಕರಣಗಳು ಕಂಡುಬಂದಿವೆ. ಈ ಉದ್ಯೋಗ ಸ್ತ್ರೀ ಕೇಂದ್ರೀತವಾಗಿದ್ದರೂ ಆರ್ಥಿಕ ಹಿಂಜರಿತವಿದ್ದಾಗ ಕತ್ತರಿ ಬೀಳುವುದು ಕೂಡಾ ಮಹಿಳೆಯರ ಉದ್ಯೋಗಗಳಿಗೇ ಆಗಿದೆ. ಚಾರಿತ್ರಿಕವಾಗಿ ಗುಜರಾತ್‌ನಲ್ಲಿ ಟೆಕ್ಸ್‌ಟೈಲ್ ಮಿಲ್‌ಗಳಲ್ಲಿ, 1933ರಲ್ಲಿ ಅಮೆರಿಕಾದ ಆರ್ಥಿಕ ಹಿಂಜರಿತದಲ್ಲಿ ಹಾಗೂ ಇತ್ತೀಚಿನ ಆರ್ಥಿಕ ಹಿಂಜರಿತ ಕೂಡಾ ಇದೇ ಕಥೆಯನ್ನೇ ಹೇಳುತ್ತದೆ.

ಒಟ್ಟಾಗಿ ಹೇಳಬೇಕೆಂದರೆ ಕಾರ್ಪೊರೇಟ್ ವಲಯದಲ್ಲಿ,

1. ಸಾಫ್ಟ್‌ವೇರ್ ಅಥವಾ ಕಾಲ್‌ಸೆಂಟರ್‌ನಂತಹ ಸರ್ವೀಸ್ ವಲಯದಲ್ಲಿ ಪ್ರತಿಭಟನೆ ಅಸಾಧ್ಯ ಎನ್ನುವಂತಹ ಸ್ಥಿತಿ ಇದೆ.
2. ಇಲ್ಲಿಯ ಬಹುತೇಕ ಉದ್ಯೋಗಿಗಳು ತಾಂತ್ರಿಕವಾಗಿ ಭಾರತಕ್ಕೆ ಸೇರಿರುವುದಿಲ್ಲ. ಹಾಗಾಗಿ ಈ ನೆಲದ ಕಾನೂನು ಇವರಿಗೆ ಅನ್ವಯಿಸುವುದಿಲ್ಲ.
3. ಕಾರ್ಮಿಕರ ಸಂಘಟನೆಗಳ ಅಗತ್ಯ ಮಾಹಿತಿಯು ತಂತ್ರಜ್ಞಾನ ಸಂಸ್ಥೆಗಳಲ್ಲೂ ಇದೆ. ಆದರೆ ಅದಕ್ಕೆ ಅವಕಾಶ ಇರದಷ್ಟು ಬಿಗಿ ವಾತಾವರಣ ಇಲ್ಲಿದೆ.
4. ಉದ್ಯೋಗದ ಭದ್ರತೆ ಇಲ್ಲ
5. ವ್ಯಕ್ತಿಗತ ಸಾಧನೆ ಮುಖ್ಯವಾಗುವುದರಿಂದ ವ್ಯಕ್ತಿ ಕೇಂದ್ರೀಕೃತ ರಚನೆಗಳು ಹೆಚ್ಚು.
6. ಸ್ವತಂತ್ರ ನಿರ್ಧಾರ ತೆಗೆದುಕೊಳ್ಳುವ, ನಿರ್ಣಾಯಕ ನಿರ್ಧಾರ ತೆಗೆದು ಕೊಳ್ಳುವಂತಹ ಉದ್ಯೋಗದ ಅತಿ ದೊಡ್ಡ ಅಧಿಕಾರಿವರ್ಗದಲ್ಲಿ ಮಹಿಳೆಯರ ಸಂಖ್ಯೆ ಅತ್ಯಲ್ಪ.
7. ನಿದ್ರೆ ರಹಿತರಾಗಿರುವುದು, ಕಣ್ಣು, ಬೆನ್ನುನೋವಿನ ಸಮಸ್ಯೆಯಿಂದ ಬಳಲುವುದು ಅತಿ ಸಾಮಾನ್ಯವಾದ ವಿಚಾರವಾಗಿದೆ.
8. ಸರ್ವೀಸ್ ವಲಯದಲ್ಲಿ ಲಿಂಗಾಧಾರಿತವಾಗಿರತಕ್ಕಂತಹ ಅನುಚಿತ ಭಾಷೆ ಯನ್ನು ಮಹಿಳೆಯರು ಕೇಳಬೇಕಾಗುತ್ತದೆ.
9. 'ರಾತ್ರಿ ಪಾಳಿ'ಯಲ್ಲಿ ಸುರಕ್ಷಿತತೆ ಪ್ರಶ್ನೆ ಮುಖ್ಯವಾಗಿದೆ.

10. ಸಾಫ್ಟ್‌ವೇರ್ ಹಾಗೂ ಸರ್ವೀಸ್ ವಲಯದಲ್ಲಿ 'ಗ್ಲಾಸ್ ಸೀಲಿಂಗ್'ನಿಂದಾಗಿ ಉನ್ನತ ಹುದ್ದೆಗಳಿಗೆ ಮಹಿಳೆಯರು ಏರದಂತೆ ತಡೆಯಲಾಗುತ್ತದೆ.

11. ಮಹಿಳೆಯರು ಸಾಂಸಾರಿಕ ಜವಾಬ್ದಾರಿ, ಕುಟುಂಬ, ಮದುವೆ, ಮಕ್ಕಳು ಇಂತಹ ಜವಾಬ್ದಾರಿಗಳಿಂದ ಇನ್ನಷ್ಟು ಒತ್ತಡಕ್ಕೊಳಗಾಗುವುದರಿಂದ ಕಾರ್ಪೊರೇಟ್ ವಲಯದಲ್ಲಿಯೇ ಬದುಕಿ ಉಳಿಯಲು ಹರಸಾಹಸ ಮಾಡುತ್ತಾರೆ.

ಈ ಮೇಲಿನ ಉದ್ಯೋಗಗಳಲ್ಲದೇ ಟೆಲಿಕಾನ್‌ಫರೆನ್ಸಿಂಗ್, ಟೆಲಿಮಾರ್ಕೆಂಟಿಂಗ್‌ನಲ್ಲಿ ಕೂಡಾ ಮಹಿಳೆಯರು ಉದ್ಯೋಗದ ಅವಕಾಶಗಳನ್ನು ಹೊಂದುತ್ತಿರುವುದನ್ನು ನಾವು ಗಮನಿಸಬಹುದಾಗಿದೆ. ಟೆಲಿಮಾರ್ಕೆಟಿಂಗ್ ಉದ್ಯೋಗ ಧ್ವನಿ ಕೇಂದ್ರೀತವಾಗಿರುವುದರಿಂದ ಇಲ್ಲಿ ಕೂಡಾ ಹೆಚ್ಚು ಮಹಿಳೆಯರನ್ನು ಉದ್ಯೋಗಕ್ಕೆ ಒಳಗೊಳ್ಳಲಾಗುತ್ತದೆ. ಆದರೆ ಬಿಡುವಿಲ್ಲದೇ ಸತತವಾಗಿ ಮಾರಾಟವಾಗುವ ಸರಕು, ಉತ್ಪಾದನೆಗಳ ಬಗ್ಗೆ ಮಾಹಿತಿ ಪ್ರಚಾರ ಫೋನ್‌ಗಳಲ್ಲಿ ನಿರಂತರವಾಗಿ ನೀಡಬೇಕಾಗಿರುವುದರಿಂದ ದೀರ್ಘಕಾಲ ಈ ಕೆಲಸದಲ್ಲಿ ಮಹಿಳೆಯರು ಮುಂದುವರಿಯುವುದು ಕಷ್ಟವಾಗುತ್ತದೆ. ಫಾರ್ಮಸ್ಯುಟಿಕಲ್ ಕಂಪನಿಗಳಲ್ಲಿ ಕೂಡಾ ಮಹಿಳೆಯರು ಉದ್ಯೋಗದ ಅವಕಾಶಗಳನ್ನು ಹೊಂದುತ್ತಿದ್ದಾರೆ. ಸ್ವತಃ ಔಷಧ ಅಂಗಡಿಗಳನ್ನು ತೆರೆದು ನಡೆಸಿಕೊಂಡು ಹೋಗುತ್ತಿರುವ ಮಹಿಳೆಯರ ಸಂಖ್ಯೆಯೂ ಹೆಚ್ಚಾಗುತ್ತಿದೆ. ಫ್ಯಾಶನ್ ಡಿಸೈನರ್ ಆಗಿ ಕೂಡಾ ಮಹಿಳೆಯರು ಉದ್ಯೋಗರಂಗವನ್ನು ಪ್ರವೇಶಿಸುತ್ತಿದ್ದಾರೆ.

ಸಾಮೂಹಿಕವಾಗಿ ಹೀಗೆ ಮಾಹಿತಿ ತಂತ್ರಜ್ಞಾನದಲ್ಲಿ ಕಾಣಿಸಿಕೊಳ್ಳುತ್ತಿರುವ ಮಹಿಳೆಯರನ್ನು ಹೊರತು ಪಡಿಸಿದರೆ ಸರ್ಕಾರಿ ಉದ್ಯೋಗಗಳಲ್ಲಿ ತೊಡಗಿಸಿಕೊಳ್ಳುತ್ತಿರುವ ಮಧ್ಯಮ ವರ್ಗದ ಮಹಿಳೆಯರೂ ಕಾಣಸಿಗುತ್ತಾರೆ. ಕರ್ನಾಟಕದಲ್ಲಿ ಬಿ.ಟಿ.ಎಸ್. ಹಾಗೂ ಸಿಟಿಬಸ್‌ಗಳಲ್ಲಿ ಕೆಲಸ ಮಾಡುವ ಯುವತಿಯರ ಸಂಖ್ಯೆ ಹಲವಾರು ಸಾವಿರ ಇದೆ. ಗುಲ್ಬರ್ಗ, ರಾಯಚೂರ್, ಗದಗ್ ಕಡೆಗಳಲ್ಲಿ 2010ನೇ ಜನವರಿ 30ರಂದು 800 ಜನ ಮಹಿಳೆಯರು ಬಸ್ ನಿರ್ವಾಹಕರಾಗಿ ನೇಮಕವಾದರು. ಸರ್ಕಾರಿ ಕೆಲಸ ಎನ್ನುವ ಕಾರಣಕ್ಕಾಗಿ ಪಿ.ಯು. ಹಾಗೂ ಡಿಗ್ರಿ ಮುಗಿಸಿಕೊಂಡ ಮಹಿಳೆಯರು ಈ ಉದ್ಯೋಗದಲ್ಲಿ ಹೆಚ್ಚು ಹೆಚ್ಚಾಗಿ ಅವಕಾಶಗಳನ್ನು ಪಡೆಯುತ್ತಿದ್ದಾರೆ. ಇವರೂ ಕೂಡಾ ಬೇರೆ ಬೇರೆ ಪಾಳಿಯಲ್ಲಿ ಕೆಲಸ ಮಾಡುತ್ತಾರೆ. 'ರಾತ್ರಿ ಪಾಳಿ' ಇಲ್ಲೂ ಕೂಡಾ ಮಹಿಳೆಯರ ಸುರಕ್ಷತೆಯ ಪ್ರಶ್ನೆಯನ್ನು ಎತ್ತಿದೆ. ಮಹಿಳಾ ಉದ್ಯೋಗಿಗಳಲ್ಲಿ ಆತಂಕಗಳನ್ನು ಮೂಡಿಸಿದೆ.

ಕುಡಿದು ಬಸ್‌ಗಳಲ್ಲಿ ಪ್ರಯಾಣ ಮಾಡುವ, ಮೈಮೇಲೆ ಬೀಳಲು ಪ್ರಯತ್ನಿಸುವ ಪುರುಷ ಪ್ರಯಾಣಿಕರನ್ನು ನಿಭಾಯಿಸುವಂತಹ ಎದೆಗಾರಿಕೆ ಬೇಕು ಎಂಬುದು ಈ ಮಹಿಳೆಯರ ಅಭಿಪ್ರಾಯ. ಪುರುಷರು ಮಾಡುವ ಅನುಚಿತ ಟೀಕೆಗಳನ್ನು ಅವರಿಗಲ್ಲ ಎನ್ನುವಂತೆ ತಾನು ಸಹಿಸಬೇಕಾಗುತ್ತದೆ ಎನ್ನುವುದು ಇವರ ಅಳಲು. ಬಸ್‌ಗಳಲ್ಲಿ ನಿರ್ವಾಹಕರಾಗಿ ಕೆಲಸ ಮಾಡುವ ಮಹಿಳೆಯರಿಗೆ ರಾತ್ರಿ ಮನೆ ತಲುಪುವುದು ಅತ್ಯಂತ ದೊಡ್ಡ ಸಮಸ್ಯೆಯಾಗಿದೆ. ಇವರ ಕೆಲಸದ ಬಗ್ಗೆ ಕುಟುಂಬದವರಿಗೇನೂ ಅಷ್ಟು ಸಮಾಧಾನವಿರುವುದಿಲ್ಲ. ಆದರೂ ಸರ್ಕಾರಿ ಕೆಲಸ ಎಂಬ ಕಾರಣಕ್ಕೆ ಸುಮ್ಮನಿರುತ್ತಾರೆ ಎಂದು ಅನೇಕ ಉದ್ಯೋಗಿಗಳು ಅಭಿಪ್ರಾಯ ಪಡುತ್ತಾರೆ. ಮಕ್ಕಳನ್ನು ನಿಭಾಯಿಸುವಲ್ಲಿ ಇವರು ಅತ್ಯಂತ ಕಷ್ಟಕರವಾದ ಪರಿಸ್ಥಿತಿಯನ್ನು ಎದುರಿಸುತ್ತಾರೆ.

ಇಲ್ಲಿಯ ಮಹಿಳಾ ಉದ್ಯೋಗಿಯು ತಾಯಿ ಮಗುವನ್ನು ಬಸ್‌ಸ್ಟ್ಯಾಂಡಿಗೆ ಕರೆದುಕೊಂಡು ಬಂದು ಚಿಕ್ಕ ಮಗುವಿಗೆ ಹಾಲು ಕುಡಿಸಿಕೊಂಡು ಹೋಗುವಂತಹ ಪ್ರಸಂಗಗಳೂ ಇವೆ. ರಾತ್ರಿ 10 ಘಂಟೆಗೆ ಕೆಲಸ ಮುಗಿಸುವ ಮಹಿಳಾ ಉದ್ಯೋಗಿ ಬೆಳಿಗ್ಗೆ 5 ಘಂಟೆಗೆ ಕೆಲಸಕ್ಕೆ ಹಾಜರಾಗಬೇಕಾಗುತ್ತದೆ. ಹಾಗಾಗಿ ಆಕೆ ದೂರದ ಸ್ಥಳದವಳಾದರೆ ಬಸ್ಸಿನಲ್ಲಿಯೇ ಉಳಿದು ಬೆಳಿಗ್ಗೆ 5 ಘಂಟೆಗೆ ಕರ್ತವ್ಯ ನಿರತಳಾಗಬೇಕಾಗುತ್ತದೆ. ಉಳಿದುಕೊಳ್ಳುವ ಸಮಸ್ಯೆ, ಶೌಚಾಲಯ ಸಮಸ್ಯೆ ಹೀಗೆ ಹತ್ತು ಹಲವಾರು ಸಮಸ್ಯೆಗಳಲ್ಲಿ ಇಲ್ಲಿನ ಉದ್ಯೋಗಿಗಳು ಸವಾಲುಗಳನ್ನು ಎದುರಿಸುತ್ತಿದ್ದಾರೆ. ಕುಟುಂಬದ ಸಹಕಾರ ಸಿಕ್ಕಿದ ಹಲವಾರು ಮಹಿಳಾ ನಿರ್ವಾಹಕರು ರಾಜೀನಾಮೆ ನೀಡಿದ ಪ್ರಸಂಗಗಳೂ ಕೂಡ ಇವೆ.

ಕೆ. ನಿಂಗಮ್ಮ 2005ರ ಮಾರ್ಚ್ 8ರಂದು ಕೆ.ಎಸ್.ಆರ್.ಟಿ.ಸಿ. ಬಸ್‌ನಲ್ಲಿ ಮೈಸೂರಿನಲ್ಲಿ ಪ್ರಥಮ ಮಹಿಳಾ ಬಸ್ ಚಾಲಕರಾಗಿ ನೇಮಕಗೊಂಡರು. ಬಸ್‌ಚಾಲಕರಾಗಿ ನೇಮಕಗೊಳ್ಳಲು ತುಂಬ ಶ್ರಮಿಸಿದ್ದಾರೆ. ಈಕೆ ಹೇಳುವಂತೆ ಹೆಚ್ಚಿನ ಪ್ರಮಾಣದಲ್ಲಿ ಮಹಿಳಾ ಬಸ್ ಚಾಲಕರು ಇನ್ನೂ ನೇಮಕಗೊಂಡಿಲ್ಲ.

ಪೊಲೀಸ್ ಕಾನ್ಸ್‌ಟೇಬಲ್ಸ್ ಹಾಗೂ ಸಬ್ ಇನ್ಸ್‌ಪೆಕ್ಟರ್‌ಗಳು ಆಗಿ ಕೂಡಾ ಮಹಿಳೆಯರು ಉದ್ಯೋಗಾವಕಾಶಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಪಡೆಯುತ್ತಿದ್ದಾರೆ. ಸಬ್ ಇನ್ಸ್‌ಪೆಕ್ಟರ್ ಆಗಿ ಸ್ವತಂತ್ರವಾಗಿ ಪೊಲೀಸ್ ಸ್ಟೇಷನ್ ನಿಭಾಯಿಸುವ ಮಹಿಳಾ ಉದ್ಯೋಗಿಗಳೂ ಇದ್ದಾರೆ. ಇಲ್ಲೂ ಕೂಡಾ ಲಿಂಗಾಧಾರಿತ ತಾರತಮ್ಯಗಳು ಕಂಡುಬರುತ್ತವೆ. ಭಾಷೆಯನ್ನು ಭಿನ್ನ ರೀತಿಯಲ್ಲಿ ಬಳಸಲು, ಅಪರಾಧಗಳನ್ನು ಕಠೋರತೆಯಿಂದ ನಿರ್ವಹಿಸಲು ಹೊಸಕಲಿಕೆ ಮಾಡಬೇಕಾದ ಈ ಮಹಿಳೆಯರು – ಪುರುಷ ಪ್ರಧಾನ ವ್ಯವಸ್ಥೆಯಿಂದ ಹೊರತಾದ ಸೂಕ್ಷ್ಮಗಳನ್ನು, ಲಿಂಗಾಧಾರಿತ ಸಂವೇದನೆಯನ್ನು ಮಹಿಳೆಯರ ಪರವಾಗಿ ಹೊಂದಬಲ್ಲರೇ ಎಂಬುದು ಅಧ್ಯಯನ ನಡೆಸಬೇಕಾದ ವಿಚಾರವಾಗಿದೆ. ಆದಾಗ್ಯೂ ಈ ರಂಗದಲ್ಲಿ ಮಹಿಳೆಯರು ಹೆಚ್ಚಾಗಿ ಕಾಣಿಸಿಕೊಳ್ಳುವುದರಿಂದ ಸಾಮಾನ್ಯ ಮಹಿಳೆಯರಿಗೆ ಪೊಲೀಸ್ ಸ್ಟೇಷನ್ ಭಯ ಹುಟ್ಟಿಸದೇ ಇರುವ ವಾತಾವರಣ ನಿರ್ಮಾಣವಾಗಬಹುದು. ಮಹಿಳೆಯರ ಮೇಲಿನ ಹಿಂಸೆಯ ಪ್ರಮಾಣ ಹೆಚ್ಚಾಗುತ್ತಿರುವ ಈ ಸಂದರ್ಭದಲ್ಲಿ ಮಹಿಳಾ ಪೊಲೀಸ್ ಠಾಣೆಗಳು ಹೆಚ್ಚಾಗುತ್ತಿರುವುದಲ್ಲದೇ ಮಹಿಳೆಯರ ನೇಮಕಾತಿಯೂ ಹೆಚ್ಚಾಗುತ್ತಿದೆ.

ಪೆಟ್ರೋಲ್ ಬಂಕ್‌ಗಳಲ್ಲಿ ಕೂಡಾ ಇಂದು ಮಹಿಳಾ ಉದ್ಯೋಗಿಗಳು ಕಾಣಿಸತೊಡಗಿದ್ದಾರೆ. ಇವರು ಸಹಾಯಕರಾಗಿ ಇಲ್ಲಿ ಕೆಲಸ ಮಾಡುತ್ತಾರೆ. ದೀರ್ಘಾವದಿಯ ಕೆಲಸ, ಸಂಬಳದಲ್ಲಿ ತಾರತಮ್ಯ, ಪೆಟ್ರೋಲ್ ತುಂಬಿಸಲು ಬರುವ ಪುರುಷರ ಅನುಚಿತ ವರ್ತನೆ, ಕೀಟಲೆ, ಟೀಕೆಗಳು ಇವರ ಅನುಭವಗಳಾಗಿವೆ. ಅತಿ ಹೆಚ್ಚಿನ ಕಾಲ ಸೇವೆ ಮಾಡಿದ ಮಹಿಳೆಯರು ಇಲ್ಲಿ ಸೂಪರ್‌ವೈಸರ್ ಆಗಿ ನೇಮಕಗೊಂಡಿರುವ ಉದಾಹರಣೆಗಳು ಕೂಡಾ ಇವೆ.

.....ಪ್ರಿಯಾ ನಾನು
ಕ್ಷಮಯಾ ಧರಿತ್ರಿಯಾಗಿ
ಭೋಜ್ಯೇಶು ಮಾತೆಯಾಗಿ
ಶಯನೇಶು ರಂಭೆಯಾಗಿ
ಇನ್ನು ಏನೇನೋ ಆಗಿ
ನಿನ್ನಲ್ಲೇ ಕರಗುವುದ ಒಲ್ಲೆ

(ಮುಕ್ತಾಯಕ್ಕ. 'ನಾನು ನಾನೇ ಆಗಿ ಬಂದಾಗ', ಪ್ರಣಯಿನಿ, ಬೆಂಗಳೂರು ಕರ್ನಾಟಕ ಲೇಖಕಿಯರ ಸಂಘ 1996 ಪುಟ-92)

ಹೀಗಿ ಅತ್ಯಂತ ಸ್ವಾಭಿಮಾನಿಗಳಾಗಿರುವ, ಕರ್ತೃತ್ವ ಶೀಲರಾಗಿರುವ ಮಹಿಳೆಯರು ಸ್ವ-ಉದ್ಯೋಗ, ಮಹಿಳಾ ಉದ್ಯಮಶೀಲತೆಗೆ ಗಮನ ಕೊಡುತ್ತಿರುವುದರಿಂದ ಇಲ್ಲಿ ಕೂಡಾ ಮಹಿಳೆಯರು ಉದ್ಯೋಗದ ಅವಕಾಶಗಳನ್ನು ಹೊಂದುತ್ತಿದ್ದಾರೆ. ಎಂ.ಬಿ.ಎ. ಮಾಡಿದಂತಹ ಮಹಿಳೆಯರು ಇಂದು ವ್ಯವಹಾರಗಳಲ್ಲಿ ಬಿಸಿನೆಸ್ ಎಕ್ಸಿಕ್ಯುಟಿವ್ಸ್ ಆಗತೊಡಗಿದ್ದಾರೆ. ಸ್ವಲ್ಪ ವಿದ್ಯಾಭ್ಯಾಸ ಮಾಡಿದ, ಅಕ್ಷರಾಭ್ಯಾಸ ಮಾಡಿದ, ಭಾಷೆಯ ಚತುರತೆ ಬಲ್ಲ ವಿವಿಧಸ್ತರದ ಮಹಿಳೆಯರು ವಿವಿಧ ಕ್ಷೇತ್ರಗಳಲ್ಲಿ ತಮ್ಮ ಸ್ವ-ಸಾಮರ್ಥ್ಯ, ಕೌಶಲದಿಂದ ವ್ಯಾಪಾರೋದ್ಯಮಕ್ಕೆ ತೊಡಗಿ ಕೊಂಡಿದ್ದಾರೆ. 'ಸೌಂದರ್ಯ'ಕ್ಕೆ ಸಂಬಂಧಪಟ್ಟಂತೆ ಮಸಾಜ್, ಫಿಟ್‌ನೆಸ್, ಆರೋಗ್ಯ ಕ್ಲಬ್‌ಗಳಲ್ಲಿ, ಸ್ಲಿಮಿಂಗ್ ಕ್ಲಿನಿಕ್ಸ್, ಟಿವಿ, ಸಿನಿಮಾಗಳಲ್ಲಿ ನಟಿಯರಿಗೆ ಬ್ಯೂಟೀಶಿಯನ್, ಹೇರ್ ಡ್ರೆಸರ್ಸ್ ಆಗಿ ಕೂಡಾ ಮಹಿಳೆಯರು ಇಂದು ಉದ್ಯೋಗಗಳನ್ನು ಮಾಡುತ್ತಿದ್ದಾರೆ. ತಮ್ಮದೇ ಆದ ಬ್ಯೂಟಿ ಪಾರ್ಲರ್ಸ್ ಇಟ್ಟುಕೊಂಡು ಅದಾಯಗಳಿಸುತ್ತಿದ್ದಾರೆ. ಸಮಾಜದಲ್ಲಿ ಹಾಗೂ ಇತರೇ ಉದ್ಯೋಗಗಳಲ್ಲಿ ಇರುವ ಲಿಂಗಾಧಾರಿತ ತಾರತಮ್ಯ, ಸಮಯದ ಕೊರತೆ, ಕುಟುಂಬದ ಜವಾಬ್ದಾರಿ, ಕುಟುಂಬ-ಉದ್ಯೋಗ ಎರಡನ್ನೂ ಸಮನ್ವಯಗೊಳಿಸಲು ಸಾಧ್ಯತೆಗಳನ್ನು ಹುಡುಕುತ್ತಾ ತಾವೇ ನಡೆಸಬಹುದಾದ ಉದ್ಯಮಗಳಿಗೆ ಮಹಿಳೆಯರು ತೆರೆದುಕೊಳ್ಳತೊಡಗಿದ್ದಾರೆ. ಕಾರ್ಪೊರೇಟ್ ವಲಯದ 'ಗ್ಲಾಸ್ ಸೀಲಿಂಗ್' ನಂತಹ ಲಿಂಗಾಧಾರಿತ ಪೂರ್ವಗ್ರಹಗಳಿಂದ ಬೇಸತ್ತ ಸಂಪನ್ಮೂಲ ಉಳ್ಳ ಮಹಿಳೆಯರೂ ಕೂಡಾ ತಮ್ಮದೇ ಆದ ಕಂಪನಿಗಳನ್ನು ಪ್ರಾರಂಭಿಸುವ ಯೋಜನೆಗಳನ್ನು ಮಾಡತೊಡಗಿದ್ದಾರೆ.

ವೈಯಕ್ತಿಕ ಸ್ವಾತಂತ್ರ್ಯ, ಭದ್ರತೆ, ತೃಪ್ತಿ, ಸ್ಥಳ, ಸಂಚಾರ ಹೀಗೆ ಅನೇಕ ಕಾರಣಗಳಿಂದಾಗಿ ಹಲವಾರು ಆರ್ಥಿಕ ಸ್ತರಗಳ ಮಹಿಳೆಯರು ಸ್ವಂತ ಉದ್ದಿಮೆಯತ್ತ ಹೆಜ್ಜೆ ಹಾಕುತ್ತಿದ್ದಾರೆ. ಇಂತಹ ಉದ್ದಿಮೆಗಳಲ್ಲಿ ಭಿನ್ನವಾದ ನಾಯಕತ್ವವನ್ನು ತೋರಿಸುವವರಿದ್ದಾರೆ, ಕೆಲಸ ಮಾಡುವವರ ಜೊತೆ ವಿಶ್ವಾಸಾರ್ಹವಾದ ಸಂಬಂಧಗಳನ್ನು ರೂಢಿಸಿಕೊಂಡವರಿದ್ದಾರೆ. ಸ್ವ-ಉದ್ಯೋಗಗಳಲ್ಲಿ ತೊಡಗಿರುವ ಮಹಿಳೆಯರು ಹೂಡುವ ಹಣಕ್ಕಾಗಿ ತಮ್ಮ ಉಳಿತಾಯದ ಮೇಲೆ, ಕುಟುಂಬದ-ಸ್ನೇಹಿತರ ಸಾಲದ ಮೇಲೆ, ಕ್ರೆಡಿಟ್ ಕಾರ್ಡ್‌ಗಳ ಮೇಲೆ ಸಾಲ ಸೌಲಭ್ಯಹೊಂದಲು ಪ್ರಯತ್ನಿಸುತ್ತಾರೆ. ಪುರುಷ ಪ್ರಧಾನ ವ್ಯವಸ್ಥೆಯ ಒಳಗಡೆಯೇ ಮಹಿಳಾ ಉದ್ಯಮಿಗಳು ವ್ಯವಹರಿಸಬೇಕಾಗಿದ್ದರಿಂದ ಮಾಹಿತಿಯ ಕೊರತೆ, ಸಂಪರ್ಕಗಳ ಕೊರತೆ, ಮಾರುಕಟ್ಟೆಯ ಸಮಸ್ಯೆ ಮುಖ್ಯವಾಗಿ ಹಣದ ಕೊರತೆಯ ಸಮಸ್ಯೆಗಳನ್ನು ಇವರು ಎದುರಿಸುತ್ತಿರುತ್ತಾರೆ. ಬಯೋಟೆಕ್ನಾಲಜಿ, ಫಾರ್ಮಸ್ಯುಟಿಕಲ್ಸ್ ಗಳಲ್ಲಿ ಕೂಡಾ ಮಹಿಳೆಯರೇ ನಾಯಕತ್ವ ವಹಿಸಿದ, ಅವರೇ ಆರಂಭಿಸಿದ ಕಂಪನಿಗಳನ್ನು ಕೂಡಾ ನಾವು ಗಮನಿಸುತ್ತೇವೆ. ಕೆಳವರ್ಗದ, ಕೆಳಮಧ್ಯಮ ವರ್ಗದ ಮಹಿಳೆಯರು ಯಾವ ರೀತಿಯ ಉದ್ಯಮಗಳಲ್ಲಿ ತೊಡಗಿ ದ್ದಾರೆಂದು ಕಣ್ಣು ಹಾಯಿಸಿದರೆ ಅವರಲ್ಲಿ ಕೌಶಲ್ಯ, ವಿದ್ಯಾಭ್ಯಾಸದ ಕೊರತೆ ಕಂಡುಬರುತ್ತದೆ. ಉದ್ಯಮಕ್ಕೆ ಬೇಕಾದ ಹಣ ಹೊಂದಿಸುವುದೂ ಇವರಿಗೆ ಕಷ್ಟವಾಗಿರುತ್ತದೆ. ಯಾವುದೇ ಸಂಸ್ಥೆಯ ಬೆಂಬಲವಿಲ್ಲದಿರುವುದು ಇನ್ನೊಂದು ಕೊರತೆಯಾಗಿರುತ್ತದೆ. ಈ ಕೊರತೆಯನ್ನು ಇಂದು ಹಳ್ಳಿ-ಹಳ್ಳಿಗಳಲ್ಲಿ ನಗರಗಳಲ್ಲಿ ತುಂಬುತ್ತಿರುವುದು ಸ್ವ-ಸಹಾಯ ಗುಂಪುಗಳು. ಈ ಗುಂಪುಗಳು ಸಾಮಾನ್ಯವಾಗಿ ಕೆಳವರ್ಗ ಅಥವಾ ಕೆಳಮಧ್ಯಮ ವರ್ಗದ ಸದಸ್ಯರನ್ನು ಒಳಗೊಂಡಿರುತ್ತವೆ. ಮಹಿಳೆಯ ಉದ್ಯಮಶೀಲತೆ ಯನ್ನು ಎತ್ತಿ ಹಿಡಿಯಲು ಇವು ಸಾಂಘಿಕವಾದ ಪ್ರಯತ್ನಗಳನ್ನು ಮಾಡುತ್ತಿವೆ.



2007ರಿಂದ ಕೇರಳದ ಕೊಚ್ಚಿಯಲ್ಲಿ ಕೆಲವು ಆಟೋಸ್ಟ್ಯಾಂಡ್ ಗಳನ್ನು ಮಹಿಳೆಯರೇ ಸಂಪೂರ್ಣವಾಗಿ ನಿರ್ವಹಿಸುತ್ತಿದ್ದಾರೆ. ಸ್ವ-ಸಹಾಯ, ಸ್ತ್ರೀ-ಶಕ್ತಿ ಸಂಘಟನೆ ಇದಕ್ಕೆ ಬೆನ್ನೆಲುಬಾಗಿ ನಿಂತ ಉದಾಹರಣೆ ಇದೆ. ಕೊಚ್ಚಿನ್‌ನ ತ್ರಿಕ್ಕಕ್ರ ಎಂಬ ಸಣ್ಣ ಹಳ್ಳಿಯಲ್ಲಿ 12 ಮಂದಿ ಮಹಿಳೆಯರು ಆಟೋ ಓಡಿಸುತ್ತಾರೆ. ಈ ಯೋಜನೆಯ ಮುಂದಾಳತ್ವ ವಹಿಸಿದ್ದು ಆ ಹಳ್ಳಿಯ ಪಂಚಾಯಿತಿಯೇ. ಕಡಿಮೆ ಆದಾಯವುಳ್ಳ ಮಹಿಳೆಯರ ಕುಟುಂಬದ ಆದಾಯವನ್ನು ಹೆಚ್ಚಿಸಲು, ಹಾಗೂ ಹೆಂಗಸರ ಸ್ವಾವಲಂಬಿ ಬದುಕಿಗೋಸ್ಕರ ಈ ಯೋಜನೆಯನ್ನು ಹಮ್ಮಿಕೊಳ್ಳಲಾಗಿತ್ತು.

ಗ್ರಾಮೀಣ ಮಹಿಳೆಯರ ಉದ್ಯೋಗದ ಅವಕಾಶಗಳನ್ನು ಹೆಚ್ಚು ಮಾಡಲು ಗುಜರಾತಿನ ಸೇವಾ ಬ್ಯಾಂಕ್ ಹಲವಾರು ಮಹಿಳೆಯರಿಗೆ ಸಾಲ ಸೌಲಭ್ಯಗಳನ್ನು ಒದಗಿಸುತ್ತಿದೆ. ಸೇವಾ ಸಂಸ್ಥೆಯು ತಂತ್ರಜ್ಞಾನ ಬಳಸಿ ಗ್ರಾಮೀಣ ಮಹಿಳೆಯರಿಗೆ 'ಮಾರುಕಟ್ಟೆ'ಯ ಬಗ್ಗೆ ತರಬೇತಿ ನೀಡುತ್ತಿದೆ. ಅವರ ಆರೋಗ್ಯ ಹಾಗೂ ಮಕ್ಕಳ ಪಾಲನೆಗೆ ವಿಶೇಷ ಸೌಲಭ್ಯಗಳನ್ನು ನೀಡುತ್ತದೆ. ಸಾಲದ ಮೇಲೆ ವಿಮೆ ಮಾಡಿಸಲಾಗುತ್ತಿದೆ. ಧಾರವಾಡ, ಗದಗ್, ಹಾವೇರಿಯಲ್ಲಿರುವ ಮಲಪ್ರಭಾ ಗ್ರಾಮೀಣ ಬ್ಯಾಂಕ್ ಸ್ವ-ಸಹಾಯ ಗುಂಪುಗಳ ಮಹಿಳೆಯರಿಗೆ ಸಾಲ ನೀಡಿ ವ್ಯವಸಾಯದ ಭೂಮಿಯನ್ನು ಬಾಡಿಗೆಗೆ ತೆಗೆದುಕೊಳ್ಳಲು ಮಹಿಳೆಯರಿಗೆ ಸಹಾಯ ಮಾಡುತ್ತಿದೆ. ಇಲ್ಲಿ ಆಗಸ್ಟ್ ತಿಂಗಳನ್ನು ಸ್ವ-ಸಹಾಯ ಗುಂಪುಗಳ 'ಲಿಂಕೇಜ್' ತಿಂಗಳೆಂದು ಆಚರಿಸಲಾಗುತ್ತದೆ.

ಪುಣೆಯಲ್ಲಿರುವ ಸಾವಿತ್ರಿ ಮಾರ್ಕೆಟಿಂಗ್ ಸಂಸ್ಥೆಯು ಅಕ್ಷರಾಭ್ಯಾಸವಿರದ ಕೆಳವರ್ಗದ ಮಹಿಳೆಯರ ವಿದ್ಯಾರ್ಹತೆಯನ್ನು ಹೆಚ್ಚಿಸಲು ಪ್ರಯತ್ನಿಸುತ್ತಿದೆ. ಇಲ್ಲಿಯೂ ಕೂಡಾ ಮಾಹಿತಿ ತಂತ್ರಜ್ಞಾನದ ಮೂಲಕ ಅವರ ಉತ್ಪಾದನಾ ವಸ್ತುಗಳಾದ ಬೊಂಬೆ, ಮೇಣದ ಬತ್ತಿ, ಬ್ಯಾಗುಗಳನ್ನು ಮಾರಾಟ ಮಾಡುವ ತಿಳಿವಳಿಕೆ ನೀಡುತ್ತಾರೆ. ಹಾಲು ಉತ್ಪಾದಕ ಸರ್ವಿಸ್ ಸಂಸ್ಥೆ ಕೂಡಾ ಇಲ್ಲಿರುವ ಸ್ವ-ಸಹಾಯ ಗುಂಪುಗಳಲ್ಲಿನ ಮಹಿಳೆಯರಿಗೆ ಹಾಲು ಉತ್ಪಾದನೆಯ ಹೆಚ್ಚಳ, ದನದ ಮೇವು, ವಿಮೆ ಇತ್ಯಾದಿಗಳ ಬಗ್ಗೆ ಮಾಹಿತಿಯ ಜೊತೆಗೆ ತರಬೇತಿಯನ್ನು ನೀಡುತ್ತಲಿವೆ. ಮೂಲಿಕೆಯನ್ನು ಬಳಸಿ ಔಷಧಿ, ಎಣ್ಣೆ ತಯಾರಿಸಿ ಅದನ್ನು ಮಾರಾಟ ಮಾಡುವ ತರಬೇತಿಯನ್ನು ಸಹ ಮಹಿಳೆಯರಿಗೆ ನೀಡಲಾಗುತ್ತಿದೆ. ಹೀಗೆ ಗ್ರಾಮೀಣ ಮಹಿಳೆಯರನ್ನು ಉದ್ಯೋಗದ ಅವಕಾಶಗಳಲ್ಲಿ ತೊಡಗಿಸಿಕೊಳ್ಳುವ ಪ್ರಯತ್ನಗಳು ಹಲವಾರು ಕ್ಷೇತ್ರಗಳಲ್ಲಿ ನಡೆಯುತ್ತಲೇ ಇವೆ. ಸ್ವ-ಸಹಾಯ ಗುಂಪು ಒಂದು ಸಾಮುದಾಯಿಕ ಕಲ್ಪನೆ. ನಗರದಲ್ಲಿನ ಇಂಗ್ಲಿಷ್ ಮಾತನಾಡಬಲ್ಲ, ವಿದ್ಯಾಭ್ಯಾಸ ಹೊಂದಿದ ಮಹಿಳೆಯರು ವ್ಯಕ್ತಿಗತ ನೆಲೆಯಲ್ಲಿ ಸ್ಪರ್ಧಾತ್ಮಕ ರೀತಿಯಲ್ಲಿ ತಮ್ಮ

ಪ್ರತಿಭೆಗನುಗುಣವಾಗಿ ಕಾರ್ಪೊರೇಟ್ ವಲಯಕ್ಕೆ, ಸರ್ಕಾರಿ ನೌಕರಿಗಳಿಗೆ ಇತರ ಖಾಸಗಿವಲಯದ ಕೆಲಸಗಳಿಗೆ ಪ್ರವೇಶಿಸುತ್ತಿದ್ದರೆ ಗ್ರಾಮೀಣ, ಅನಕ್ಷರಸ್ಥ, ಕೆಳವರ್ಗದ ಮಹಿಳೆಯರು ಸ್ವ-ಸಹಾಯ ಸಂಘಗಳ ಸಾಮುದಾಯಿಕ ನಿಟ್ಟಿನಲ್ಲಿ ಹಲವಾರು ಉದ್ಯೋಗಾವಕಾಶಗಳನ್ನು ಕಲ್ಪಿಸಿಕೊಳ್ಳಲು ಹೆಣಗಾಡುತ್ತಿದ್ದಾರೆ. ಮಡಕೆ, ಎಂಬ್ರಾಯಿಡರಿ, ಬಡಗಿ ಕೆಲಸ, ಕುರಿ ಸಾಕಾಣಿಕೆ, ಕೋಳಿ ಸಾಕಾಣಿಕೆಯಂತಹ ಉದ್ಯೋಗಗಳಲ್ಲಿ ತಮ್ಮ ಸ್ವಾವಲಂಬಿ ಬದುಕನ್ನು ರೂಪಿಸಿಕೊಳ್ಳಲು ಗ್ರಾಮೀಣ ಮಹಿಳೆಯರು ಸ್ವ-ಸಹಾಯ ಗುಂಪುಗಳಿಂದ ಸಾಮುದಾಯಿಕವಾಗಿ ಪ್ರಯತ್ನಿಸುತ್ತಿದ್ದಾರೆ.

ಗಾರ್ಮೆಂಟ್ಸ್‌ನಲ್ಲಿ ಇಂದು ಸಾವಿರಾರು ಮಹಿಳೆಯರು ನಗರ ಪ್ರದೇಶಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ವ್ಯವಸಾಯದಲ್ಲಿ ಕೂಲಿ ಮಾಡುವ, ಸಣ್ಣ-ಪುಟ್ಟ ಜಮೀನು ಸಾಗುವಳಿ ಮಾಡುವ ರೈತ ಮಹಿಳೆಯರು ಹೊಸ ಹೊಸ ಯಂತ್ರೋಪಕರಣಗಳ ಹಿನ್ನೆಲೆಯಲ್ಲಿ ಸಾಂಪ್ರದಾಯಿಕವಾದ ಉದ್ಯೋಗವನ್ನು ಕಳೆದುಕೊಂಡು ಮೂಲೆಗುಂಪಾಗುತ್ತಿದ್ದಾರೆ. ಬೀಡಿ ಸುತ್ತುವ, ಊದುಬತ್ತಿ ಹೊಸೆಯುವ ಮಹಿಳೆಯರ ಬದುಕು ಅಸಹನೀಯವಾಗಿ ದಯನೀಯ ಸ್ಥಿತಿಯನ್ನು ತಲುಪುತ್ತಿದ್ದಾರೆ. ಬೀದಿಯಲ್ಲಿ ಕಸ-ಗುಡಿಸುವ ಹೆಚ್ಚು ಮಂದಿ ದಲಿತ ಹೆಣ್ಣುಮಕ್ಕಳು ಸರಿಯಾದ ವೇತನವಿಲ್ಲದೇ ಹೋರಾಡುತ್ತಿದ್ದರೆ, ಹೊಸದಾಗಿ ಬರುವ ಯಂತ್ರೋಪಕರಣಗಳಿಂದ ಕೆಲಸ ಕಳೆದುಕೊಳ್ಳುವ ಅಭದ್ರತೆ ಒಂದುಕಡೆ. ಇವರಿಗೆ ಇಡೀ ಜಾಗತೀಕರಣ ಯಾವ ಉದ್ಯೋಗದ ಅವಕಾಶಗಳನ್ನು ತೆರೆದಿದೆ ಎಂದು ನೋಡಿದರೆ ಜಾಗತೀಕರಣದ ಕರಾಳ ಮುಖ, ರಾಕ್ಷಸ ಬಾಹುಬಂಧನಗಳನ್ನು ನೋಡಬಹುದಾಗಿದೆ. ಹೀಗೆ ಜಾಗತೀಕರಣದ ಆರ್ಥಿಕ ಪ್ರಕ್ರಿಯೆಗಳು ಒಂದು ವರ್ಗಕ್ಕೆ ಉದ್ಯೋಗದ ಅವಕಾಶಗಳನ್ನು ಕಲ್ಪಿಸುತ್ತಿದ್ದರೆ, ಇನ್ನೊಂದು ವರ್ಗದ ಅಂದರೆ ಕೆಳಸ್ತರದ, ರೈತ ಮಹಿಳೆಯರ, ಕಡಿಮೆ ಆದಾಯವುಳ್ಳ ಮಹಿಳೆಯರ ಸ್ವಾವಲಂಬಿ ಬದುಕುಗಳ ಆರ್ಥಿಕತೆಯ ಮೇಲೆ ಬಲವಾದ ಹೊಡೆತ ಹಾಕಿ ಅವರ ಆದಾಯದ ಮೂಲಬೇರುಗಳನ್ನು ಕಿತ್ತುಹಾಕಿ ಮೂಲೆಗುಂಪಾಗಿಸಿರುವುದನ್ನು ಕಾಣಬಹುದು.

ರಾಜಕಾರಣದಲ್ಲಿ ಇಂದು ಸಾವಿರಾರು ಮಹಿಳೆಯರು ಪಂಚಾಯ್ತಿ ಸದಸ್ಯರಾಗಿ, ಛೇರ್‌ಮನ್‌ಗಳಾಗಿ ಹಲವಾರು ಹುದ್ದೆಗಳಲ್ಲಿ ಕಾಣಿಸಿಕೊಳ್ಳುತ್ತಿರುವುದು ಒಂದು ರೀತಿಯ ಉದ್ಯೋಗದ ಅವಕಾಶ ಎಂದು ಭಾವಿಸಬಹುದಾಗಿದೆ. ಆದರೆ ಇಂತಹ ಜವಾಬ್ದಾರಿಗಳನ್ನು ಸ್ವತಂತ್ರವಾಗಿ ನಿರ್ವಹಿಸುವ ಮಟ್ಟಕ್ಕೆ ಮಹಿಳೆಯರಿನ್ನೂ ಬೆಳೆದಿಲ್ಲ. ಪಿತೃಪ್ರಧಾನ ವ್ಯವಸ್ಥೆಯಲ್ಲಿ ಪುರುಷಪ್ರಧಾನ ಮೌಲ್ಯಗಳು ಅವರ ಸುತ್ತ ಹೆಣೆದುಕೊಂಡಿರುವುದರಿಂದ ಸ್ವತಂತ್ರ್ಯ ಉದ್ಯೋಗ, ಸ್ಥಾನಮಾನದ ರೀತಿಯಲ್ಲಿ ಮಹಿಳೆಯರು ಈ ಅವಕಾಶಗಳನ್ನು ಬಳಸಿಕೊಳ್ಳಲು ಸಾಧ್ಯವಾಗುತ್ತಿಲ್ಲ.

ಇತ್ತೀಚೆಗೆ ಕರ್ನಾಟಕ ಹೈಕೋರ್ಟು ಪಬ್‌ಗಳಲ್ಲಿ ಮದ್ಯ ಸರಬರಾಜು ಮಾಡುವ ಹೆಂಗಸರ ನೇಮಕಾತಿಯನ್ನು ಎತ್ತಿ ಹಿಡಿದಿದೆ. 2000 ಮಹಿಳೆಯರು ಇಲ್ಲಿ ಕೆಲಸ ಮಾಡುತ್ತಾರೆ. ಮೂರು ವರ್ಷದ ಹಿಂದೆ 'ದಿ ಕರ್ನಾಟಕ ಲೈವ್ ಬ್ಯಾಂಡ್ ಅಸೋಸಿಯೇಶನ್'ರವರು ರಾಜ್ಯ ಸರ್ಕಾರದ ವಿರುದ್ಧ ದಾವೆ ಹೂಡಿದ್ದರು. ಕಾರಣ 3 ವರ್ಷಗಳ ಹಿಂದೆ ರಾತ್ರಿಯ ನೃತ್ಯ, ಸಂಗೀತ, ಮದ್ಯ ಸರಬರಾಜು ಇಂತಹವುಗಳನ್ನು ನಿಷೇಧ ಮಾಡಿದ್ದರು. ಪುನಃ ಬದಲಾಯಿಸಿದರೇಕೆ? ಈ ಉದ್ಯೋಗದ ಅವಕಾಶಗಳ ಬಗ್ಗೆ ನಾವು ಏನು ಹೇಳುತ್ತೇವೆ? ಸೆಕ್ಸ್ ವರ್ಕರ್ಸ್ ಆಗಬಹುದು, ಲೈವ್ ಬ್ಯಾಂಡ್‌ನ ಮಹಿಳೆಯರಾಗಬಹುದು ಈ ಎಲ್ಲಾ ಉದ್ಯೋಗಗಳ ಬಗ್ಗೆ ನೈತಿಕ ದೃಷ್ಟಿಕೋನದಿಂದ ಒತ್ತಡದ ನಿಷೇಧ ಹೇರುವುದು ಎಷ್ಟು ಸರಿ? ಅಥವಾ ನಿಷೇಧ ಹೇರಿದರೆ ಈ ಮಹಿಳೆಯರಿಗೆ ಪರ್ಯಾಯಗಳೇನು? ಇವರಿಗೆ ಪರ್ಯಾಯ ಬದುಕಿನ ವ್ಯವಸ್ಥೆಗಳಿರದೇ ಇರುವಾಗ ಇವರ ಬದುಕಿನ ಪ್ರಶ್ನೆಯೇನು? ಇಂತಹ ವಿವಾದಾತ್ಮಕ ಉದ್ಯೋಗಗಳು ನಮ್ಮ ನಡುವೆ ಇವೆ. ಸಮಾಜದಲ್ಲಿ ಪ್ರಚಲಿತದಲ್ಲಿರುವ ಹೆಣ್ಣಿನ ಬಗೆಗಿನ ಧೋರಣೆಗಳೂ ಕೂಡಾ ಈ ಉದ್ಯೋಗಗಳ ಸೃಷ್ಟಿಗೆ ಕಾರಣವಾಗಿರುವುದು ಕಂಡುಬರುತ್ತದೆ. ಹಾಗಾಗಿ ಇಂತಹ ವಿವಾದಾತ್ಮಕ ಉದ್ಯೋಗಗಳ ಬಗ್ಗೆ ಚರ್ಚೆ ನಡೆಸುವ, ಇಂತಹ ಉದ್ಯೋಗಸ್ಥ ಮಹಿಳೆಯರೊಂದಿಗೇ ಸಂವಾದ ನಡೆಸುವ ಅಗತ್ಯವೂ ಇದೆ.

ಹೊಸಲಾಚೆಗೆ ನೀನ್ಹೋದರೆ
ಹೊಸಲೀಚೆಗೆ ಬೆಳಕಿಲ್ಲ
ಹೆಸರಾಸೆಗೆ ನೀ ಸೋತರೆ
ಉಸಿರಾಸೆಯೆ ನಮಗಿಲ್ಲ

(ಕುವೆಂಪು, ಮನೆ ಮನೆಯ ತಪಸ್ವಿನಿ)

ಬಹಳ ಹಿಂದೆ ಕುವೆಂಪುರವರು ಈ ಮಾತನ್ನು ಹೇಳಿದ್ದರು. ಇಂದಿನ ಜಾಗತೀಕರಣದ ಆರ್ಥಿಕ ಪ್ರಕ್ರಿಯೆಯ ಹಿನ್ನೆಲೆಯಲ್ಲಿ ಈ ಮಾತುಗಳನ್ನು ನಾವು ಬದಲಿಸಿ ಹೇಳಬೇಕಾಗುತ್ತಿದೆ. ಹೊಸಲೀಚೆಗೆ ಬರದೆ ಹೋದರೆ ಶ್ರಮಿಕ ವರ್ಗದ ಮಹಿಳೆಯರು ಹಸಿವೆಯಿಂದ ನರಳಬೇಕಾಗುತ್ತದೆ. ಹಾಗೂ ಇನ್ನೂ ಹಲವು ಸ್ತರದ ಮಹಿಳೆಯರು ಸ್ವಾಭಿಮಾನವಿಲ್ಲದ ಬದುಕನ್ನು ಬದುಕಬೇಕಾಗುತ್ತದೆ. ಆರ್ಥಿಕ ಒತ್ತಡಗಳು ಮಹಿಳೆಯನ್ನು ಹೊಸಿಲಿನಿಂದ ಆಚೆ ತಳ್ತಾ ಇವೆ. ರಾತ್ರಿ ಪಾಳಿಗಳೂ ಅನಿವಾರ್ಯವಾಗ್ತಾ ಇವೆ. ಹಾಗಾಗಿ ಮನೆ ದೀಪ ಹಚ್ಚೋಕೂ ಆಕೆನೇ ಬರಬೇಕು ಅನ್ನುವಂತಹ ನಿರೀಕ್ಷೆಗಳ ಭಾರವನ್ನು, ಸಾಂಸ್ಕೃತಿಕ ಹೊರೆಯನ್ನು ಮಹಿಳೆ ಹೊರೋದಕ್ಕೆ ಸಾಧ್ಯ ಆಗುವುದಿಲ್ಲ. ಕುಟುಂಬದ ವ್ಯಾಖ್ಯಾನ ಬದಲಾಗಬೇಕು. ಕುಟುಂಬದೊಳಗೆ ಎಲ್ಲರೂ ಎಲ್ಲಾ ಕೆಲಸಗಳನ್ನೂ ಗಂಡು ಹೆಣ್ಣೆನ್ನದೇ ಸಮಾನವಾಗಿ ಹಂಚಿಕೊಳ್ಳುವ ಅಗತ್ಯ ಇದೆ. ಕಾರ್ಪೊರೇಟ್ ಜಗತ್ತಿನ ಸವಾಲುಗಳನ್ನು ಸ್ವೀಕರಿಸೋಕೇ ಮಹಿಳೆಗೆ ಸಾಧ್ಯತೆ ಇದೆ ಎನ್ನುವುದಾದಲ್ಲಿ, ಮನೆಯೊಳಗಿನ ಕೆಲಸದ ಜೊತೆ ರಾಜಿ ಮಾಡಿಕೊಳ್ಳುವುದು ಪುರುಷನಿಗೆ ಸವಾಲಿನ ಕೆಲಸ ಅಲ್ಲ. ಕುಟುಂಬದ ಹೊಣೆ ಇಬ್ಬರದ್ದೂ ಎನ್ನುವ ಒಂದು ತಾತ್ವಿಕ ಚಿಂತನೆ ನಮ್ಮೆಲ್ಲರಲ್ಲಿ ಬೆಳೆಯಬೇಕಾಗಿದೆ.

ಪುರುಷರಿಗೆಂದೇ ಮೀಸಲಾದ ಉದ್ಯೋಗ ಕ್ಷೇತ್ರಗಳಲ್ಲೆಲ್ಲಾ ಸಾಮುದಾಯಿಕ ಹಂತದಲ್ಲಿ ಹಾಗೂ ವ್ಯಕ್ತಿಗತ ಹಂತದಲ್ಲಿ ಮಹಿಳೆ ಕಾಣಿಸಿಕೊಳ್ಳತೊಡಗಿದ್ದಾಳೆ. ಉದ್ಯೋಗದ ಎಲ್ಲಾ ಸವಾಲುಗಳನ್ನೂ ಸ್ವೀಕರಿಸಿ-ಒಂದು ರೀತಿಯ ದ್ವಂದ್ವ ಸ್ಥಿತಿಯಲ್ಲಿ ಬದುಕನ್ನು ನಡೆಸುತ್ತಿದ್ದಾಳೆ. ಉದ್ಯೋಗಕ್ಕೆ ತಕ್ಕಂತೆ ಜೀವನಶೈಲಿ ಬದಲಾಗುತ್ತಿದೆ. ಉಡುಗೆ-ತೊಡುಗೆಗಳು ಬದಲಾಗುತ್ತಿವೆ. ಸಾಮಾಜಿಕ ಸಂದರ್ಭ ಬದಲಾಗುತ್ತಿದೆ. ಹಾಗಾಗಿ ವಿವಿಧ ಸ್ತರದ ಮಹಿಳೆಯರು ವಿವಿಧ ರೀತಿಯ ಜೀವನಕ್ರಮ ರೂಢಿಸಿಕೊಳ್ಳುವುದನ್ನು ಅವರ ಆಯ್ಕೆಗೆ ಬಿಡಬೇಕಾಗುತ್ತದೆ. ಉದ್ಯೋಗದ ಒತ್ತಡದಲ್ಲಿ ಮಹಿಳೆಯರು ಕವಯಿತ್ರಿ ಪ್ರತಿಭಾನಂದ ಕುಮಾರ್ ಬರೆಯುವ ಹಾಗೆ-

ಇವತ್ತು ನಾನು ಅಡಿಗೆ ಮಾಡುವುದಿಲ್ಲ
ಅಥವಾ ಮಗುವಿಗೆ ಮೊಲೆಯೂಡುವುದಿಲ್ಲ
ಹರಿದ ಅಂಗಿ ಹೊಲಿಯುವುದಿಲ್ಲ
ಇವತ್ತು ನಾನು ಸುಮ್ಮನೇ ಕೂರುತ್ತೇನೆ
ಕಿಟಕಿಯಿಂದ ಹೊರಗೆ ನೋಡುತ್ತಾ
ಅಂದರೆ ನಿನಗೇಕೆ ಇಷ್ಟು ಕೋಪ?

(ಆಹಾ ಪುರುಷಾಕಾರಂ, ನೆಲೆಮನೆ ಪ್ರಕಾಶನ 2000, ಪು–30)

ಹೇಳಬಹುದು. ಈ ರೀತಿ ಹೇಳೋಕೆ ಆಕೆ ಸ್ತ್ರೀವಾದೀನೇ ಆಗಬೇಕೆಂದೇನೂ ಇಲ್ಲ. ಕೆಲಸದ – ಉದ್ಯೋಗದ ಒತ್ತಡಗಳು ಆಕೆಯಿಂದ ಈ ಮಾತುಗಳನ್ನು ಹೊರಡಿಸಬಹುದು. ಉದ್ಯೋಗ ಆಕೆಗೆ ಹೊಸತನ್ನು ಕಲಿಸಿದೆ. ಮನೆಯಲ್ಲಿ ಹೀಗೇ ಇರಬೇಕು ಎನ್ನುವ ಧೋರಣೆಯನ್ನು ಬದಲಾಯಿಸಬೇಕಿದೆ. ಡ್ರೆಸ್‌ಕೋಡ್ ಹೆಸರಿನಲ್ಲಿ, ಸಂಸ್ಕೃತಿಯ ಹೆಸರಿನಲ್ಲಿ, ಲಿಂಗಾಧಾರಿತ ತಾರತಮ್ಯದ ಹೆಸರಿನಲ್ಲಿ ಮಹಿಳೆಯರ ಬದುಕು, ಜೀವನಶೈಲಿಯ ಮೇಲೆ ಒತ್ತಡ ಹೇರುವುದನ್ನು ನಿಲ್ಲಿಸಬೇಕಾಗುತ್ತೆ. ಆಕೆಗೆ ಆಕೆಯದೇ ಆದ ಆಯ್ಕೆ, ಸ್ಪೇಸ್‌ಗಳನ್ನು ಕಲ್ಪಿಸಿಕೊಡಲು ಸಮಾಜದ ಪೂರ್ವ ಗ್ರಹಗಳು ಬದಲಾಗಬೇಕು. ಕುಟುಂಬದ 'Bread-winner' ಇಂದು ಮಹಿಳೆ–ಪುರುಷ ಇಬ್ಬರೂ ಆಗಿರುವುದರಿಂದ ಸಮಾನ ನೆಲೆಯ ಬದುಕು ಕೂಡಾ ಆಕೆಯ ಹಕ್ಕು, ಆಯ್ಕೆಯಾಗಿದೆ. ರಾಜಕೀಯವಾಗಿಯಾಗಲೀ, ಸಾಮಾಜಿಕ, ಸಾಂಸ್ಕೃತಿಕ ಒತ್ತಡವಾಗಲೀ ಆಕೆಯನ್ನು ಸಾಂಸ್ಕೃತಿಕ ಪ್ರತಿನಿಧಿಯನ್ನಾಗಿ ನಿಲ್ಲಿಸುವುದು ಕಷ್ಟ ಸಾಧ್ಯ ಹಾಗೂ ನಿಲ್ಲಿಸಬಾರದು. ಉದ್ಯೋಗಸ್ಥ ಮಹಿಳೆಯರ ಅನುಭವಗಳು ಸಾಹಿತ್ಯದ, ವಿಶೇಷವಾಗಿ ಸೃಜನಶೀಲ ಪ್ರಕಾರಗಳಲ್ಲಿ ಮೂಡಿಬಂದರೆ ಅವು ಸಾಂಸ್ಕೃತಿಕ ಕಥನಗಳು ಆಗಬಹುದು ಎಂಬುದನ್ನೂ ನಾವು ಆಶಿಸಬಹುದಾಗಿದೆ.

ಕನಸುಗಳು ಸಾಯುವುದಿಲ್ಲ
ಕಲಿತರೂ ಕೊಳೆತರೂ ಏನಾದರೂ
ಕನಸುಗಳಿಗುಂಟು ಮತ್ತೆ ಚಿಗುರುವ ಶಕ್ತಿ

(ಕಣ್ಣುಗಳಲ್ಲಿ ಕನಸು ತುಂಬಿ, ಧಾರವಾಡ, ಅನನ್ಯ ಪ್ರಕಾಶನ 1993, ಪು–23)

ಹೇಮಾ ಪಟ್ಟಣಶೆಟ್ಟಿಯವರ ಕವನದ ಈ ಸಾಲುಗಳು ಉದ್ಯೋಗಸ್ಥ ಮಹಿಳೆಯರು ಸವಾಲುಗಳನ್ನು ಎದುರಿಸುತ್ತಲೇ ತಮ್ಮ ಕನಸುಗಳಿಗೆ ಚಿಗುರುವ ಶಕ್ತಿಯನ್ನು ತಮ್ಮದೇ ಆದ ಬದುಕನ್ನು ಕಟ್ಟಿಕೊಳ್ಳುವ ಸ್ವಾಭಿಮಾನವನ್ನು ಪಡೆಯಬಲ್ಲರು ಎಂಬುದನ್ನು ಧ್ವನಿಸುತ್ತಿದೆಯಲ್ಲವೆ?

(ಗದಗ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಮಂಡಿತವಾದ ಪ್ರಬಂಧ)

❑

ಈ ಹುಡುಗಿ ಹೀಗೆ
ನಮ್ಮ ಮನ ಮೃತ್ತಿಕೆಯಿಂದ ಸೃಷ್ಟಿಗೊಂಡಿರುವ ಮೃಣ್ಮಯಿ
ನಮ್ಮೆಷ್ಟೊ ದಿನಗಳ ಹಗಲ ಹಂಬಲ ಇರುಳ ಕನವರಿಕೆಯ ಹಣ್ಣು
ಯಾರ ದೇವಿಯ ವರಪ್ರಸಾದವೂ ಅಲ್ಲ ಸಹಜ ಕೃಷಿಯ ಪೈರು
ಇವಳು ಗೆಲ್ಲುತ್ತಾಳೆ ಇವಳು ಗೆಲ್ಲುತ್ತಾಳೆ ಗೆಲ್ಲುತ್ತಾಳೆವಳು

–ಲಲಿತಾಸಿದ್ಧಬಸವಯ್ಯ
('ಹೊಸ ಪದ್ಯ' ದಾರಿನೆಂಟ ಸಂಕಲನದಿಂದ)



ಉತ್ತರ ಕುಮಾರ

ಅವನ ಮಾತೆಂದರೆ ಹಾಗೆ
ಜಾಮೂನು ರಸದಲ್ಲಿ ಮಿದ್ದಿಸಿದ ಹಾಗೆ
ಜೇನಿಗಾದರೂ ಸ್ವಲ್ಪ ಸಿಹಿ ಕಮ್ಮಿಯೇ

ಅವಳು ಉಟ್ಟ ಸೀರೆ ತೊಟ್ಟ ಕುಪ್ಪಸ
ಇಟ್ಟ ತಿಲಕ
ಬಿಚ್ಚಿದ ಮುಡಿ 'ಪಾತಾಳ ಬಿಲಕ್ಕೆ ಬಾಗಿಲ ಹಾಗೆ
ಸಾಕ್ಷಾತ್ ದ್ರೌಪದಿಯೇ
ನಕ್ಕರಂತೂ ರೋಚಕ ಶಿಖರವೇ.

ರವೆ ಹುರಿಯುವಾಗ, ಕುಕ್ಕರಿಡುವಾಗ
ಎಂಜಲು ಬಳಿಯುವಾಗ
ಹತ್ತೆಂಟು ನೆಪಮಾಡಿಕೊಂಡು
ಅಡುಗೆ ಕೋಣೆಯೊಳಗೆ ಹಣಕಿ
ಸೋತು
ಮುಗಿಯದ ಕರೆಯೊಂದನ್ನು ಹಿಡಿದು
ಕೂರುತ್ತಾನೆ ಹಸ್ತಕ್ಕೆ ಭೂಷಣವಾಗಿ
ನಿರೀಕ್ಷೆ ಹಿಡಿದು ತನ್ನ ಕೋಣೆಯಲ್ಲಿ

ಅವಳು ಹಾಲಿಗೆ ಹೆಪ್ಪಿಟ್ಟು ದೀಪವಾರಿಸಿ
ಹೊಳೆವ ಕತ್ತಿ ಝಳಪಿಸುತ್ತಾ
ವೀರಗಚ್ಚೆ ಹಾಕಿ
ಕತ್ತಿಯ ಮೊನೆಯಲ್ಲಿ ಅವನ ಮೀಸೆ ನೇವರಿಸಿ
ಆಕ್ರಮಣಕ್ಕೆ ಕರೆ ಕೊಟ್ಟು
ಅವನ ಕಣ್ಣೊಳಗೆ ಅವಳು
ಆಳಪಾತಾಳ
ಇಳಿಯುತ್ತಾ ಹೋದಾಗ
ಅವನು ಸಿಂಬಳದ ಹುಳುವಾಗಿಬಿಟ್ಟಿದ್ದ.

■ *ಗಿರಿಜಾ ಶಾಸ್ತ್ರಿ*

ಮಹಿಳಾ ಚಳವಳಿ ಮತ್ತು ಅರುಣಾ ಅಸಫ್ ಅಲಿ:

■ *ಡಾ. ಗಿರಿಜಾಶಾಸ್ತ್ರಿ*



ಅರುಣಾ ಅಸಫ್ ಅಲಿಯವರನ್ನು ನಾವು ಸಾಮಾನ್ಯವಾಗಿ ಗುರುತಿಸುವುದು ಅವರ ಕ್ರಾಂತಿಕಾರಿಯಾದ ರಾಷ್ಟ್ರೀಯ ಹೋರಾಟಗಳ ಜೊತೆಗೆ. ಆದರೆ ಅಂದಿನ ಬ್ರಿಟಿಷ್ ಮಹಿಳಾಪರವಾದ ಚಳವಳಿಗಳಿಗೆ ಬಹುಶಃ ನೇರವಾಗಿ ಪ್ರತಿಕ್ರಿಯಿಸಿದ ಕೆಲವೇ ಭಾರತೀಯ ಮಹಿಳೆಯರಲ್ಲಿ ಅವರೂ ಒಬ್ಬರು, ಎನ್ನುವುದು ಅವರು ಅನೇಕ ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಖ್ಯಾತಿಯ ಪತ್ರಿಕೆಗಳಾದ Link, patriot, National Herald, Times of India, Socialist India, Roshani and Indian Journal of Political Science ಮುಂತಾದವುಗಳಲ್ಲಿ ಪ್ರಕಟಿಸಿದ ಅವರ ವೈಚಾರಿಕ ಬರಹಗಳಿಂದ ವ್ಯಕ್ತವಾಗುತ್ತದೆ. ನಮ್ಮ ಭಾರತೀಯ ಆಂಗ್ಲ ಬರಹಗಾರ್ತಿಯರ ಮೇಲೆ ಬ್ರಿಟಿಷ್ ಚಳವಳಿಗಳ ಪ್ರಭಾವ ವಿದ್ದರೂ, ಅದರ ಸೈದ್ಧಾಂತಿಕನೆಲೆಯೊಂದು ಪ್ರಾಪ್ತವಾದದ್ದು ಬಹುಶಃ ಅರುಣಾ ಅಸಫ್ ಅಲಿಯವರಿಗೆ ಮಾತ್ರವೆನಿಸುತ್ತದೆ. ಮೊದಲಘಟ್ಟದ ಭಾರತೀಯ ಆಂಗ್ಲ ಬರಹಗಳಲ್ಲಿ ಕಾಣದ ತಾತ್ವಿಕ ಒಳನೋಟಗಳು ಅನಂತರ ಬಂದ ಬರಹಗಾರ್ತಿ ಯರಲ್ಲಿ ಕಂಡುಬರುವುದರ ಹಿಂದೆ ಇವರ ವೈಚಾರಿಕಬರಹಗಳ ಪ್ರಭಾವವನ್ನು ಗುರುತಿಸಬಹುದಾಗಿದೆ. ಇವರ ಬರಹಗಳು ಹಾಗೂ ಕ್ರಾಂತಿಕಾರಕ ಚಟುವಟಿಕೆಗಳು ಸ್ವಾತಂತ್ರ್ಯಾನಂತರದ ಭಾರತೀಯ ಚಳವಳಿಗಳನ್ನು ಪ್ರಭಾವಿಸಿರಬಹುದಾದ ಸಾಧ್ಯತೆಗಳಿವೆ. ಅಂತಹ ಚಳವಳಿಗಳಿಗೆ ಸೈದ್ಧಾಂತಿಕ ನೆಲೆಯನ್ನು ಇವು ಒದಗಿಸಿರಲೂಬಹುದು ಎಂಬ ಪೂರ್ವ ಕಲ್ಪನೆಯನ್ನು ಇಲ್ಲಿ ಮಂಡಿಸಬಹುದಾಗಿದೆ. ಇದನ್ನು ಅವರ ಮೇಲಿನ ಪತ್ರಿಕೆಗಳಲ್ಲಿನ ಬರಹಗಳಲ್ಲಿ ಕಂಡುಬರುವ ತೀವ್ರವಾದ ಮಹಿಳಾಪರ ಕಾಳಜಿಗಳಲ್ಲಿ ಕಂಡುಕೊಳ್ಳಬಹುದಾಗಿದೆ.


ಅರುಣಾ ಬಂಗಾಳದ ಬ್ರಹ್ಮಸಮಾಜಕ್ಕೆ ಸೇರಿದ ಮನೆಯೊಂದರಲ್ಲಿ 1906ನೆಯ ಇಸವಿಯಲ್ಲಿ ಜನಿಸಿದಳು. ಅವಳ ಪ್ರಾಥಮಿಕ ವಿದ್ಯಾಭ್ಯಾಸವು 'ಸೇಕ್ರೆಡ್ ಹಾರ್ಟ್ ಕಾನ್ವೆಂಟ್' ಹಾಗೂ ಪ್ರಾಟೆಸ್ಟೆಂಟ್ ಶಾಲೆಗಳಲ್ಲಿ ನಡೆಯಿತು. ಅವಳ ವಿದ್ಯಾಭ್ಯಾಸದನಂತರ ಕಲ್ಕತ್ತೆಯ ಗೋಖಲೆ ಸ್ಮಾರಕ ಶಾಲೆಯಲ್ಲಿ ಅಧ್ಯಾಪಕಿಯಾದಳು, ಅಲಹಾಬಾದಿನಲ್ಲಿ ಕಾಂಗ್ರೆಸ್ಸಿನ ಪ್ರಮುಖರಲ್ಲಿ ಒಬ್ಬರಾದ ಅಸಫ್ ಆಲಿಯವರನ್ನು ಸಂಧಿಸಿದುದು ಪ್ರೇಮಕ್ಕೆ ಎಡೆಮಾಡಿಕೊಟ್ಟಿತು. ಅವರ ನಡುವೆ 19 ವರುಷಗಳ ವ್ಯತ್ಯಾಸವಿದ್ದರೂ, ತಂದೆತಾಯಿಗಳ ವಿರೋಧದ ನಡುವೆಯೂ ಅವರಿಬ್ಬರೂ ಮದುವೆಯಾದರು. 1857ರ ಪ್ರಥಮ ಸಂಗ್ರಾಮದ ಬಗ್ಗೆ ಸಾರ್ವಜನಿಕವಾಗಿ ಅವರು ನೀಡಿದ ಕ್ರಾಂತಿಕಾರಿಯಾದ ಭಾಷಣದಿಂದಾಗಿ ಅವರು ಲಾಹೋರಿನ ಜೈಲನ್ನು ಸೇರಬೇಕಾಯಿತು. ಇದರೊಂದಿಗೆ ಅವರ ರಾಷ್ಟ್ರೀಯ ಸ್ವಾತಂತ್ರ್ಯದ ಚಟುವಟಿಕೆಗಳು ಪ್ರಾರಂಭವಾದವು. ಅನಂತರ ಅವರು ತೀವ್ರವಾಗಿ ಸ್ವಾತಂತ್ರ್ಯದ ಚಳವಳಿಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡರು. ಉಪ್ಪಿನ ಸತ್ಯಾಗ್ರಹ ಹಾಗೂ ಆಗಸ್ಟ್ ಕ್ರಾಂತಿಗಳಲ್ಲಿ ಪ್ರಮುಖಪಾತ್ರವನ್ನು ವಹಿಸಿದರು. ಇದರ ಪರಿಣಾಮವಾಗಿ ಸೆರೆಮನೆವಾಸವನ್ನು ಅನುಭವಿಸಬೇಕಾಯಿತು. 82ರ "ಕ್ವಿಟ್ ಇಂಡಿಯಾ ಚಳವಳಿ"ಯಲ್ಲಿ ಭಾಗವಹಿಸಿ ಅನಂತರ ಭೂಗತರಾದರು. ಅಲ್ಲಿ ಅವರು ರೋಗಕ್ಕೆ ತುತ್ತಾಗಿ ಕೃಶವಾಗಿ ಕಡ್ಡಿಯಂತಾದಾಗ ಭೂಗತ ಪ್ರಪಂಚದಿಂದ ಹೊರಬಂದು ತಮ್ಮನ್ನು ತಾವು ಪೊಲೀಸರಿಗೆ ಒಪ್ಪಿಸಿಕೊಂಡು ಅವರ ಸೆರೆಗಾಗಿ ಘೋಷಿಸಲಾಗಿದ್ದ ರೂ. 5,000/-ಗಳನ್ನು ಪಡೆದುಕೊಂಡು ಅದನ್ನು ಹರಿಜನೋದ್ಧಾರಕ್ಕಾಗಿ ಬಳಸಬೇಕೆಂದು ಹೇಳಿದ ಗಾಂಧೀಜಿಯವರ ಮಾತಿಗೂ ಮಣಿಯದೇ, ತಮ್ಮ ತಲೆಯ ಮೇಲೆ ತೂಗುತ್ತಿದ್ದ ವಾರಂಟ್‌ಅನ್ನು ತೆಗೆದ ನಂತರವೇ ಅವರು ಹೊರಬಂದರು. ಅವರು ಭೂಗತರಾಗಿದ್ದ ಕಾಲದಲ್ಲಿಯೇ ಕಾಂಗ್ರೆಸ್ ಮುಖವಾಣಿಯಾದ ಇಂಕ್ವಿಲಾಬ್‌ಅನ್ನು ಸಂಪಾದಿಸಿದರು. ಅದರಲ್ಲಿ ಯುವಕರಿಗೆ ಕ್ರಾಂತಿಯಲ್ಲಿ ಧುಮ್ಮಿಕ್ಕುವಂತೆ ಕರೆಕೊಟ್ಟರು. 1946ರಲ್ಲಿ ಭೂಗತವಾಸದಿಂದ ಹೊರಬಂದರು. ಆದ್ದರಿಂದಲೇ ಅವರನ್ನು ಭಾರತ ಸ್ವಾತಂತ್ರ್ಯ ಚಳವಳಿಯ ಹಿರಿಯ ಮಹಿಳೆ ಎಂದೂ, 42ರ ಕ್ರಾಂತಿಯ ನಾಯಕಿಯೆಂದೂ ಪರಿಗಣಿಸಲಾಗಿದೆ. 1954ರಲ್ಲಿ ರಾಷ್ಟ್ರೀಯ ಮಹಿಳಾ ವೇದಿಕೆಯನ್ನು ನಿರ್ಮಿಸುವಲ್ಲಿ ಎಡಪಂಥೀಯ ಪಕ್ಷಕ್ಕೆ ನೆರವಾದರು. 1992ರಲ್ಲಿ ಅಂತಾರಾಷ್ಟ್ರೀಯ ನೆಹರು ಪ್ರಶಸ್ತಿಯು ಅವರಿಗೆ ದೊರೆಯಿತು.

'ಸ್ತ್ರೀ ಪುರುಷರ ನಡುವೆ ಪ್ರತಿಸ್ಪರ್ಧೆ' ಎಂಬ ಒಂದು ಲೇಖನದಲ್ಲಿ, ಅರುಣಾ ಅಸಫ್ ಅಲಿಯವರು, ರಾಷ್ಟ್ರೀಯ ಚಳವಳಿಯ ದಿನಗಳಲ್ಲಿ 30ನೇ ದಶಕದಿಂದಾಚೆಗೆ ಎಂತಹ ಮಹತ್ವದ ಪಾತ್ರವನ್ನು ಮಹಿಳೆಯರು ವಹಿಸಿದರು ಎಂಬುದರ ಬಗ್ಗೆ ಅಪೂರ್ವವಾದ ಮಾಹಿತಿಯನ್ನು ಕೊಡುತ್ತಾರೆ. ಜೈಲುವಾಸಿಗಳಾದ ಅನೇಕ ಯುವತಿಯರು ಅಲ್ಲಿನ ಸಮಯವನ್ನು ಹರಟೆಗಳಲ್ಲಿ ಕಳೆಯದೆ ಹೇಗೆ ರಾಷ್ಟ್ರೀಯ

ಹುಮ್ಮಸ್ಸನ್ನು ತಮ್ಮ ಸಹ ಜೈಲುವಾಸಿಗಳಲ್ಲಿ ಮೂಡಿಸಲು ದುಡಿದರು ಎನ್ನುವುದನ್ನು ಹೇಳುತ್ತಾರೆ. ಜೈಲು ಅಧಿಕಾರಿಗಳ ದಯೆಯಿಂದ ಜೈಲಿನೊಳಗೆ ಕಳ್ಳತನದಿಂದ ಬರುತ್ತಿದ್ದ ಪತ್ರಿಕೆಗಳನ್ನು, ಇನ್ನಿತರ ರಾಷ್ಟ್ರೀಯ ಸಾಹಿತ್ಯಗಳನ್ನು ಓದುವುದರ ಮೂಲಕ ಮಹಿಳೆಯರು ಪರಸ್ಪರರನ್ನು ಶಿಕ್ಷಿತರನ್ನಾಗಿ (Educate) ಮಾಡುತ್ತಿದ್ದರು ಎಂಬ ವಿವರಗಳು ಈ ಲೇಖನದಲ್ಲಿ ದೊರೆಯುತ್ತವೆ. 1942ರ ಹೊತ್ತಿಗೆ ರಾಷ್ಟ್ರೀಯ ಚಟುವಟಿಕೆಗಳಲ್ಲಿ ಪಾಲುಗೊಂಡ ಮಹಿಳೆಯರ ಸಂಖ್ಯೆಯು ಅಪಾರವಾಗಿ ಬೆಳೆದುದರಿಂದಲೇ, ಶಕ್ತಿಯುತವಾದ ಬ್ರಿಟಿಷರನ್ನು ಹೊರಗೋಡಿಸುವುದರ ಮೂಲಕ ಸ್ವತಂತ್ರ ಭಾರತದ ಸಂವಿಧಾನದಲ್ಲಿ ಮಹಿಳೆಯರು ಪುರುಷರೊಡನೆ ತಮ್ಮ ಸಮಾನತೆಯನ್ನು ಸಾರಲು ಸಾಧ್ಯವಾಯಿತು. ಆದುದರಿಂದ ಭಾರತದಲ್ಲಿ ಮಹಿಳಾಪರ ಚಳವಳಿಯೆಂಬುದು ಪುರುಷರ ಮೇಲಿನ ದ್ವೇಷದಿಂದ, ಅವರಿಬ್ಬರ ನಡುವಿನ ಪೈಪೋಟಿಯಿಂದ ಹುಟ್ಟಿಕೊಂಡಿರದೆ, ಬದಲಾಗಿ ಅದು ಪುರುಷರ ಸಹಕಾರ ಸೌಹಾರ್ದಗಳಿಂದಲೇ ಅವರ ಪ್ರೋತ್ಸಾಹದಿಂದಲೇ ಜನ್ಮತಾಳಿತೆಂದು ಅವರು ಬಗೆಯುತ್ತಾರೆ. ಆದರೆ ಅಂತಹ ಚಳವಳಿಯೊಂದು ಕೇವಲ ಒಂದು ವರ್ಗದ ಮಹಿಳೆಯರನ್ನೇ ಕೇಂದ್ರೀಕರಿಸಿದ್ದುದರ ದೌರ್ಬಲ್ಯಗಳ ಬಗೆಗಿನ ಅರಿವೂ ಅವರಿಗಿದೆ. ಆದುದರಿಂದಲೇ ಅವರು ಮಹಿಳಾಪರ ಚಳವಳಿಯು ಕೇವಲ ಬೂರ್ಜ್ವಾ ಮಹಿಳೆಯರಿಗೆ ಮಾತ್ರ ಸೀಮಿತವಾಗಿರಬಾರದು ಎಂದು ತಮ್ಮ "Bourgeous Feminism is not Enough" ಎನ್ನುವ ತಮ್ಮ ಲೇಖನದಲ್ಲಿ ಚರ್ಚಿಸುತ್ತಾರೆ.

"Women's Movement, Three Scenarios" ಎನ್ನುವ ಅವರ ಲೇಖನವಂತೂ ಬ್ರಿಟಿಷ್ ನೆಲದಲ್ಲಿನ ಮಹಿಳಾ ಹೋರಾಟದ ಇತಿಹಾಸವನ್ನು ವಿವರವಾಗಿ ತಿಳಿಸುತ್ತದೆ. ಮೇರಿ ಎವಾನ್ಸಳು ಇತ್ತೀಚೆಗೆ ಸಂಗ್ರಹಿಸಿದ ವಿಕ್ಟೋರಿಯನ್ ಕಾಲದ ಮಹಿಳಾಪರ ವಾದದ ಸೈದ್ಧಾಂತಿಕ ನೆಲೆಯನ್ನು, ಅದು ರೂಪಿಸಿದ ಅಲ್ಲಿನ ಚಳವಳಿಗಳ ಇತಿಹಾಸವನ್ನು ಆ ಕಾಲದಲ್ಲಿಯೇ ಅರುಣಾ ಅವರು ಗಮನಿಸಿದ್ದರು ಎಂಬುದು ಬಹಳ ಮಹತ್ವದ ಸಂಗತಿಯಾಗುತ್ತದೆ. ಲೇಖನದಲ್ಲಿ, ಮಹಿಳೆಯರ ಸಾಮಾಜಿಕ, ಆರ್ಥಿಕ ಹಾಗೂ ಶೈಕ್ಷಣಿಕ ಹಕ್ಕುಗಳ ಪರವಾದ ಹೋರಾಟದಲ್ಲಿ ಪಾಶ್ಚಾತ್ಯ ಮಹಿಳೆಯರಿಗೆ ದೊರಕದ ಪುರುಷರ ಒತ್ತಾಸೆಯು ಭಾರತೀಯ ಮಹಿಳೆಯರಿಗೆ ದೊರಕಿದುದನ್ನು ಅವರು ಗಮನಿಸುತ್ತಾರೆ. 1918ರಷ್ಟು ಮುಂಚೆಯೇ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಮಹಿಳೆಯರ ರಾಜಕೀಯ ಸಮಾನಹಕ್ಕುಗಳನ್ನು ಅನುಮೋದಿಸಿದ್ದಿತು. ಆದರೆ ಅಂತಹ ಸ್ಥಿತಿಯೊಂದನ್ನು ತಲುಪಲುವುದರ ಹಿಂದೆ ಪಂಡಿತರಮಾಬಾಯಿ, ಸರೋಜಿನಿ ಮುಂತಾದವರ ಪರಿಶ್ರಮಗಳಿದ್ದವು ಎಂಬುದನ್ನು ಒಪ್ಪಿಕೊಂಡರೂ, ಭಾರತದ ಸಂದರ್ಭವು ಅರುಣಾ ಹೇಳುವಂತೆ ಪಾಶ್ಚಾತ್ಯರಷ್ಟು ಕಷ್ಟಕರವಾದುದಾಗಿರಲಿಲ್ಲ ಎಂಬುದು ನಿಜ. ಬ್ರಿಟಿಷ್ ಇತಿಹಾಸದಲ್ಲಿ ಕೂಡಾ ಇಂತಹ ಸ್ವಾತಂತ್ರ್ಯದ ಗಾಳಿಯನ್ನು ಮೊದಲು ಉಸಿರಾಡಿದವರು ಮಧ್ಯಮವರ್ಗದ ಮಹಿಳೆಯರೇ ಎಂಬುದನ್ನು ಗಮನಿಸಿದಾಗ ಭಾರತೀಯ ಚಳವಳಿಯ ಕೊರತೆಗಳನ್ನು ಗಮನದಲ್ಲಿಟ್ಟುಕೊಂಡೇ ಹೇಳುವುದಾದರೂ, ಭಾರತೀಯ ಮಹಿಳಾಪರ ಹೋರಾಟವು ಪಾಶ್ಚಾತ್ಯರಷ್ಟು ತಬ್ಬಲಿಯಾಗಿರಲಿಲ್ಲ. ಅನೇಕ ಭಿನ್ನಾಭಿಪ್ರಾಯಗಳ ನಡುವೆಯೂ ಪಾಶ್ಚಾತ್ಯರ ಭೋಗಪ್ರದವಾದ ನೆಲೆಗಿಂತ ವಿರುದ್ಧವಾದ ಸ್ತ್ರೀಶಕ್ತಿಯ ನೆಲೆಯೊಂದು ಇಲ್ಲಿ ಜಾಗೃತವಾಗಿದ್ದಿತು. ಅರುಣಾ ಅಸಫ್ ಅಲಿಯವರ ಈ ಲೇಖನದ ಪ್ರಾರಂಭದಲ್ಲಿ ಇದನ್ನೇ ಬಹುಶಃ ಸೂಕ್ಷ್ಮವಾಗಿ ಸೂಚಿಸುತ್ತಿರುವರೇನೋ ಎನಿಸುತ್ತದೆ. ಅವರು ಭಾರತದಿಂದ ಪ್ರಾರಂಭಿಸಿ, ಜಗತ್ತಿನ ಮಹಿಳಾಪರ ಹೋರಾಟಗಳ ಇತಿಹಾಸವನ್ನು ಗಮನಿಸುತ್ತಾರೆ. ಅವರೂ ಕೂಡಾ ವೈಚಾರಿಕ ಅರಿವನ್ನು ಹೊಂದದ ಅಮೂರ್ತದ ಕಲ್ಪನೆ ಇಲ್ಲದ ಮಹಿಳೆಯರು ಸ್ವಾತಂತ್ರ್ಯಕ್ಕಾಗಲಿ, ಸಮಾನತೆಗಾಗಲಿ ಅರ್ಹರಲ್ಲ ಎಂದು ಘೋಷಿಸಿದ ರೂಸೋನ ವಿಚಾರಗಳಿಗೆ ಒಲಿಂಪ್ ಡಿ ಗೇಂಜೆಸ್ ಎನ್ನುವ ಫ್ರೆಂಚ್ ವಿಚಾರವಾದಿಯೊಬ್ಬಳು 1791ರಲ್ಲಿ ವ್ಯಕ್ತಪಡಿಸಿದ ಪ್ರತಿಭಟನೆಯ ಸ್ವರೂಪವೇ ಮಹಿಳಾವಾದಕ್ಕೆ ನಾಂದಿಯಾಯಿತು ಎನ್ನುತ್ತಾರೆ. ಇದು ಮುಂದೆ ಉತ್ತಮ ಶಿಕ್ಷಣಕ್ಕಾಗಿ, ಸಮಾನ ಉದ್ಯೋಗ ಹಕ್ಕುಗಳ ಹೋರಾಟಗಳಿಗೆ ಕಾರಣವಾಯಿತೆಂಬುದನ್ನು ಅವರು ಗಮನಿಸುತ್ತಾರೆ. ಈ ದಿಸೆಯಲ್ಲಿ ಅವರು ಪಾದ್ರಿಯಾದ ರಿಚರ್ಡ್ ಪ್ರೈಸ್, ರಾಜಕೀಯ ಚಿಂತಕ ವಿಲಿಯಂ ಗೋಲ್ಡವಿನ್, ಲೇಖಕ ಥಾಮಸ್ ಪೇನ್, ಮತ್ತು ಕವಿ ವಿಲಿಯಂ ಬ್ಲೇಕ್ ಮುಂತಾದ ಚಿಂತಕರ ಸಹವರ್ತಿಯಾದ ವುಲ್‌ಸ್ಟೋನ್ ಕ್ರಾಫ್ಟಳು ರೂಸೋನ ವಿಚಾರಗಳನ್ನು ಪ್ರತಿಭಟಿಸಿದ ರೀತಿಯನ್ನು ವಿವರಿಸುತ್ತಾರೆ. ವುಲ್‌ಸ್ಟೋನ್‌ಳ ವಿಚಾರಗಳು ಬೂರ್ಜ್ವಾ ಪ್ರಜಾಪ್ರಭುತ್ವದ ನೇತಾರನಾದ, ಹೆಚ್ಚು ಸುಖವೆಂಬುದು ಹೆಚ್ಚು ಜನರಿಗೆ ದೊರಕಬೇಕೆಂದು ಸಾರಿದ ಇಂಗ್ಲೆಂಡಿನ ಜೆರೆಮಿ ಬೆಂಥಾಂ ಎಂಬುವವನಮೇಲೆ ಯಾವ ಪರಿಣಾಮವೂ ಬೀರದೇ ಹೋದುದನ್ನು ಅವರು ಗಮನಿಸುತ್ತಾರೆ, ಕಾರಣ ಈ ಹೆಚ್ಚು ಜನರ ಪೈಕಿ ಅವನು ಮಹಿಳೆಯರನ್ನು ಹೊರಾತಗಿಸಿದ್ದನು. ಮಹಿಳಾಪರವಾದ ಕಾಳಜಿಯೊಂದು ಜಾಗೃತವಾಗಲು ಈ ಎಲ್ಲ ವೈರುಧ್ಯಗಳು ಹೇಗೆ ಕಾರಣವಾದವು ಎಂಬುದನ್ನು ಅಸಫ್ ಅಲಿ ಗುರುತಿಸುತ್ತಾರೆ.

ಬೆಂಥಾಂನ ಸಮಕಾಲೀನನಾದ ಫ್ರಾನ್ಸಿನ ಪ್ರೌಡನ್ (1809–65) ಎಂಬುವವನು ತನ್ನ ವೈಚಾರಿಕತೆಗೆ ಹೆಸರು ವಾಸಿಯಾಗಿದ್ದೂ, ಸ್ತ್ರೀಯರ ಬುದ್ಧಿ ಸಾಮರ್ಥ್ಯವು ಪುರುಷರ ಮೂರನೇ ಒಂದು ಭಾಗವೆಂದೂ, ಗೃಹಿಣಿ ಇಲ್ಲವೆ ಸೂಳೆ ಈ ಎರಡೇ ಅವರ ಪಾತ್ರಗಳೆಂದೂ ವ್ಯಕ್ತಪಡಿಸಿದ್ದನ್ನು ಅಸಫ್ ಅಲಿ ಭಾರತದ ಮಧ್ಯಯುಗೀನ ಪುರಾಣದ ಕಾಲದ ಸ್ತ್ರೀಯರ ಪರಿಕಲ್ಪನೆಗೆ ಹೋಲಿಸುತ್ತಾರೆ. 1864ರಲ್ಲಿ ಸಾಂಕ್ರಾಮಿಕ ಕಾಯಿದೆಯು (Anti Contageous disesases Act-ವಿಕ್ಟೋರಿಯನ್ ಯುಗದಲ್ಲಿ ಸಾಂಕ್ರಾಮಿಕ ಲೈಂಗಿಕ ಕಾಯಿಲೆಗಳು ಹೆಚ್ಚುತ್ತಿರುವುದರ ವಿರುದ್ಧವಾಗಿ ಬಿಟ್ರನ್ನನಲ್ಲಿ ಸರ್ಕಾರ ಜಾರಿಗೆ ತಂದ ಕಾಯಿದೆಗೆ ಇದರಿಂದಾಗಿ ಅದುವರೆಗೆ ಉಪಪತ್ನಿಯರ ಸ್ಥಾನದಲ್ಲಿದ್ದ ಮಹಿಳೆಯರು 'ವೇಶ್ಯೆ' ಪಟ್ಟ ಹೊತ್ತು ಸ್ಥಾನಪಲ್ಲಟ ಹೊಂದುವಂತಾಯಿತು, ನೋಡಿ ಪು.14) ಜಾರಿಯಾದದ್ದೇ ಚಾರಿತ್ರಿಕವಾದ ಮಹಿಳಾಪರವಾದ ಹೋರಾಟಕ್ಕೆ ಕೊಟ್ಟ ಚಾಲನೆಯನ್ನು ಅವರು ವಿವರಿಸುತ್ತಾರೆ. ಎಮಿಲಿ ಪ್ಯಾಂಕ್ ಥರ್ಸ್ಟ್ (ಎಮಿಲಿ ಪ್ಯಾಂಕ್ ಥರ್ಸ್ಟ್ –(1858–1928) ಇಂಗ್ಲೆಂಡಿನ ಮಹಿಳಾ ಮತದಾನಕ್ಕಾಗಿ ಉಗ್ರರೂಪದ ಹೋರಾಟ ವನ್ನು ಕೈಗೊಂಡ ಮಹಿಳೆ.) "She shaped an Idea of women for our time. She shook into a new pattern from which there could be no going back" ಎಂದು ಮಹಿಳಾ ವಾದಿಗಳು ಅವಳನ್ನು ಮೆಚ್ಚಿಕೊಳ್ಳುತ್ತಾರೆ. ಬ್ರಿಟಿಷ್ ಮಹಿಳೆಯರು ಹಮ್ಮಿಕೊಂಡ ವ್ಯಾಪಕವಾದ ಹೋರಾಟಗಳಲ್ಲೇ ಪ್ರಮುಖವಾದುದು ಮಹಿಳಾ ಮತದಾನ ವಾಗಿದ್ದಿತು ಎಂದು ಅಭಿಪ್ರಾಯಪಡುವ ಅಸಫ್ ಅಲಿ, ಈ ದಿಸೆಯಲ್ಲಿ ಜಾನ್ ಸ್ಟೂವರ್ಟ್ ಮಿಲ್ಲನು ತನ್ನ ಹೆಂಡತಿಯಾದ ಹ್ಯಾರಿಯೆಟ್ ಟೇಲರಳೊಂದಿಗೆ ತೊಡಗಿಸಿಕೊಂಡ



ಸಾಂಕ್ರಾಮಿಕ ರೋಗ (ನಿರೋಧ) ಮಸೂದೆ (Contageous Disesases Act)-1864

1864ರಲ್ಲಿ ಜಾರಿಗೆ ಬಂದ ಸಾಂಕ್ರಾಮಿಕ ರೋಗ ಮಸೂದೆಯು ಮೂಲಭೂತವಾಗಿ ಬ್ರಿಟಿಷ್ ಸೈನಿಕರ ಉಪಭೋಗಕ್ಕೆಂದು ಮೀಸಲಾಗಿದ್ದ ವೇಶ್ಯೆಯರಿಂದ ಹರಡುವ ಲೈಂಗಿಕ ರೋಗಗಳನ್ನು ತಡೆಹಿಡಿಯುವ ಉದ್ದೇಶವನ್ನು ಒಳಗೊಂಡಿತ್ತು. ಇದರ ಪ್ರಕಾರ ವೇಶ್ಯೆಯರ ನೋಂದಣಿ ಮತ್ತು ವೈದ್ಯಕೀಯ ತಪಾಸಣೆ ಕಡ್ಡಾಯವಾಗಿದ್ದಿತು. ಅದನ್ನು ಉಲ್ಲಂಘಿಸಿದವರು ಕಠಿಣ ಶಿಕ್ಷೆಗೆ ಗುರಿಯಾಗುತ್ತಿದ್ದರು. ಈ ನಿಟ್ಟಿನಲ್ಲಿ ಪೊಲೀಸರ ದೌರ್ಜನ್ಯಕ್ಕೆ ಒಳಗಾದ ಅನೇಕ ವೇಶ್ಯೆಯರು ಅಪಮಾನ ತಾಳಲಾರದೆ ಆತ್ಮಹತ್ಯೆಯ ದಾರಿ ಹಿಡಿದರು. ಈ ಮಸೂದೆಯನ್ನು ಸರ್ಕಾರವು ಕ್ರಮೇಣ ಖಾಸಗೀ ಹಾಗೂ ಶ್ರೀಮಂತರ ಮನೆಗಳಲ್ಲಿ ನೃತ್ಯಗೈಯುತ್ತಿದ್ದ ಗಣಿಕೆಯರು ಮತ್ತು ಉಪಪತ್ನಿಯರಿಗೂ ವಿಸ್ತರಿಸಿ ಅವರನ್ನು ಬೀದಿ ವೇಶ್ಯೆಯರ ಸ್ಥಾನಕ್ಕೆ ಇಳಿಸಿತು. ಇದನ್ನು ಪ್ರತಿಭಟಿಸಲು ಮೇಲುವರ್ಗದ ಭಾರತೀಯರು ರಾಷ್ಟ್ರೀಯ ಚಳವಳಿಯ ಭಾಗವಾಗಿ ಮುಂದೆ ಬಂದರು. ಇದರ ಜೊತೆಗೆ ಬ್ರಿಟಿಷ್ ಮಿಶನರಿಗಳು ಮತ್ತು ಇವ್ಯಾಂಜಲಿಕರು ಇಂತಹ ಮಸೂದೆ ವೇಶ್ಯಾಪದ್ಧತಿಯನ್ನು ನಿರ್ಮೂಲಮಾಡುವ ಬದಲು ಅದನ್ನು ಗಟ್ಟಿಗೊಳಿಸುತ್ತದೆ ಎಂದು ಅದರ ವಿರುದ್ಧ ಬ್ರಿಟನ್ನಿನಲ್ಲಿ ಬಂಡಾಯ ಹೂಡಿದರು. ಬಂಗಾಳದಲ್ಲಿ ಮೈಖೇಲ್ ಮಧುಸೂದನ್ ದತ್ತ್ ಮುಂತಾದವರು ಬೀದಿಗೆ ಇಳಿದ ವೇಶ್ಯೆಯರನ್ನು ರಂಗಭೂಮಿಯ ಕಲಾವಿದೆಯರನ್ನಾಗಿ ಪರಿವರ್ತಿಸಲು ಪ್ರಯತ್ನಪಟ್ಟರು. ಶ್ರೀಮಂತ ಹಾಗೂ ರಾಜರ ಮನೆಗಳಲ್ಲಿ ಗೌರವಾನ್ವಿತ ಬದುಕನ್ನು ಬದುಕುತ್ತಿದ್ದ ಅವರನ್ನು ಬೀದಿ ಸೂಳೆಯರ ಮಟ್ಟಕ್ಕೆ ಇಳಿಸಿ ಅವರ ಮೇಲೆ ವಿಕ್ಟೋರಿಯನ್ ನೈತಿಕ ಪ್ರಜ್ಞೆಯನ್ನು ಹೇರಿದುದು ಬೂರ್ಜ್ವಾವರ್ಗದ ಭಾರತೀಯರ ಘನತೆಗೆ ಧಕ್ಕೆಯನ್ನುಂಟುಮಾಡಿತು. ಅದನ್ನು ಅವರು ತಮ್ಮ ವೈಯಕ್ತಿಕ ಅಪಮಾನವೆಂದೇ ಪರಿಗಣಿಸಿ ಅದರ ವಿರುದ್ಧ ಪ್ರತಿಭಟಿಸಲು ಮುಂಚೂಣಿಯಲ್ಲಿ ನಿಂತರು. ಇದು ಭಾರತೀಯ ವೃತ್ತಿಪರ ಗಾಯಕರು ಮತ್ತು ನರ್ತಕಿಯರ ಸ್ವಾತಂತ್ರ್ಯದ ಮೇಲೆ ಹೇರಲಾದ ನಿರ್ಬಂಧವೆಂದು ಪರಿಗಣಿಸಿ ಮುಂದೆ ಅದನ್ನು ಮಹಿಳಾವಾದಿಗಳು ಕೆಗೆತ್ತಿಕೊಂಡರು. ಇದು ಸಮಾಜದ ಉಳಿದ ವರ್ಗಗಳಿಗೂ ಅನ್ವಯಿಸುವಂತಾದ್ದರಿಂದ ಈ ಪ್ರತಿಭಟನೆಯು ಭಾರತೀಯ ಮೇಲುವರ್ಗದ ಸ್ತ್ರೀ-ಪುರುಷರ ಬೆಂಬಲವನ್ನು ಪಡೆಯಿತು. ಇದೇ ಕ್ರಮೇಣ ಮಹಿಳಾ ಚಳವಳಿಗಳಿಗೆ ನಾಂದಿಹಾಡಿತು. ಹೀಗೆ ಬ್ರಿಟಿಷ್ ಸೈನಿಕರ ಆರೋಗ್ಯವನ್ನು ಕುರಿತಂತಹ ಕಾಳಜಿಯ ನೆಪದಲ್ಲಿ ಹುಟ್ಟಿಕೊಂಡ ವೇಶ್ಯೆಯರ ಸಮಸ್ಯೆಗಳೇ ಇತರ ಮಹಿಳಾ ಪ್ರಶ್ನೆಗಳನ್ನು ಮೇಲ್ಪದರಕ್ಕೆ ತರುವಲ್ಲಿ ಆಶ್ಚರ್ಯಕರ ರೀತಿಯಲ್ಲಿ ಸಹಾಯಕವಾದವು.–(Towards becoming Mothers of the Nation (pp-35) The History of Doing. Radha kumar mukharji-kali for women New Delhi-1993)

ಮಹಿಳಾಮತದಾನ ಹೋರಾಟದ ಸಂದರ್ಭವನ್ನು ಪ್ರಭಾವಿಸಿದ "The Enfranchment of Women" (1869), "Subjugation of Women" (1869) ಎನ್ನುವ ಅವರಿಬ್ಬರೂ ಕೂಡಿಬರೆದ ಲೇಖನಗಳ ಮಹತ್ವವನ್ನು ಬಿಂಬಿಸುತ್ತಾರೆ.

ಇದರ ಜೊತೆಗೆ ಅಟ್ಲಾಂಟಿಕ್ಕಿನ ಇನ್ನೊಂದು ಬದಿಗೆ ನಡೆಯುತ್ತಿದ್ದ ಬ್ರಿಟಿಷ್‌ರ ವಿರುದ್ಧ ಸ್ವಾತಂತ್ರ್ಯ ಸಂಗ್ರಾಮವನ್ನೂ ಅವರು ಮಹಿಳಾಪರ ಚಳವಳಿಯೊಂದಿಗೆ ಸಮೀಕರಿಸುತ್ತಾರೆ. ಒಂದು ನೆಲೆಯಿಲ್ಲದ ರಾಜಕೀಯ ಗುಲಾಮತನವು, ಎಲ್ಲ ರೀತಿಯ ಗುಲಾಮತನದ ಅರಿವನ್ನು ಮೂಡಿಸಲು ಕಾರಣವಾಯಿತು ಎಂಬ ಸತ್ಯದ ಹಿಂದೆ ಅಸಫ್ ಅಲಿಯವರ ಆಲೋಚನೆಗಳು ಕೇಂದ್ರೀಕರಿಸುವುದನ್ನು ಇಲ್ಲಿ ಗಮನಿಸಬಹುದು. ಅಮೆರಿಕೆಯ ವಸಾಹತುಗಳ ಮಧ್ಯಮವರ್ಗದ ಪ್ರಜಾಸತ್ತಾತ್ಮಕ ಚಳವಳಿಗಳ ಸಂದರ್ಭದಲ್ಲಿ, ಮಹಿಳೆಯರನ್ನು ಹಾಗೂ ನೀಗ್ರೋಗಳನ್ನು ಗಣನೆಗೆ ತಂದುಕೊಳ್ಳದ ಹೋರಾಟದೊಳಗಿನ ಪಕ್ಷಪಾತ ಧೋರಣೆಯನ್ನು ಇದು ವ್ಯಕ್ತಪಡಿಸಿದ ರೀತಿಯನ್ನು ಅಸಫ್ ಅಲಿ ಬಯಲಿಗೆಳೆಯುತ್ತಾರೆ. 1840ರಲ್ಲಿ 'ಗುಲಾಮಗಿರಿಯ ವಿರುದ್ಧ' ನಡೆದ ಜಾಗತಿಕ ಸಮ್ಮೇಳನದಲ್ಲಿ ಅಮೆರಿಕೆಯ ಕೆಲವು ಪ್ರಮುಖ ಮಹಿಳಾವಾದಿಗಳು ಪ್ರತಿನಿಧಿಗಳಾಗಿ ಹೋಗಲು ಇದು ಕಾರಣವಾದುದನ್ನು ಇಲ್ಲಿ ದಾಖಲಿಸುತ್ತಾರೆ. ಇಂತಹ ಅನೇಕ ಹೋರಾಟಗಳೂ ಕೂಡಾ, ಅಮೆರಿಕೆಯಲ್ಲಿ ಮಹಿಳೆಯರಿಗೆ ಮತದಾನದ ಹಕ್ಕನ್ನು ಪಡೆದುಕೊಳ್ಳಲು 1920ನೆ ಇಸವಿಗೆ ಮುಂಚೆ ಸಾಧ್ಯವಾಗಲಿಲ್ಲ, ಎನ್ನುವುದರ ಹಿಂದಿನ ವಿಷಾದವು ಇಂತಹ ಚಳವಳಿಗಳ ಸಹನೆ ಹಾಗೂ ಶಕ್ತಿಯ ಮೇಲೂ ಬೆಳಕು ಚೆಲ್ಲುತ್ತವೆ.

ರಾಷ್ಟ್ರೀಯಚಳವಳಿಯ ನೆಲೆಯಲ್ಲಿ ಉಗ್ರ ಹೋರಾಟಗಾರ್ತಿಯೆಂದು ಬಹುತೇಕ ಗುರುತಿಸಲ್ಪಟ್ಟಿರುವ ಅರುಣಾ ಅಸಫ್ ಅಲಿಯವರ ವ್ಯಕ್ತಿತ್ವಕ್ಕೆ ಹೊಸ ಆಯಾಮವೊಂದನ್ನು ಮೇಲಿನ ಅವರ ಕಾರ್ಯ ಚಟುವಟಿಕೆಗಳು ಒದಗಿಸುತ್ತವೆ. ಅವರನ್ನು ಕುರಿತ ಈಚಿನ ಬರಹಗಳು ಅವರ ಮಹಿಳಾಪರವಾದ ಚಿಂತನೆಯನ್ನು ಕ್ರೋಢೀಕರಿಸುತ್ತವೆ. ಪ್ರಧಾನವಾಗಿ ಇಂಗ್ಲೆಂಡ್ ಮತ್ತು ಅಮೆರಿಕೆಗಳಲ್ಲಿ ಬೆಳೆದು ಬಂದ ಮಹಿಳಾ ಹೋರಾಟದ ಸಾಧನೆ ಮತ್ತು ಮಿತಿಗಳನ್ನು ಗಮನಿಸಿದ್ದ ಅರುಣಾ ಅದನ್ನು ಭಾರತೀಯ ಸಂದರ್ಭದಲ್ಲಿ ಯಾವ ರೀತಿಯಲ್ಲಿ ಅಳವಡಿಸಿಕೊಳ್ಳಬಹುದೆಂಬ ಚಿಂತನೆಗೆ ಚಾಲನೆಯನ್ನು ಒದಗಿಸಿಕೊಟ್ಟರು. ಸ್ವಾತಂತ್ರ್ಯ ಚಳವಳಿಯು ಮಹಿಳೆಯರು ತಮ್ಮ ಕೌಟುಂಬಿಕ ಪರಿಸರದಾಚೆಗೆ ಹೊರಬರಲು ಅವಕಾಶವನ್ನು ಒದಗಿಸಿದುದಲ್ಲದೇ ಪರಸ್ಪರ ಶಿಕ್ಷಿತರಾಗಲೂ ಕೂಡ ಒಂದು ಭೂಮಿಕೆಯನ್ನು ಸಿದ್ಧಪಡಿಸಿದುದನ್ನು ಅವರು ದಾಖಲಿಸಿದ್ದಾರೆ. ಅದು ಕ್ರಮೇಣ ಮುಂದಿನ ಮಹಿಳಾಪರ ಚಿಂತನೆಗೆ ಪ್ರೇರಣೆಯನ್ನು ಒದಗಿಸಿ ಸ್ವಾತಂತ್ರ್ಯೋತ್ತರ ಸಂದರ್ಭದಲ್ಲಿ ಮಹಿಳಾ ಸಂಘಟನೆಗಳಿಗೆ ಹೇಗೆ ಅವರು ನಾಂದಿಹಾಡಿದರು ಎಂಬುದು ಅದರಿಂದ ತಿಳಿಯುತ್ತದೆ. ಆದುದರಿಂದ ಭಾರತದ ಸಂದರ್ಭದಲ್ಲಿ ಸೈದ್ಧಾಂತಿಕ ಹಾಗೂ ಸಂಘಟನೆಗಳ ಎರಡೂ ನೆಲೆಗಳಲ್ಲಿ ಪ್ರಥಮ ಉಗ್ರಮಹಿಳಾ ಹೋರಾಟಗಾರ್ತಿ ಎಂಬ ಶ್ರೇಯಸ್ಸು ಅರುಣ ಅಸಫ್ ಅಲಿಯವರಿಗೇ ಸಲ್ಲುತ್ತದೆ.

(ಆಕರ : Virender Grovr -Great Women of Modern India & their contributions Vol-3, Deep & Deep publications New Delhi-1993.)

❑



ನಾವು ತುರ್ತು ಪರಿಸ್ಥಿತಿಯಲ್ಲಿದ್ದೇವೆಯೇ?

■ ವೆಂ. ವನಜ, ಮೈಸೂರು

ರತಿ ರಾವ್ – ಮಹಿಳಾ ಚಳವಳಿಯಲ್ಲಿ ಕಳೆದ 35 ವರ್ಷಗಳಿಂದಲೂ ತಮ್ಮನ್ನು ಕ್ರಿಯಾಶೀಲರಾಗಿ ತೊಡಗಿಸಿಕೊಂಡವರು. ಸ್ವಾಯತ್ತ ಸಂಸ್ಥೆಯಾದ ಮೈಸೂರಿನ 'ಸಮತಾ'ದ ಹುಟ್ಟು, ಬೆಳವಣಿಗೆಗೆ ಕಾರಣರಾದವರು. ನೂರಾರು ಮಹಿಳಾ 'ಕೇಸ್'ಗಳಿಗಾಗಿ, ವಿಚಾರಗಳಿಗಾಗಿ ಬೀದಿಗಿಳಿದು ಹೋರಾಟ ನಡೆಸಿದವರು, ಮೆರವಣಿಗೆ ಮಾಡಿದವರು ಹಾಗೂ ಕಳಕಳಿಯಿಂದ ಸ್ಪಂದಿಸಿದವರು. ಪ್ರಜಾಸತ್ತಾತ್ಮಕ ಸಂಸ್ಥೆಯಾದ P.U.C.L. ನಿಂದ ಬಂದ ವಾರ್ತಾಪತ್ರದ ವಿಚಾರಕ್ಕಾಗಿ ಇಂದು ಇವರ ಮೇಲೆ ಕಾನೂನು ಕ್ರಮ ಜಾರಿಗೊಳಿಸಲು ಪ್ರಯತ್ನಿಸ ಲಾಗಿದೆ ಎಂಬುದು ಎಲ್ಲರಿಗೂ ಆಘಾತದ ವಿಚಾರ. ಬೆಂಗಳೂರಿನ ವಿಮೋಚನಾ ಮಹಿಳಾಸಂಸ್ಥೆ ಈ ಕುರಿತು ಪೊಲೀಸ್ ಅಧಿಕಾರಿ ಅಜಯ್‌ಸಿಂಗ್ ಕುಮಾರ್‌ರವರನ್ನು ಭೇಟಿಯಾಗಿ ಮನವಿ ಸಲ್ಲಿಸಿದೆ. ನ್ಯಾಯಯುತ ಇನ್‌ವೆಸ್ಟಿಗೇಶನ್ ಬಗ್ಗೆ ಶ್ರೀಯುತ ಅಜಯ್‌ಸಿಂಗ್‌ರವರು ಭರವಸೆ ಇತ್ತಿದ್ದಾರೆ. ರತಿ ರಾವ್ ಕೂಡಾ ಈಗಾಗಲೇ 'ಆ್ಯಂಟಿಸಿಪೇಟರಿ ಬೇಲ್' ತೆಗೆದುಕೊಂಡಿದ್ದಾರೆ. ಮಹಿಳಾ ಹೋರಾಟದಲ್ಲಿ ನಿರಂತರವಾಗಿ ಕ್ರಿಯಾಶೀಲರಾಗಿರುವ ರತಿ ರಾವ್ ಈ ಎಲ್ಲಾ ಕಾನೂನು ಜಂಜಡಗಳಿಂದ ವಿಮುಕ್ತರಾಗಲಿ ಎಂದು ನಾವು ಆಶಿಸುತ್ತೇವೆ.

–ಸಂ.

ಅಮಾಯಕರ ಜೀವದ ಜೊತೆ ಚೆಲ್ಲಾಟವಾಡುವ, ಆದರ್ಶಗಳ ಮಾತಾಡುತ್ತಲೇ ಮಾನವ ಹಕ್ಕುಗಳನ್ನು ಕಡೆಗಣಿಸುವ, ಜನಸಾಮಾನ್ಯರಲ್ಲಿ ಭೀತಿಯನ್ನುಂಟು ಮಾಡುವುದನ್ನು ಬಿಟ್ಟರೆ ಮತ್ತೇನನ್ನೂ ಸಾಧಿಸಲಾಗದ ನಕ್ಸಲರಂಥ, ಅಂತಾರಾಷ್ಟ್ರೀಯ ಮಟ್ಟದಲ್ಲಿ ಭಯೋತ್ಪಾದನೆಯೊಂದನ್ನೇ ಗುರಿಯಾಗಿಸಿಕೊಂಡ ಕೊಲೆಗಡುಕರನ್ನು ಬಗ್ಗುಬಡಿಯುವ ನಿಟ್ಟಿನಲ್ಲಿ ದಮನಕಾರಿ ನೀತಿಯನ್ನು ಅನುಸರಿಸುವುದು, ಅದಕ್ಕಾಗಿ ಹಲವಾರು ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳುವುದು ಸರಕಾರಕ್ಕೆ ಅನಿವಾರ್ಯವೆನ್ನುವುದೇನೋ ಸರಿ. ಆದರೆ ಭಾರತದಲ್ಲಿ ನಿಜವಾದ ಅರ್ಥದಲ್ಲಿ ಪ್ರಜಾಪ್ರಭುತ್ವ ನೆಲೆಗೊಳ್ಳಬೇಕು, ನಮ್ಮ ಸಂವಿಧಾನದತ್ತ ಹಕ್ಕುಗಳು ಪ್ರಜೆಗಳಿಂದ ಹರಣವಾಗಬಾರದು ಎನ್ನುವ, ಜಾಗತೀಕರಣ, ಖಾಸಗೀಕರಣ ಹಾಗೂ ಕೊಳ್ಳುಬಾಕ ಸಂಸ್ಕೃತಿಯತ್ತ ತಮ್ಮ ವಿಮರ್ಶಾತ್ಮಕ ದೃಷ್ಟಿಯನ್ನು ಹರಿಸುವ, ಏಣಿಶ್ರೇಣಿಯ ಜಾತಿಪದ್ಧತಿಯಲ್ಲಿ ನಡೆಯುವ ಅಮಾಯಕರ, ದುರ್ಬಲರ ಶೋಷಣೆ–ದಮನಗಳನ್ನು ಖಂಡಿಸುವ, ಧರ್ಮದ ಹೆಸರಿನಲ್ಲಿ ಅಲ್ಪಸಂಖ್ಯಾತರು ಮತ್ತವರ ಧಾರ್ಮಿಕ ಕಟ್ಟಡಗಳ ಮೇಲೆ ನಡೆಯುವ ಧಾಳಿ ಮತ್ತು ಹಿಂಸಾಚಾರ, ನಕ್ಸಲರ ದಮನದ ಹೆಸರಿನಲ್ಲಿ ಕಾರ್ಯಾಂಗ ನಡೆಸುವ ಸುಳ್ಳು ಧಾಳಿ–ಪ್ರತಿಧಾಳಿಗಳು, ಕೋಮುಗಲಭೆಗಳ ಸಂದರ್ಭಗಳಲ್ಲಿ ಮಹಿಳೆಯರು–ಮಕ್ಕಳ ಮೇಲೆ ನಡೆಯುವ ಹಿಂಸಾಚಾರಗಳನ್ನು ಖಂಡಿಸುವ, ಮಾನವ ಹಕ್ಕುಗಳ ಪ್ರತಿಪಾದನೆಗಾಗಿ ಹಲವು ರಚನಾತ್ಮಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ಜನರಲ್ಲಿ ಜಾಗೃತಿ ಮೂಡಿಸುವ ಪ್ರಯತ್ನಗಳು ಮುಂತಾದವು ಅಪರಾಧಗಳೆ? ಇಂಥವುಗಳಲ್ಲಿ ತೊಡಗಿಸಿಕೊಂಡವರು ಅಪರಾಧಿಗಳೆ? ಇಂಥವರ ಮೇಲೂ ಪ್ರಭುತ್ವದ ಕೆಂಗಣ್ಣಿನ ನೋಟ ಹರಿಯಬೇಕೆ? ಈ ಎಲ್ಲಾ ಪ್ರಶ್ನೆಗಳು. ಅನುಮಾನಗಳು ಇದೀಗ ಪ್ರಜ್ಞಾವಂತರನ್ನು ಕಾಡತೊಡಗಿವೆ. ಇದಕ್ಕೆ ಇತ್ತೀಚೆಗೆ ನಡೆಯುತ್ತಿರುವ ವಿದ್ಯಮಾನಗಳೇ ಸಾಕ್ಷಿಯಾಗಿವೆ.

ಕಳೆದ ಶತಮಾನದ ಎಪ್ಪತ್ತರ ದಶಕವೆಂದರೆ ಚಳವಳಿಗಳ ದಶಕವೆಂದೇ ತಿಳಿಯಲಾಗುತ್ತದೆ. ಅಂದು ಸಮಾಜದ ಹೆಚ್ಚುಕಡಿಮೆ ಎಲ್ಲಾ ವರ್ಗಗಳಲ್ಲಿ

ಹಲವು ಸ್ತರಗಳಲ್ಲಿ ಅಂದಿನ ಒಟ್ಟಾರೆ ವ್ಯವಸ್ಥೆಯ ವಿರುದ್ಧದ ಕೂಗು, ಬದಲಾವಣೆಯ ಬಯಕೆ, ಹೋರಾಟದ ಛಲ, ಚಲನಶೀಲತೆ, ಹೊಸತನದ ಗಾಳಿಗಳು ಬೀಸಿದ್ದವು. ಇವುಗಳಿಗೆ ಹಿನ್ನೆಲೆಯಾಗಿ ಹಲವು ಚಳವಳಿಗಳು– ಕಾರ್ಮಿಕ ಚಳವಳಿ, ವಿದ್ಯಾರ್ಥಿ ಚಳವಳಿ, ದಲಿತ ಚಳವಳಿ, ರೈತ ಚಳವಳಿ, ಮಹಿಳಾ ಚಳವಳಿ, ಸಾಹಿತ್ಯಿಕ ಚಳವಳಿಗಳು ದಶಕಗಳಿಂದ ಸ್ಥಗಿತಗೊಂಡ (ಸ್ವಾತಂತ್ರ್ಯೋತ್ತರ ಭಾರತ) ಸಮಾಜಕ್ಕೆ ಚಾಟಿ ಏಟು ಕೊಟ್ಟು ಚಲನಶೀಲತೆಗೆ ದಾರಿಮಾಡಿಕೊಟ್ಟಿದ್ದವು. ಇವು ಬೇರೆ ಬೇರೆ ಸಂದರ್ಭಗಳಲ್ಲಿ ಬೇರೆ ಬೇರೆ ಪ್ರದೇಶಗಳಲ್ಲಿ ಬೇರುಬಿಟ್ಟುಕೊಂಡರೂ, ಎಲ್ಲೋ ಹುಟ್ಟಿ ಹರಿದು ಬರುವ ನದಿಗಳು ಸಾಗರದ ಕಡೆ ಮುಖ ಮಾಡಿದಂತೆ ಇವು ನಗರ ಪ್ರದೇಶಗಳನ್ನು ತಮ್ಮ ಕಾರ್ಯ ಚಟುವಟಿಕೆಗಳ ಕೇಂದ್ರಗಳನ್ನಾಗಿಸಿದವು. ಅದರಲ್ಲಿ ಮೈಸೂರು–ಬೆಂಗಳೂರುಗಳು ಮುಖ್ಯಕೇಂದ್ರ ಬಿಂದುಗಳಾಗಿದ್ದವು. ಈ ಎಲ್ಲಾ ಪ್ರಗತಿಪರ ಚಳವಳಿಗಳಲ್ಲಿ ಕಾರ್ಯನಿರತರಾದವರಿಗೆ ಡಾ. ಇ. ರತಿರಾವ್ ಹೆಸರು ಚಿರಪರಿಚಿತ. ಇವರು ತಮ್ಮ ವಿದ್ಯಾರ್ಥಿ ದೆಸೆಯಲ್ಲಿಯೇ ಮಾರ್ಕ್ಸ್‌ವಾದಿ ಚಿಂತನೆಯಿಂದ ಪ್ರಭಾವಿತರಾದವರು. ಅಂದಿನ ದಿನಗಳಲ್ಲಿ ಅನ್ಯಾಯದ ವಿರುದ್ಧ ನಡೆದ ವಿದ್ಯಾರ್ಥಿ ಚಳವಳಿಗಳು ಮತ್ತಿತರ ಪ್ರಗತಿಪರ ಸಂಘಟನೆಗಳು ನಡೆಸಿದ ಹೋರಾಟಗಳಲ್ಲಿ ಭಾಗಿಯಾಗಿದ್ದವರು. ಎಪ್ಪತ್ತು–ಎಂಬತ್ತರ ದಶಕಗಳಲ್ಲಿ ಮಹಿಳೆಯರ ಪರ ದನಿಯೆತ್ತುವ, ಅವರ ಪರ ನ್ಯಾಯಕ್ಕಾಗಿ ಹೋರಾಡುವ ಏಕೈಕ ಸಂಘಟನೆಯಾಗಿದ್ದ, ಮೈಸೂರಿನ ಜನತೆಯಲ್ಲಿ ಒಂದು ಸಂಚಲನೆಯನ್ನುಂಟು ಮಾಡಿದ್ದ 'ಸಮತಾ–ಪ್ರಗತಿಪರ ಮಹಿಳಾ ವೇದಿಕೆ'ಯ ರೂವಾರಿಗಳಲ್ಲಿ ಒಬ್ಬರಾಗಿದ್ದ (ಮತ್ತೊಬ್ಬರು ಡಾ. ವಿಜಯಾದಬ್ಬೆ) ರತಿರಾವ್ ಸುಮಾರು ಮೂವತ್ತಕ್ಕಿಂತಲೂ ಹೆಚ್ಚು ವರ್ಷಗಳಿಂದ ಈ ಸಂಘಟನೆಯನ್ನು ಮುನ್ನಡೆಸುವಲ್ಲಿ ಬದ್ಧತೆಯನ್ನು ಮೆರೆದವರು. ಶಿಸ್ತಿನ ಸಿಪಾಯಿ! ಇಂದಿಗೂ ಹಲವು ಪ್ರಗತಿಪರ ಸಂಘಟನೆಗಳೊಂದಿಗೆ ತಮ್ಮ ಕೈ ಜೋಡಿಸುತ್ತಾ, ತಮ್ಮ ಸಾಮಾಜಿಕ ಕಳಕಳಿಯನ್ನು ಪ್ರದರ್ಶಿಸುತ್ತಾ ಬಂದಿದ್ದಾರೆ.

ಇಂಥ ರತಿರಾವ್ ಮಾಡಿದ ಒಂದೇ ಒಂದು ತಪ್ಪೆಂದರೆ, 'ಪಿಯುಸಿಎಲ್ ಕರ್ನಾಟಕ ವಾರ್ತಾಪತ್ರ' ಎಂಬ ಅನಿಯತಕಾಲಿಕ ವಾರ್ತಾಪತ್ರದ ಪ್ರಕಾಶಕರಾದದ್ದು! ಇದು ಅಪರಾಧವೆಂದು ಅವರಿಗೆ ಗೊತ್ತಾದದ್ದು ದಿನಾಂಕ 4, ಅಕ್ಟೋಬರ್, 2007ರಲ್ಲಿ ಮೈಸೂರುನಗರದ ವಿಜಯನಗರ ಪೊಲೀಸ್‌ಠಾಣೆಯಲ್ಲಿ ಇವರ ವಿರುದ್ಧ ದಾಖಲಾದ ಪ್ರಕರಣಕ್ಕೆ ಸಂಬಂಧಿಸಿದಂತೆ ವಿವರಣೆ ಕೋರಿ ಬರೆದ ಪೊಲೀಸ್ ತಿಳಿವಳಿಕೆ ಪತ್ರವೊಂದು ದಿನಾಂಕ 26.02.2010ರಂದು ಇವರ ಕೈಸೇರಿದಾಗ! ಪ್ರಥಮ ಮಾಹಿತಿ ವರದಿ (FIR)ಯಲ್ಲಿ ದಾಖಲಿಸಿದ ಆರೋಪಗಳೆಂದರೆ; ನಕ್ಸಲೀಯರು ಮತ್ತು ಮುಸ್ಲಿಮರ ಪರವಾಗಿ ಪತ್ರಿಕೆಯಲ್ಲಿ ಪ್ರಚಾರ ಮಾಡಿದ್ದು: ಎನ್‌ಕೌಂಟರ್ ಹೆಸರಿನಲ್ಲಿ ಪೊಲೀಸರು ಜನರ ಪ್ರಾಣ ತೆಗೆಯುತ್ತಿದ್ದಾರೆ, ಇದಕ್ಕೆ ಪಟ್ಟಭದ್ರ ಹಿತಾಸಕ್ತಿಗಳ ಒತ್ತಡವಿದೆಯೆಂದು ಹೇಳಿದ್ದು; ದಲಿತರು, ಮಹಿಳೆಯರು, ರೈತರು, ಅಲ್ಪಸಂಖ್ಯಾತರು, ಆದಿವಾಸಿಗಳು ತಮ್ಮ ಹಕ್ಕುಗಳ ಪ್ರತಿಪಾದನೆಗಾಗಿ ಸಂಘಟಿತರಾಗಬೇಕೆಂದು ಹೇಳಿದ್ದು; ಸಂಘಪರಿವಾರದವರು ಕರಾವಳಿಯಲ್ಲಿ ಕೋಮುದಳ್ಳುರಿಗೆ ತುಪ್ಪಸುರಿಯುತ್ತಿದ್ದಾರೆ, ಅದಕ್ಕಾಗಿ ಜಾತ್ಯಾತೀತ ಶಕ್ತಿಗಳು ದನಿಯೆತ್ತಬೇಕೆಂದು ಹೇಳುವ ಮೂಲಕ ಹಿಂದು–ಮುಸ್ಲಿಮರ ನಡುವೆ ಕೋಮುದ್ವೇಷ ಹುಟ್ಟಿಸುವಂತಹ ವಿಷಯಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಿದ್ದು! ಇವೆಲ್ಲವೂ ನಿಜವಾಗಿಯೂ ಮಹಾಪರಾಧಗಳೇ? ಅಲ್ಲದೆ "ಸಾರ್ವಜನಿಕರನ್ನು ಎತ್ತಿಕಟ್ಟುವ ಅಸಹ್ಯ, ಅವಹೇಳನ, ಅಪನಂಬಿಕೆ, ಅತೃಪ್ತಿ ಹುಟ್ಟುವಂತೆ ಪತ್ರಿಕೆಗಳಲ್ಲಿ ಪ್ರಕಟಿಸುತ್ತಿದ್ದಾರೆ. ಇದರಿಂದ ಯಾವ ಸಮಯದಲ್ಲಾದರೂ ಶಾಂತಿಭಂಗ ಉಂಟಾಗುವ ಸಾಧ್ಯತೆ ಇರುತ್ತೆ..... ದಲಿತರು, ಮಹಿಳೆಯರು, ಅಲ್ಪಸಂಖ್ಯಾತರು, ಆದಿವಾಸಿಗಳಿಗೆ ಒಳ್ಳೆಯದು ಮಾಡುವ ಹೆಸರಿನಲ್ಲಿ ಜಾತೀಯತೆ, ಕೋಮುವಾದ, ಸರ್ಕಾರದ ಮೇಲೆ ಸುಳ್ಳು ಘೋಷಣೆ ಮಾಡಿ ಅಧಿಕಾರಿಗಳ ವಿರುದ್ಧ ಸಾರ್ವಜನಿಕರಿಗೆ ಅಸಹ್ಯ, ಅವಹೇಳನ, ಅಪನಂಬಿಕೆ. ಅತೃಪ್ತಿ ಹುಟ್ಟುವಂತೆ ಮಾಡುತ್ತಿರುತ್ತಾರೆ...." ಇದು ಇಲಾಖೆಯು ನ್ಯಾಯಾಲಯಕ್ಕೆ ಸಲ್ಲಿಸಿರುವ ಆರೋಪಪಟ್ಟಿಯ ಸಾರಾಂಶ. ಕಲಂ 124ಎ, 505 ಕಲಂ 14 ಮತ್ತು 15 ಆಫ್ ಪ್ರೆಸ್ ಅಂಡ್ ರಿಜಿಸ್ಟ್ರೇಷನ್ ಆ್ಯಕ್ಟ್ ಅಡಿಯಲ್ಲಿ ಪ್ರಕರಣವನ್ನು ದಾಖಲಿಸಿದ್ದು ಇವರಿಗೆ ವಿವರಣೆಗಳನ್ನು ನೀಡುವಂತೆ ನೋಟೀಸು ಕಳುಹಿಸಲಾಗಿದೆ.

ತಮ್ಮ ಮೇಲಿನ ಇಂಥ ಆರೋಪಗಳಿಂದ ಬೇಸರ–ಗಾಭರಿಗೊಂಡ ರತಿರಾವ್ ಮೈಸೂರಿನ ಪೊಲೀಸ್ ಕಮಿಷನರರಿಗೆ ಮನವಿಯೊಂದನ್ನು ಸಲ್ಲಿಸಿದ್ದಾರೆ. ಇದರಲ್ಲಿ ಪಿಯುಸಿಎಲ್ ಸಂಘಟನೆ ಯಾವ ಉದ್ದೇಶ,



ಗುರಿಗಳನ್ನು ಹೊಂದಿದೆಯೆಂದು ವಿವರಣೆ ನೀಡಿದ್ದಾರೆ. ಇದು 1977ರಲ್ಲಿ ಶ್ರೀ ಲೋಕನಾಯಕ ಶ್ರೀ ಜಯಪ್ರಕಾಶ ನಾರಾಯಣ ರಂಥವರಿಂದ ಸ್ಥಾಪನೆಗೊಂಡ ಮಾನವ ಹಕ್ಕುಗಳ ರಕ್ಷಣೆಗಾಗಿ ನ್ಯಾಯಾಧೀಶರಾದ ವಿ.ಎಂ. ತಾರ್ಕುಂಡೆ ಮತ್ತು ಶ್ರೀ ರಾಜೇಂದ್ರ ಸಚಾರ್‌ರಂಥವರ ಸಾರಥ್ಯದಲ್ಲಿ ಮುನ್ನಡೆದ ಸಂಘಟನೆಯಾಗಿದೆ. ಇದು ಜನರ ಸಂವಿಧಾನ ದತ್ತ ಹಕ್ಕುಗಳನ್ನು ಶಾಂತಿಯುತವಾಗಿ ಹಾಗೂ ಪ್ರಜಾಪ್ರಭುತ್ವಿಕ ಮಾರ್ಗದಲ್ಲಿ ರಕ್ಷಿಸಲಿಕ್ಕಾಗಿಯೇ ದುಡಿಯುತ್ತದೆ. ಒಂದು ರೀತಿಯಲ್ಲಿ ಪ್ರಜಾಪ್ರಭುತ್ವಿಕ ವ್ಯವಸ್ಥೆಯನ್ನು ಬಲಪಡಿಸುವ ಹಾಗೂ ಕಾರ್ಯಾಂಗದ ಪ್ರಜಾ ಹಕ್ಕುಗಳ ರಕ್ಷಣೆಯ ಕೆಲಸವನ್ನು ಸರಾಗಗೊಳಿಸುವ ನಿಟ್ಟಿನಲ್ಲಿ ಕೆಲಸಮಾಡುತ್ತದೆ. ಈ ಮೇಲಿನ ವಿವರಗಳೊಂದಿಗೆ ಪಿಯುಸಿಎಲ್ ಕರ್ನಾಟಕ ವಾರ್ತಾಪತ್ರ 2007 ಸೆಪ್ಟೆಂಬರ್‌ನಲ್ಲೇ ಪ್ರಕಟಣೆ ಕಾಣದೆ ಹೋಗಿದ್ದು, ಸುಮಾರು ಎರಡೂವರೆ ವರ್ಷಗಳ ನಂತರ ಸದರಿ ಇಲಾಖೆಯ ತಿಳಿವಳಿಕೆ ಪತ್ರ ತಮ್ಮ ಕೈಸೇರಿರುವುದನ್ನು ಗಮನಿಸಬೇಕೆಂದು ಕಮಿಷನರರನ್ನು ಕೋರಿದ್ದಾರೆ. ಖಾಸಗಿ ಪ್ರಸಾರಕ್ಕಾಗಿ ಪ್ರಕಟವಾಗುತ್ತಿದ್ದ ವಾರ್ತಾಪತ್ರಕ್ಕೆ ಪ್ರೆಸ್ ಅಂಡ್ ರಿಜಿಸ್ಟ್ರೇಷನ್ ಆ್ಯಕ್ಟ್ ಅನ್ನು ಅನ್ವಯಿಸುವುದರ ಔಚಿತ್ಯವನ್ನು ಪ್ರಶ್ನಿಸಿದ್ದಾರೆ. ಅಂತೆಯೇ ತಮ್ಮ ಮೇಲಿನ ಆರೋಪಗಳಲ್ಲಿ ಹುರುಳಿಲ್ಲವೆನ್ನುವುದನ್ನು ಮನಗಂಡು ತಮ್ಮ ವಿರುದ್ಧದ ಪ್ರಕರಣವನ್ನು ಕೈಬಿಡುವಂತೆ ಮನವಿ ಮಾಡಿದ್ದಾರೆ.



ಈಗ ನಮ್ಮ ಮುಂದಿರುವ ಪ್ರಶ್ನೆ ಇಷ್ಟೆಲ್ಲರ ಅಗತ್ಯವಿತ್ತೆ ಎನ್ನುವುದು. ಖಾಸಗಿ ಪ್ರಸಾರಕ್ಕೆಂದು ಕೇವಲ ನಾಲ್ಕು ಸಂಚಿಕೆಗಳಲ್ಲಿ ಪ್ರಕಟಗೊಂಡ ಪತ್ರಿಕೆ ಮತ್ತೆ ಮುದ್ರಣವನ್ನೇ ಕಾಣದೆ ಸುಮಾರು ಮೂರು ವರ್ಷಗಳೇ ಸಂದಿವೆ. ಮೊದಲ ಸಂಚಿಕೆ ಸಂಪೂರ್ಣವಾಗಿ ವಾರ್ತಾಪತ್ರದ ಉದ್ದೇಶ, ಅಗತ್ಯ ಹಾಗೂ ಪಿಯುಸಿಎಲ್ ಸಂಘಟನೆ ಕುರಿತ ಮಾಹಿತಿಗಳನ್ನು ನೀಡಿದರೆ, ಕರ್ನಾಟಕದಲ್ಲಿ ಕ್ರೈಸ್ತ ಸಮುದಾಯದ ಮೇಲೆ ಇತ್ತೀಚಿನ ವರ್ಷಗಳಲ್ಲಿ ನಡೆದ ಹಲ್ಲೆ ಹಾಗೂ ಧಾರ್ಮಿಕ ಸ್ಥಳಗಳ ಮೇಲಿನ ಧಾಳಿಗಳನ್ನು ಕುರಿತ ಸತ್ಯಶೋಧನಾ ಸಮಿತಿಯ ವರದಿ ಹಾಗೂ ನಂದಿಗ್ರಾಮ ಗಲಭೆಯ ತನಿಖಾವರದಿಗಳನ್ನು ಎರಡನೆಯ ಸಂಚಿಕೆಯಲ್ಲಿ ಪ್ರಕಟಿಸಲಾಗಿದೆ. ಮುಂದಿನ ಸಂಚಿಕೆಯಲ್ಲಿ ಅಲ್ಲಲ್ಲಿ ಆಗುತ್ತಿರುವ ಅಭಿವ್ಯಕ್ತಿ ಸ್ವಾತಂತ್ರ್ಯ ಹರಣದ ಪ್ರಕರಣಗಳನ್ನು ಸೋದಾಹರಿಸಲಾಗಿದೆ. ಅಲ್ಲದೆ ಚಾಮಲಾಪುರ ವಿದ್ಯುತ್ ಘಟಕದ ವಿರುದ್ಧದ ಹೋರಾಟ ಏಕೆನ್ನುವ ಬಗ್ಗೆ ಲೇಖನ ಹಾಗೂ ನಕ್ಸಲರ ವಿರುದ್ಧದ ಕಾರ್ಯಾಚಾರಣೆಯೆಂದರೆ ಜನಪರ ಸಂಘಟನೆ – ಹೋರಾಟಗಳ ಮುಟ್ಟುಗೋಲಲ್ಲ; ಅಲ್ಲಿಯ ಸಮಸ್ಯೆಗಳತ್ತ ಗಮನಹರಿಸುವ ಕೆಲಸವಾಗಬೇಕೆಂಬ ನಿಲುವಿನ ಲೇಖನ, ಪ್ರಜಾಪ್ರಭುತ್ವ, ರಾಜಕೀಯ ಭಿನ್ನಾಭಿಪ್ರಾಯ ಹಾಗೂ ದಮನಕಾರಿ ನೀತಿ, ಎಂಬ ಇಂಗ್ಲಿಷ್ ಲೇಖನಗಳು ಪ್ರಕಟವಾಗಿವೆ. ಇಲ್ಲಿಯ ಪ್ರತಿ ಲೇಖನದಡಿಯೂ ಲೇಖಕರನ್ನು ಹೆಸರಿಸಲಾಗಿದೆ. ಸಮಸ್ಯೆಗಳನ್ನು ಕುರಿತ ಲೇಖನಗಳಿವೆಯೆಂದ ಮಾತ್ರಕ್ಕೆ ಸಮಸ್ಯೆಗಳನ್ನು ಹುಟ್ಟುಹಾಕುವವರ ಪರ ಎಂದೇನಲ್ಲ. ಅಥವಾ ಸಮಸ್ಯೆಗಳಿಗೆ ಕಾರಣಗಳನ್ನು ಜನರು ತಿಳಿಯಬಾರದೆಂದಲ್ಲ. ಜನಸಾಮಾನ್ಯರಿಗೆ ಮೇಲ್ನೋಟಕ್ಕೆ ಅರ್ಥವಾಗದ ಸಮಸ್ಯೆಗಳ ಆಳಕ್ಕಿಳಿದು ತಿಳಿಸುವ ಪ್ರಯತ್ನ ನಡೆಸುವುದು ಪತ್ರಿಕಾಧರ್ಮಗಳಲ್ಲೊಂದೇ ಹೊರತು ಅದು ಸಮಾಜ ವಿರೋಧಿ ಕೆಲಸವಾಗುವುದಿಲ್ಲ. ಯಾವುದೇ ಪತ್ರಿಕೆ ಅಲ್ಪಸಂಖ್ಯಾತರ, ದಲಿತರ, ಮಹಿಳೆಯರ, ಆದಿವಾಸಿಗಳ ಬದುಕಿನ ಬಗ್ಗೆ, ಅವರಿಗಾಗುತ್ತಿರುವ ಅನ್ಯಾಯ–ಶೋಷಣೆಗಳ ಬಗ್ಗೆ ಕಾಳಜಿ ತೋರುತ್ತಿದೆಯೆಂದರೆ, ಅದು ಸಮಾಜದ ಆರೋಗ್ಯವನ್ನು ಕಾಪಾಡುವಲ್ಲಿ ಮಹತ್ವದ ಪಾತ್ರ ವಹಿಸುತ್ತಿದೆಯೆಂದೇ ಅರ್ಥ. ಅಂದಮೇಲೆ 'ಪಿಯುಸಿಎಲ್ ಕರ್ನಾಟಕ ವಾರ್ತಾಪತ್ರ' ಒಂದು ಶೋಷಿತರ ದಮನಿಕತರ ಪರವಾಗಿ ನಿಲ್ಲುವ ಬದ್ಧತೆಯುಳ್ಳ, ದನಿಯಿಲ್ಲದವರಿಗೆ ದನಿಯಾಗುವ ಆರೋಗ್ಯಕರ ನಿಲುವಿನ ಪತ್ರಿಕೆಯಾಗಿತ್ತೆನ್ನುವುದರಲ್ಲಿ ಸಂದೇಹವಿಲ್ಲ. ಇಂಥ ಪತ್ರಿಕೆಯ ವಿರುದ್ಧ ಪ್ರಭುತ್ವದ ಕೆಂಗಣ್ಣು ಎಷ್ಟು ಸರಿ? ಇಂಥ ತಪ್ಪು ಹೆಜ್ಜೆಗಳು ಯಾರಿಗಾಗಿ? ಯಾತಕ್ಕಾಗಿ? ಎನ್ನುವ ಆತ್ಮಾವಲೋಕನ ಇಂದಿನ ತುರ್ತು ಅಗತ್ಯವಾಗಿದೆ. ❑



ದೇವದಾಸಿ ಪದ್ಧತಿ : ಮರಾಠಿ ಜನಪ್ರಿಯ ಸಾಹಿತ್ಯದ ಒಂದು ಓದು

■ *ಅನಘಾತಾಂಬೆ*

ಮಹಾರಾಷ್ಟ್ರವೂ ಸೇರಿದಂತೆ ದಕ್ಷಿಣಭಾರತದ ಅನೇಕ ಪ್ರದೇಶಗಳಲ್ಲಿ ಹಳ್ಳಿಗಳಲ್ಲೂ, ನಗರಗಳ ವೇಶ್ಯಾವಾಟಿಕೆಗಳಲ್ಲೂ ಬಲವಾಗಿ ವ್ಯಾಪಿಸಿರುವ ಧಾರ್ಮಿಕ ವೇಶ್ಯಾಗಾರಿಕೆಯ ಬಲಿಷ್ಟ ಮಾದರಿ ದೇವದಾಸಿ ಪದ್ಧತಿ. ಈ ಪದ್ಧತಿಯ ವಿರುದ್ಧವಾಗಿ 1970ರ ದಶಕದಲ್ಲಿ ಮಹಾರಾಷ್ಟ್ರದಲ್ಲಿ ತೀವ್ರವಾದ ಜನಾಂದೋಲನ ನಡೆಯಿತು. ಅದರ ಪರಿಣಾಮವಾಗಿ 2008ರಲ್ಲಿ 'ಮಹಾರಾಷ್ಟ್ರ ದೇವದಾಸಿ ಪದ್ಧತಿ ನಿರ್ಮೂಲನ' ಕಾನೂನು ಜಾರಿಗೆ ಬಂದಿತು. ದೇವದಾಸಿ ಪದ್ಧತಿಯು ಒಂದು ಅನಿಷ್ಟಕರ ಹಿಂದುಳಿದ ಆಚರಣೆ ಎಂದು ಸಾರಿ, ಕಾನೂನು ಆ ಪದ್ಧತಿಯನ್ನು ನಿಷೇಧಿಸಿದೆ.

ಕಳೆದ ದಶಕದ ಉದ್ದಕ್ಕೂ ವೇಶ್ಯಾಗಾರಿಕೆ ಕುರಿತ ಹಾಗೆ ಬಲವಾಗಿ ಚರ್ಚೆಗಳು ನಡೆದಿವೆ. ವೇಶ್ಯೆಯರ ಸಂಘಟನೆಯ ಯತ್ನಗಳೂ ನಡೆದಿವೆ. ಹೀಗಿದ್ದರೂ ದೇವದಾಸಿ ಪದ್ಧತಿಗೂ ವೇಶ್ಯಾಗಾರಿಕೆಗೂ ನಡುವೆ ಇರುವ ನಿರಂತರತೆ ಮತ್ತು ಅಂತರಗಳ ಬಗ್ಗೆ ಸಾರ್ವಜನಿಕ ಚರ್ಚೆಗಳು ನಡೆದಿಲ್ಲ. ವೇಶ್ಯಾಗಾರಿಕೆ ಎಂಬ ಸಾಧಾರಣೀಕೃತ ಸಾಮಾಜಿಕ ಪಿಡುಗಿನ ಪರದೆಯ ಮುಸುಕಿನೊಳಗೇ ದೇವದಾಸಿ ಪದ್ಧತಿಯನ್ನೂ ಸೇರಿಸಿ ನೋಡಲಾಗುತ್ತದೆ. ಇಲ್ಲವೆ ಅನಿಷ್ಟ ಆಚರಣೆಯೆಂದು ಅದರ ನಿರ್ಮೂಲನಕ್ಕೆ ಯತ್ನಿಸಲಾಗುತ್ತದೆ. ಇನ್ನೂ ಒಂದು ದೃಷ್ಟಿಯು ಚಾರಿತ್ರಿಕವಾಗಿ ಏಕಸತಿತ್ವದ ವಿವಾಹ ಸಂಸ್ಥೆಯ ನಿರ್ಬಂಧಗಳ ಹೊರಗೆ ಮಹಿಳೆಯರ ಸ್ವತಂತ್ರ ಸ್ವಾಯತ್ತ ಲೈಂಗಿಕ ಜಾಗ ಇದು ಎಂದು ಸಮರ್ಥಿಸಲು ಯತ್ನಿಸುತ್ತದೆ. ಮಹಿಳೆಯರ ಲೈಂಗಿಕ ಮಾರಾಟವೆಂದು ಇಲ್ಲವೆ ಲೈಂಗಿಕ ವೃತ್ತಿ ಎಂದು (Trafficking V/s Sex work) ಧೃವೀಕೃತ ದ್ವಂದ್ವಗಳಿಂದ ವೇಶ್ಯಾವೃತ್ತಿ ಎಂಬುದರ ನಿರ್ವಚನದ ಯತ್ನಗಳು ಈಗ ನಡೆದಿದ್ದು ದೇವದಾಸಿ ಪದ್ಧತಿಯ ಅಧ್ಯಯನವು ಈ ಧೃವೀಕೃತ ಕಲ್ಪನೆಗಳ ಒಳಗಿನ ಸಂಕೀರ್ಣ ಸಮಸ್ಯೆಗಳನ್ನು ಗುರುತಿಸಲು ನೆರವಾಗಬಲ್ಲದು.

ಪ್ರಾಚೀನ ಕಾಲದಲ್ಲಿ ದೇವಾಲಯಗಳಲ್ಲಿ ಕೆಲವು ನಿರ್ದಿಷ್ಟ ಪವಿತ್ರ ಧಾರ್ಮಿಕ ವಿಧಿಗಳನ್ನು ನಡೆಸಲು ತಮ್ಮದೇ ಹಕ್ಕುಗಳನ್ನು ಹೊಂದಿದ್ದ ಮಹಿಳೆಯರು 'ದೇವದಾಸಿ'ಯರು (Temple women). ವಸಾಹತು ಕಾಲದಲ್ಲಿ ದೇವದಾಸಿಯರಿಗೆ ಹಿಂದೆ ಇದ್ದ ಗೌರವದ ಸ್ಥಾನವು ಇಲ್ಲವಾಗಿ ಅವಳು ದೇಹ ಮಾರುವ ವೇಶ್ಯೆಯಾಗಿ ಅವನತಿ ಹೊಂದಿದಳೆಂದು ಚರಿತ್ರಕಾರರು ಈ ಆಚರಣೆಯ ಬಗ್ಗೆ ವಿವರಿಸುತ್ತಾರೆ. ಲೈಂಗಿಕ ಮಿಲನವನ್ನು ದೇವರ ಜೊತೆಗಿನ ಆಧ್ಯಾತ್ಮಿಕ ಸಮಾಗಮವೆಂದು ಪ್ರತಿಪಾದಿಸುವ ನಂಬಿಕೆಗಳು ದೇವಾಲಯ ಮಹಿಳೆಯನ್ನು ಪವಿತ್ರವೇಶ್ಯೆ ಎಂದು ಸಾರಿದ್ದವು. ಆದರೆ ಕೆಳಜಾತಿಗಳಿಂದ ಬಂದ ದೇವದಾಸಿಯರು ಹಳ್ಳಿಗಳಲ್ಲಿ ಧಾರ್ಮಿಕ ಉತ್ಸವ, ಪೂಜಾದಿಗಳ ಸಂದರ್ಭಗಳಲ್ಲಿ, ದೇವಾಲಯದ ಅಂಗಳದೊಳಗೆ ಧಾರ್ಮಿಕ

'ದೇವದಾಸಿ ಪದ್ಧತಿ : ಮರಾಠಿ ಜನಪ್ರಿಯ ಸಾಹಿತ್ಯ'ದ ಓದಿನ ಮೂಲಕ ಅನಘಾತಾಂಬೆಯವರು ಸಿದ್ಧಪಡಿಸಿದ "Reading Devadasi Practice Through popular Marathi Literature 'ಎಂಬ ಸಂಶೋಧನಾ ಲೇಖನದ ಸಂಗ್ರಹಾನುವಾದ ಇದಾಗಿದೆ. ಅನಘಾತಾಂಬೆ ಅವರು ಕ್ರಾಂತಿಜ್ಯೋತಿ ಸಾವಿತ್ರೀಬಾಯಿ ಫುಲೆ ವಿಮೆನ್ ಸ್ಟಡೀಸ್ ಸೆಂಟರ್, ಪುಣೆ ವಿಶ್ವ ವಿದ್ಯಾಲಯದಲ್ಲಿ ಅಧ್ಯಾಪಕಿಯಾಗಿದ್ದಾರೆ. ಈ ಲೇಖನವು Centre for Social Sciences and Humanities, University of Pune - ಸಂಸ್ಥೆ ಒದಗಿಸಿದ್ದ ಒಂದು ಸಂಶೋಧನಾ ಯೋಜನೆಯ ಭಾಗವಾಗಿ ಸಿದ್ಧಪಡಿಸಿದ್ದಾಗಿದೆ. ಲೇಖನವು Economic and Political Weekly, April, 25, 2009, Vol XLIV, No 17, 2009 ರ ಸಂಚಿಕೆಯಲ್ಲಿ ಪ್ರಕಟವಾಗಿದ್ದು. ಅದನ್ನು 'ನಮ್ಮ ಮಾನಸ'ಕ್ಕಾಗಿ ಸರಳ ಸಂಗ್ರಹವಾಗಿ ಅನುವಾದಿಸಲಾಗಿದೆ.

■ *ಬಿ.ಎನ್. ಸುಮಿತ್ರಾಬಾಯಿ*

ವಿಧಿಗಳನ್ನು ನೆರವೇರಿಸುವ ಹೊಣೆಗೆಂದು ರೂಪುಗೊಂಡಿರುತ್ತಾರೆ. ಅವರು ನೆರವೇರಿಸುವ ಧಾರ್ಮಿಕ ವಿಧಿಗಳಾಗಲಿ, ಅವರು ಮಾಡುವ ಹಾಡುಗಾರಿಕೆ, ಕುಣಿತಗಳ ಸಾಂಸ್ಕೃತಿಕ ದುಡಿಮೆಗಳಾಗಲಿ ದೇವಾಲಯದ ಪ್ರಧಾನ ಆಗುಹೋಗುಗಳಿಗೆ ಅವಶ್ಯಕವಾದಂಥವಲ್ಲ. ಹಿಂದಿನ ದೇವಾಲಯ ನರ್ತಕಿಯರಿಗೆ ಸಿಗುತ್ತಿದ್ದ ರೀತಿಯ (ಆಸ್ತಿ, ಜಮೀನು, ಧನ ಮುಂತಾದ) ಆರ್ಥಿಕ ಸವಲತ್ತುಗಳ ಹಕ್ಕುಗಳಾಗಲಿ, ವಂಶಾನುಗತವಾಗಿ ರೂಢಿಸಿಕೊಂಡ ಕಲೆಗಾರಿಕೆಯಾಗಲಿ, ಅಂತಹ ಕಲೆಗಳನ್ನು ಅಭ್ಯಸಿಸಲು ಬಿಡುವಾಗಲೀ ಆಧುನಿಕ ಕಾಲದ ದೇವದಾಸಿಯರಿಗೆ ಇಲ್ಲ.

ದೇವದಾಸಿ ಪದ್ಧತಿಯ ಇಂದಿನ ಸ್ವರೂಪದ ಮೂಲವನ್ನು 'ಮಾತಂಗಿ' ಪದ್ಧತಿಯಲ್ಲಿ ಕಾಣಬಹುದು. ಮಾತೃಕೇಂದ್ರಿತವಾದ ಆರ್ಯೇತರ ಕೃಷಿಗಾರ ಸಮುದಾಯಗಳಲ್ಲಿ ಪ್ರಾಚೀನ ಕಾಲದಲ್ಲಿ ಧಾರ್ಮಿಕ ವಿಧಿಗಳನ್ನು ನಡೆಸುತ್ತಿದ್ದ ಪುರೋಹಿತ ಮಹಿಳೆಯನ್ನು 'ಮಾತಂಗಿ' ಎಂದು ಕರೆಯುತ್ತಾರೆ. ಈಕೆಗೆ ದೈವಿಕ ಶಕ್ತಿ, ಫಲಭರಿಸುವ ಶಕ್ತಿ, ಕೇಡು ಮಾಡಬಲ್ಲ ಶಕ್ತಿಗಳೂ ಇರುತ್ತವೆಂದು ನಂಬಲಾಗುತ್ತಿತ್ತು. ಈಕೆಯ ಮೈಮೇಲೆ ದೇವಿಯು ಬರುತ್ತಾಳೆ, ಈಕೆ ದೇವಿಯೊಂದಿಗೆ ಸಂಭಾಷಣೆ ನಡೆಸಬಲ್ಲಳು, ದೇವಿಯ ಸಂದೇಶವನ್ನು ಭಕ್ತರಿಗೆ ತಲುಪಿಸುವ ಮಾಧ್ಯಮ ಇವಳು. ಸಮಾಜದ ಕೆಳಜಾತಿಗಳಲ್ಲಿ ತುಂಬ ಹಿಂದೆ ಇದ್ದ ಧಾರ್ಮಿಕ ಆಚರಣೆ ಈ 'ಮಾತಂಗಿ'ಯದು.

ಕಾಲಕ್ರಮದಲ್ಲಿ ಬ್ರಾಹ್ಮಣ ಧರ್ಮದ ಪಿತೃಸಂಸ್ಕೃತಿಯು ಈ ಮಾತೃಮೂಲಿಯ ಧಾರ್ಮಿಕ ಆಚರಣೆಯನ್ನು ಕೈಗೆತ್ತಿಕೊಂಡು ತನ್ನ ಹಿತಾಸಕ್ತಿಗೆ ತಕ್ಕಂತೆ ಹಲವು ತಿದ್ದುಪಡಿಗಳನ್ನು ಮಾಡಿ ಇದನ್ನು ದೇವದಾಸಿತ್ವದ 'ಪವಿತ್ರ ವೇಶ್ಯಾಗಾರಿಕೆ' ಪದ್ಧತಿಯನ್ನಾಗಿ ಪರಿವರ್ತಿಸಿತು. ಈ ಪರಿಷ್ಕಾರಗಳ ಪರಿಣಾಮವಾಗಿ ದೇವದಾಸಿ ಪದ್ಧತಿ ಎಂಬುದು ಕೆಳಜಾತಿ ಮಹಿಳೆಯರ ಧಾರ್ಮಿಕ-ಲೈಂಗಿಕ ದುಡಿಮೆಯ ರೂಪ ತಳೆದಿದ್ದು ಮೇಲ್ಜಾತಿಯ ಪುರುಷರ ಭೋಗಕ್ಕೆ ಸುಲಭವಾಗಿ ಒದಗುವ ರೀತಿಯಲ್ಲಿ ಸಿದ್ಧ ರೂಪ ಪಡೆಯಿತು. ದುಡಿಮೆಗಾರ ಕೆಳಜಾತಿಗಳನ್ನು ಅವರ ಜಾತಿಶ್ರೇಣಿಗಳ ಒಳಗೂ ಲೈಂಗಿಕ ನೆಲೆಯಲ್ಲಿ ನೈತಿಕವಾಗಿ ಕೀಳ್ಗೆಸುವುದಕ್ಕೂ ಮೇಲ್ಜಾತಿ ಮಹಿಳೆಯರ ಮರ್ಯಾದೆ ಪಾವಿತ್ರ್ಯಗಳನ್ನು ಎತ್ತಿ ಹಿಡಿಯುವುದಕ್ಕೂ ದೇವದಾಸಿ ಪದ್ಧತಿ ಒಂದು ಮುಖ್ಯ ಬಿಂದುವಾಗಿದೆ.

ಮರಾಠಿ ಸಾಹಿತ್ಯದಲ್ಲಿ ದೇವದಾಸಿ ಪದ್ಧತಿಯ ಅಭಿವ್ಯಕ್ತಿ

ದಕ್ಷಿಣ ಮಹಾರಾಷ್ಟ್ರದ ಕೆಲವು ಪ್ರದೇಶಗಳಲ್ಲಿ ಕಾಣಸಿಗುವ ದೇವದಾಸಿಯರು 'ದೇವಾಲಯ ಮಹಿಳೆ'ಯರಲ್ಲ. ಗಾವಗಡ (ಹಳ್ಳಿಯ ಪರಿಧಿ)ದ ಒಳಗೇ ಧಾರ್ಮಿಕ ವಿಧಿಯ ಕಾರ್ಯ ನಡೆಸುವ ದಲಿತ ಜಾತಿಗಳಿಂದ ಬಂದ ದೇವದಾಸಿಯರು ಇವರು. ದೇವದಾಸಿ ಪದ್ಧತಿಯ ನಿರ್ಮೂಲನಕ್ಕಾಗಿ 1970ರ ದಶಕದಲ್ಲಿ ನಡೆದ ಜನಾಂದೋಲನ ಹಾಗೂ ಅಂದಿನ ಮಹಿಳಾ ಚಳವಳಿಗಳು ವೇಶ್ಯಾಗಾರಿಕೆ ಕುರಿತಂತೆ ಹುಟ್ಟುಹಾಕಿದ ಚರ್ಚೆಗಳು, ಸಂವಾದಗಳು ಮತ್ತು ವಾಗ್ವಾದಗಳಿಂದ ಹೊಮ್ಮಿಬಂದ ವಿಚಾರಗಳು ಮರಾಠಿ ಭಾಷೆಯ ಸಾಹಿತ್ಯ ಪಠ್ಯಗಳಲ್ಲಿ ದೇವದಾಸಿ ಸಂಕಥನಗಳಿಗೆ ಅವಕಾಶವೊದಗಿಸಿದವು. ಈ ವಸ್ತುವನ್ನು ಕೇಂದ್ರವಾಗಿ ಇಟ್ಟುಕೊಂಡು ಗಮನಾರ್ಹ ಪ್ರಮಾಣದಲ್ಲಿ ಮರಾಠಿ ಸಾಹಿತ್ಯ 1980ರ ದಶಕದಲ್ಲಿ ಸೃಷ್ಟಿಯಾಯಿತು. ಈ ಜನಪ್ರಿಯ ಸಾಹಿತ್ಯ-ಪಠ್ಯಗಳ ಓದು ಮತ್ತು ವಿಶ್ಲೇಷಣೆಗಳ ಮೂಲಕ ಗಾವಗಡದ ಚೌಕಟ್ಟಿನೊಳಗೆ ದೇವದಾಸಿ ಪದ್ಧತಿ ಒಂದು ದಾಂಪತ್ಯದಾಚೆಗಿನ ಲೈಂಗಿಕ ವಿನಿಮಯವಾಗಿ ಹೇಗೆ ಬೆಳೆದಿದೆ ಮತ್ತು ಹಳ್ಳಿಯ ಧಾರ್ಮಿಕ ವಿಧಿಗೂ, ಸಾಂಸ್ಕೃತಿಕ ದುಡಿಮೆಗೂ ಹೊಂದಿಸಿ ಕೆಳಜಾತಿ ಮಹಿಳೆಯರ ಬದುಕುಗಳನ್ನು ಹೇಗೆ ಈ ಲೈಂಗಿಕ ವಿನಿಮಯಕ್ಕೆ ಸಂಘಟಿಸಲಾಗುತ್ತದೆ ಎಂಬುದನ್ನು ನಿರೂಪಿಸುವುದು ಈ ಪ್ರಬಂಧದ ಉದ್ದೇಶವಾಗಿದೆ. ಈ ವಿಶ್ಲೇಷಣೆ ಮತ್ತು ಅಧ್ಯಯನಕ್ಕಾಗಿ ಕೆಳಕಂಡ ಸಾಹಿತ್ಯ ಪಠ್ಯಗಳನ್ನು ಆಯ್ದುಕೊಂಡಿದೆ:

1) ದೇವನಾರಿ : (ನಾಟಕ) ಲೇಖಕ : ಪ್ರೇಮಾನಂದ ಗಜ್ವಿ, 1981
2) 'ನಾಪಟ್' (ಕಾದಂಬರಿ) ಲೇ: ಬಲವಂತ್ ಕಾಂಬ್ಳೆ, 1984
3) ಚೌಂಡ್‌ಕಾ (ಕಾದಂಬರಿ) ಲೇ: ರಾಜನ್ ಗವಸ್, 1985
4) ಝುಳ್ವಾ (ಕಾದಂಬರಿ) ಲೇ: ಉತಮ್ ಬಂಧು ತುಪೆ, 1986
5) ಭಂಡಾರ್ ಭೋಗ್ (ಕಾದಂಬರಿ) ಲೇ: ರಾಜನ್ ಗವಸ್, 1988
6) ದೇವದಾಸಿ (ನಾಟಕ) ಲೇ: ಅತಿವಾಡಕರ್, 1988.

'ದೇವನಾರಿ' (ದೇವರ ಪತ್ನಿ) ಎಂಬ ನಾಟಕ ಕೆಳಜಾತಿಯ ದೇವದಾಸಿಯರನ್ನು ಮೇಲ್ಜಾತಿ ಪುರುಷರು ಶೋಷಿಸುವುದಕ್ಕೆ ಬ್ರಾಹ್ಮಣಧರ್ಮ ಹೇಗೆ ಅನುಕೂಲ ಕಲ್ಪಿಸಿರುತ್ತದೆ ಎಂಬುದನ್ನು ಎತ್ತಿ ತೋರಿಸುತ್ತದೆ. ದೇವಿಗೆ ದತ್ತಿಬಿಡುವುದನ್ನು ತಪ್ಪಿಸಲು ದೇವದಾಸಿಯೊಬ್ಬಳು ನಡೆಸುವ ದೀರ್ಘವಾದ ಹೋರಾಟದಲ್ಲಿ ಆಕೆ ಧೈರ್ಯವಾಗಿ ಎಲ್ಲಮ್ಮದೇವಿ ಮೂರ್ತಿಯನ್ನೇ ಮುರಿದುಹಾಕುವುದನ್ನು ಈ ಕೃತಿ ಚಿತ್ರಿಸುತ್ತದೆ. ಲೇಖಕರು ಈ ಕೃತಿಯನ್ನು 'ಬಾಜಾರ್ ಬಸವಿಯರ ಉಜ್ವಲ ಪರಂಪರೆಗೆ' ಅರ್ಪಣೆ ಮಾಡಿದ್ದಾರೆ.

'ನಾಪಟ್' ಎಂದರೆ ಅಸಂಬದ್ಧ/ಅಗೌರವದ್ದು ಎಂದು ಅರ್ಥ. ಲೇಖಕ ಬಲವಂತ್ ಕಾಂಬ್ಳೆ ಈ ಕಾದಂಬರಿಯನ್ನು "ದೇಶದ ಕುರುಡು ಧರ್ಮವು ದೇವದಾಸಿಯಾಗಿ ಮಾತ್ರ ಬದುಕಲು ಬಿಟ್ಟ ನನ್ನ ಅಜ್ಜಿ ಗಂಗಾಬಾಯಿ ಏಲೂ ಸಾಳೂಬಾಯಿ ಕಾಂಬ್ಳೆಗೆ ಅರ್ಪಿಸಿ"ರುವುದಾಗಿ ಸಾರಿದ್ದಾರೆ. 'ನಮ್ಮ (ಕೆಳಜಾತಿ) ಹೆಣ್ಣುಗಳನ್ನು ನಿಮಗೆ (ಮೇಲ್ಜಾತಿಯವರಿಗೆ) ಮಾರಿದರೆ ನಿಮಗೆ ಅದು ಅನುಕೂಲಕರ ವಿರಬಹುದು. ಆದರೆ ನಮಗಾಗುವ ಪ್ರಯೋಜನವೇನು? ಎಂಬ ಪ್ರಶ್ನೆಯಿಂದಲೇ ಪ್ರಾರಂಭವಾಗುತ್ತದೆ ಈ ಕಾದಂಬರಿ.

'ಝುಳ್ವಾ' ಎಂದರೆ ಜೋಡಿಸಿಕೊಂಡದ್ದು. ಮದುವೆ ಅಲ್ಲದ ಆದರೆ ಜೋಗಿತಿಯು ಒಬ್ಬನೇ ಪುರುಷನಿಗೆ ಕಟ್ಟಿಕೊಳ್ಳುವ ಸ್ಥಿರವಾದ ಲೈಂಗಿಕ ಸಂಬಂಧವಿದು. ದೇವದಾಸಿಗೆ ಇಂತಹ ಆಯ್ಕೆಯೊಂದಕ್ಕೆ ಅವಕಾಶ ವಿದ್ದರೂ ಅದನ್ನು ಆಕೆ ಪಡೆಯಲಾಗದಂತೆ ಯಜಮಾನ ವ್ಯವಸ್ಥೆ ನಾನಾ ಅಡ್ಡಿಗಳನ್ನು





ಹುಟ್ಟುಹಾಕುವುದನ್ನು ಈ ಕಾದಂಬರಿ ಎತ್ತಿ ತೋರಿಸುತ್ತದೆ. 'ಝುಳ್ವಾ' ಸಂಬಂಧದಲ್ಲಿ ಜೋಗಿತಿಯನ್ನು ಕೂಡಿಕೊಂಡಾಗ, ಆಕೆಯ ಜೀವನಕ್ಕೆ ಆರ್ಥಿಕ ಬೆಂಬಲವನ್ನು, ಅವಳಿಗೆ ಹುಟ್ಟುವ ಮಕ್ಕಳಿಗೆ ತನ್ನ ಹೆಸರನ್ನೂ ನೀಡಬೇಕಾದ್ದು ನಿಯಮ. ಇಂತಹ ಸಂಬಂಧವೊಂದನ್ನು ಒಪ್ಪಿಕೊಳ್ಳುವುದರಲ್ಲಿ ದೇವದಾಸಿಯರು ಅನುಭವಿಸುವ ತಳಮಳ, ಆತಂಕಗಳು, ಅವರ ಕನಸುಗಳು, ಬಯಕೆಗಳು, ಅಪಮಾನಗಳನ್ನು ಬೆಳಕಿಗೆ ತರುತ್ತದೆ ಈ ಕಾದಂಬರಿ.

'ಭಂಡಾರ' ಎಂಬ ಪದವು ಅರಿಶಿನ ಕುಂಕುಮಗಳೆರಡಕ್ಕೂ ಬಳಸುವ ಪದ. ಆದರೆ ಜೋಗಿತಿ ದೀಕ್ಷೆತೊಟ್ಟ ಮಹಿಳೆ ಹಣೆ ತುಂಬ ಅರಿಶಿನವನ್ನು ಬಳಿದುಕೊಳ್ಳಬೇಕಾದ್ದು ಒಂದು ಧಾರ್ಮಿಕ ವಿಧಿ. ಆದ್ದರಿಂದ ಭಂಡಾರ ಎಂಬ ಪದವು ದೇವಿಗೆ ಅರ್ಪಿತವಾದವಳು ಎಂಬುದನ್ನೂ ಸಂಕೇತಿಸುತ್ತದೆ. 'ಭಂಡಾರ್ ಭೋಗ್' ಒಬ್ಬ ರೈತಜಾತಿಗೆ ಸೇರಿದ ಜೋಗ್ತನ ಹೋರಾಟದ ಕಥೆ. ದೇವಿಗೆ ಮುಡುಪಾಗಿಟ್ಟಿದ್ದರ ಫಲವಾಗಿ ಅವನು ಅನುಭವಿಸುವ ನೋವು, ತೀವ್ರವಾದ ಅವಮಾನ ಹಾಗೂ ಹೆಣ್ಣಿನಂತೆ ಉಡುಪು ತೊಡುವುದರಲ್ಲಿ ಹಾಗೂ ಪುರುಷತ್ವವನ್ನು ನಿರಾಕರಿಸಿಕೊಳ್ಳಬೇಕಾದಾಗ ತನ್ನ ಅಸ್ಮಿತೆಯನ್ನೇ ಹೊಂದಾಣಿಕೆ ಮಾಡಿಕೊಳ್ಳುವುದಕ್ಕಾಗಿ ಅವನು ಪಡುವ ಪಾಡುಗಳು ಈ ಕಾದಂಬರಿಯ ವಸ್ತು. ಜೋಗ್ತಿಯರ ಹಾಗೂ ಜೋಗ್ತರ ದೈನಂದಿನ ಜೀವನ ರೀತಿಗಳನ್ನು ಅವರ ಸಾಂಸ್ಕೃತಿಕ ಹಾಗೂ ಭೌತಿಕ ಜಗತ್ತುಗಳನ್ನು ಅವರ ನಡುವಿನ ಸೆಣಸಾಟ ಹಾಗೂ ಅಂತರ್ಜಾಲಗಳನ್ನು ಈ ಕೃತಿ ಚಿತ್ರಿಸುತ್ತದೆ.

ಅತಿವಾಡಕರ್ ಅವರ 'ದೇವದಾಸಿ' ನಾಟಕದಲ್ಲಿ ಲೇಖಕರು ದಲಿತ ಸಂಘರ್ಷ ಚಳವಳಿ ರಾಜಕೀಯಕ್ಕಾಗಿ ದಲಿತತೆಯನ್ನು ಬಳಸಿಕೊಳ್ಳುವುದನ್ನು ವಿರೋಧಿಸಿ ಗಾಂಧಿಯವರು ಎತ್ತಿ ಹಿಡಿದ 'ಹರಿಜನ' ಪರಿಕಲ್ಪನೆಯನ್ನು ಬೆಂಬಲಿಸುತ್ತಾರೆ. ಇದು ಅಂಬೇಡ್ಕರ್‌ವಾದಿಗಳಿಗೆ ಒಪ್ಪಿತವಲ್ಲ. ಈ ಎಲ್ಲ ಸಾಹಿತ್ಯ ಪಠ್ಯಗಳೂ ಹಲವು ಬಾರಿ ಮುದ್ರಣ ಕಂಡ ಹೆಗ್ಗಳಿಕೆ ಇರುವಂಥ ತುಂಬ ಜನಪ್ರಿಯ ಕೃತಿಗಳು, ದೇವದಾಸಿ ಪದ್ಧತಿ ನಿರ್ಮೂಲನಕ್ಕಾಗಿ 1970ರ ದಶಕದಲ್ಲಿ ನಡೆದ ಚಳವಳಿಯಲ್ಲಿ ಸ್ವತಃ ಭಾಗವಹಿಸಿದ್ದವರು ಈ ಲೇಖಕರಲ್ಲಿದ್ದಾರೆ. ಇನ್ನು ಕೆಲವರು ದೇವದಾಸಿ ಮನೆತನದಿಂದಲೇ ಬಂದವರಾಗಿದ್ದಾರೆ.

ಹಳ್ಳಿಗಳಲ್ಲಿ ಬೇರೆ ಬೇರೆ ಜಾತಿಗಳ ನಡುವೆಯೂ, ಒಂದೇ ಜಾತಿಯ ಒಳಗಡೆಯೂ ಇರುವಂಥ ಎಳೆದಾಟಗಳು, ಸ್ಪರ್ಧೆಗಳನ್ನು, ಅದಕ್ಕಿಂತ ಹೆಚ್ಚಾಗಿ ಬ್ರಾಹ್ಮಣಧರ್ಮದ ವ್ಯವಸ್ಥೆಯ ದ್ವಿಸ್ತರೀಯ ಮಾನದಂಡಗಳನ್ನು, ಕೆಳಜಾತಿಯವರು ತಮ್ಮ ಅವಮಾನದ ವಿರುದ್ಧವಾಗಿ ನಡೆಸುವ ಹೋರಾಟಗಳನ್ನೂ 'ನಾಪಟ್' ಕಾದಂಬರಿ ಬೆಳಕಿಗೆ ತರುತ್ತದೆ.

ದೇವರಿಗೆ ಮಕ್ಕಳನ್ನು ಮೀಸಲು ಬಿಡುವುದನ್ನು ಮೂಢನಂಬಿಕೆಯೆಂದು ತಿರಸ್ಕರಿಸುವುದಕ್ಕೆ ಭಿನ್ನವಾಗಿ 'ಚೌಂಡ್‌ಕಾ' ಕಾದಂಬರಿ ರೈತ ಕುಟುಂಬವೊಂದು (ಕುಲವಾಡಿ) ತಮ್ಮ ಮನೆ ಮಗಳನ್ನು ದೇವಿಗೆ ಮುಡಿಪಾಗಿಸುವ ನಿರ್ಧಾರ ಮಾಡಬೇಕಾದಾಗ ಎಂತೆಂಥ ಸಂಕಟ, ತಳಮಳ, ಆತಂಕ ಭೀತಿಗಳನ್ನು ಅನುಭಪಿಸುತ್ತದೆ ಎಂಬುದನ್ನೂ, ತಮ್ಮ ಮಗಳು ಜೋಗಿತಿಯಾಗಿ ಆ ಜೀವನದ ಸಂಕಟಗಳಲ್ಲಿ ತೊಳಲುವಾಗ ಕಣ್ಣಾರೆ ಅದನ್ನು ಕಾಣುತ್ತಾ ತಂದೆತಾಯಿಗಳು ನೊಂದುಕೊಳ್ಳುವ ರೀತಿಯನ್ನೂ ಚಿತ್ರಿಸುತ್ತದೆ. ಜೋಗಿತಿಯಾಗಿ ಸ್ವಚ್ಛಂದಚಾರಿಣಿ ಎನ್ನಿಸಿಕೊಂಡ ಮಗಳ ಲೈಂಗಿಕ ಸಂಬಂಧಗಳಿಂದಾಗಿ ಅವರು ತಮ್ಮ ಮರ್ಯಾದೆಗೆ ಕಳಂಕ ಬಂದಿತೆಂದು ಪಡುವ ಯಾತನೆಗಳೂ ಇಲ್ಲಿವೆ. ಹಳ್ಳಿಯೊಳಗಿನ ಧಾರ್ಮಿಕ, ಸಾಂಸ್ಕೃತಿಕ ಬದುಕನ್ನು ಪರಸ್ಪರ ಹಂಚಿಕೊಂಡ ರೀತಿಯದೆಂದು ಜೋಗಿತಿಯರ ಜೀವನದ ದೈನಂದಿನ ವಿವರಗಳನ್ನು ಈ ಕೃತಿ ಪ್ರತಿಪಾದಿಸುತ್ತದೆ.

ಧೃವೀಕೃತ ವಿರೋಧಿ ದ್ವಂದ್ವಗಳ ಹೊರಗೆ

ಭಾರತದಲ್ಲಿ ವೇಶ್ಯಾವೃತ್ತಿಯಲ್ಲಿ ತೊಡಗಿರುವವರಲ್ಲಿ ಬಹುಸಂಖ್ಯಾತ ಮಹಿಳೆಯರು ಕೆಳಜಾತಿಗಳಿಂದ ಬಂದವರೇ ಎಂಬುದನ್ನು ವ್ಯಾಪಕವಾಗಿ ಗುರುತಿಸಲಾಗುತ್ತದೆ. ಇದಕ್ಕೆ ಅವರ ಬಡತನ ಮತ್ತು ನಿರಕ್ಷರತೆಗಳು ಕಾರಣವೆಂದು ಭಾವಿಸಲಾಗುತ್ತದೆ. ಆದರೆ ಜಾತಿ ಸಂರಚನೆಗಳೂ ಧಾರ್ಮಿಕ ಆಚರಣೆಗಳ ಜೊತೆ ಸೇರಿರುತ್ತವೆ. ದೇವದಾಸಿ ಪದ್ಧತಿ ಲೈಂಗಿಕ ಸೇವೆಗಾಗಿ ಸಂಘಟಿತವಾಗಿದ್ದರೆ ಅಲ್ಲಿ ಧರ್ಮ, ಜಾತಿಗಳೆರಡೂ ಕೆಲಸ ಮಾಡುತ್ತಿರುತ್ತವೆ ಎನ್ನುವುದನ್ನು ಈ ಪ್ರಬಂಧ ನಿರೂಪಿಸಲು ಯತ್ನಿಸುತ್ತದೆ.

ಕೆಳಜಾತಿಗಳ ಮಹಿಳೆಯರನ್ನು ಕೇವಲ ಮಹಿಳೆ ಎಂದು ನೋಡದೆ, ದೇವದಾಸಿ ತನದ ಮೂಲಕ ಸಂಸ್ಥೀಕರಿಸಿ, ಅವರ ಲೈಂಗಿಕ ಸೇವೆಗಳೆಲ್ಲ 'ಮೇಲ್ಜಾತಿ' ಪುರುಷರಿಗೆ ಮಾತ್ರ (ಅವರೂ ಕೇವಲ ಪುರುಷರೆಂದಲ್ಲ) ದೊರಕುವಂತೆ ಜಾತಿ ಸಂರಚನೆಗಳು ಕಾರ್ಯನಿರತವಾಗಿರುತ್ತವೆ. ಕೆಳಜಾತಿಗಳ ಜೋಗಿತಿಯರು ನಿರ್ದಿಷ್ಟ ರೀತಿಯ ಧಾರ್ಮಿಕ ವಿಧಿಗಳನ್ನು ನಡೆಸುವವರು. ದೇವಿಯ ಕೊಂಡಾಟಕ್ಕಾಗಿ ಹಾಡುವ, ನರ್ತಿಸುವ ರೀತಿಯ ಸಾಂಸ್ಕೃತಿಕ ದುಡಿಮೆಯಿಂದ ಜನಕ್ಕೆ ಮನೋರಂಜನೆಯನ್ನು ಒದಗಿಸುವವರೂ ಆಗಿರುತ್ತಾರೆ. ಆದರೆ ಅವರ ಈ ಕಾಯಕವು ಸಹಜ ಗೃಹಸ್ಥ ಜೀವನದ ಹೊರಗಡೆಗೆ, ದಾಂಪತ್ಯೇತರ ಲೈಂಗಿಕ ದುಡಿಮೆಗೆ ಅವರನ್ನು ಜೋಡಿಸುತ್ತದೆ. ಹೀಗೆ ಜೋಡಿಸುವುದನ್ನು ನ್ಯಾಯಬದ್ಧಗೊಳಿಸಲು ಯಜಮಾನ ವ್ಯವಸ್ಥೆ ಅನುಸರಿಸುವ ವಿಧಾನಗಳತ್ತ ಗಮನ ಸೆಳೆಯಲು ಇಲ್ಲಿನ ಯತ್ನವಿದೆ.

(ಮುಂದಿನ ಸಂಚಿಕೆಯಲ್ಲಿ)

ಈ ಹುಡುಗಿ ಹೆಣಗುತ್ತಾಳೆ
ಪರಾಕುಗಳಲಿ ಕೆತ್ತಿರುವ ಪ್ರಮಾಣಬದ್ಧದ ಪ್ರತಿಮೆ ಕೆಡಿಸುವುದಕ್ಕೆ
ರಿಯಾಯಿತಿ ಬಟ್ಟುಗಳಲಿ ತೂಗಲ್ಪಡುವ ವಾಮಭಾಗದ ರದ್ದತಿಗೆ
ಆತ್ಮಸಂಧಾನಕ್ಕೆ ಅವನುಂಟು ಇವನುಂಟೆಂಬ ಸುಳ್ಳು ಸಮಾಧಾನ
ಗಳ ನಿಷೇಧಕ್ಕೆ ಇಬ್ಬಂದಿ ಸಿದ್ಧಾಂತಗಳ ಕೆಸರು ದಾರಿಯ ನಾಕಾಬಂದಿಗೆ

–ಲಲಿತಾಸಿದ್ಧ ಬಸವಯ್ಯ
('ಹೊಸ ಪದ್ಯ' ದಾರಿನೆಂಟ ಸಂಕಲನದಿಂದ)

ಆಕಾಶಮಲ್ಲಿಗೆಯ ಘಮ

ನೀವೂ ಓದಿ


● *ಡಾ.ಎಲ್.ಸಿ. ಸುಮಿತ್ರಾ, ತೀರ್ಥಹಳ್ಳಿ*

ಸೃಜನಶೀಲ ಮನವೊಂದರ ಸೃಷ್ಟಿಯಾದ 'ಆಕಾಶಮಲ್ಲಿಗೆಯ ಘಮ' ಕಥಾಸಂಗ್ರಹದ ಲೇಖಕಿ, ಡಾ. ಎಲ್.ಜಿ. ಮೀರಾ. ಇದು ಅವರ ಮೊದಲ ಕಥಾಸಂಗ್ರಹ. ಮೀರಾ ಕಥೆಗಾರ್ತಿಯಾಗುವ ಮೊದಲೇ ಅನುವಾದಕಿಯಾಗಿ, ವಿಮರ್ಶಕಿಯಾಗಿ ಗಮನ ಸೆಳೆದಿರುವವರು. ಅನುವಾದಕ್ಕಾಗಿ ಸಾಹಿತ್ಯ ಅಕಾಡೆಮಿಯಿಂದ ಬಹುಮಾನವನ್ನು ಅವರು ಪಡೆದಿದ್ದಾರೆ. ಮಾನುಷಿಯ ಮಾತು, ಬಹುಮುಖ, ತಮಿಳು ಕಾವ್ಯ ಮೀಮಾಂಸೆ ಅವರು ಅನುವಾದಿಸಿ ಪ್ರಕಟಿಸಿರುವ ಕೃತಿಗಳಲ್ಲದೆ ಹಲವಾರು ಲೇಖನಗಳನ್ನು ಅನುವಾದಿಸಿದ್ದಾರೆ. 'ಸ್ತ್ರೀ ಸಂವೇದನೆಯಲ್ಲಿ ಕನ್ನಡ ಕಥನ' ಅವರ ಸಂಶೋಧನಾ ಪ್ರಬಂಧ. 'ರಂಗಶಾಲೆ' ಎಂಬ ಹೆಸರಿನ ಮಕ್ಕಳನಾಟಕಗಳ ಸಂಗ್ರಹವನ್ನೂ ಪ್ರಕಟಿಸಿದ್ದಾರೆ. ಮೀರಾ ಕವಿಯೂ ಹೌದು. ಈ ಕಥೆ, ಕವಿತೆ, ವಿಮರ್ಶೆ, ಇನ್ನಿತರ ಬರಹಗಳ ಲೇಖಕಿ ಮೀರಾ ಸಂಗೀತ, ನೃತ್ಯಗಳಲ್ಲಿ ವಿದುಷಿಯೂ ಆಗಿದ್ದಾರೆ. ವಿಜ್ಞಾನದ ಪದವಿಯ ನಂತರ, ಕನ್ನಡ ಎಂ.ಎ.,ಪಿಎಚ್.ಡಿ. ಮಾಡಿ ಪೋಸ್ಟ್ ಡಾಕ್ಟರಲ್ ಪ್ರಬಂಧವನ್ನೂ ರಚಿಸಿದ್ದಾರೆ. ಮೀರಾ ಬಹುಮುಖಿ ಪ್ರತಿಭೆಯ ಜತೆಗೆ ಸಾಹಿತ್ಯಾಭ್ಯಾಸವನ್ನು ಶ್ರದ್ಧೆಯಿಂದ ಮಾಡುವ ಮೃದುಭಾಷಿ. ತಮ್ಮ 'ಚಿತ್ರನಾಟ್ಯ' ಸಂಸ್ಥೆಯ ಕೆಲಸ ಇರಲಿ, ವಿಶ್ವವಿದ್ಯಾಲಯದ ಪಠ್ಯಪುಸ್ತಕದ ಕೆಲಸವೇ ಇರಲಿ ತಾರತಮ್ಯವಿಲ್ಲದೆ ತಮ್ಮನ್ನು ತೊಡಗಿಸಿಕೊಳ್ಳುವವರು. ಲೇಖಕಿಯ ಈ ಅನುಭವ ಮತ್ತು ವ್ಯಕ್ತಿತ್ವ ಅವರ 'ಆಕಾಶಮಲ್ಲಿಗೆ'ಯ ಕಥೆಗಳನ್ನು ರೂಪಿಸಿದೆ. ಈ ಕಥೆಗಳ ಹಿಂದಿರುವ ಸ್ತ್ರೀ ವಾದವೂ ಮೆಲುದನಿಯದು. ಆದರೆ ಎಲ್ಲ ಕಥೆಗಳು ಗಾಢ ಮಾನವೀಯ ಅನುಕಂಪದಿಂದ ಕೂಡಿದ್ದು ಲೇಖಕಿಯ ಜೀವನ ಪ್ರೀತಿಗೆ, ಸೂಕ್ಷ್ಮ ಸಂವೇದನೆಗೆ ಸಾಕ್ಷಿಯಾಗಿವೆ. ಮೀರಾ ಅಧ್ಯಾಪಕಿಯಾಗಿರುವುದರಿಂದ ಸಹಜವಾಗಿಯೇ ಆ ಕ್ಷೇತ್ರದ ಚಿತ್ರಗಳನ್ನೇ ಹೆಚ್ಚಾಗಿ ಕಟ್ಟಿಕೊಟ್ಟಿದ್ದಾರೆ.

'ಮೋಹನ್ ಭಾಗವತರ್ ಎಂಬ ಮೇಷ್ಟ್ರು . . . ಕಥೆ ನನ್ನನ್ನು ತೀವ್ರವಾಗಿ ಕಾಡಿತು. ಇವತ್ತಿನ ಕಾಲೇಜು ಶಿಕ್ಷಣದ ನೈಜ ಚಿತ್ರವೊಂದು ಇಲ್ಲಿ ಒಡಮೂಡಿದೆ. ಅಧ್ಯಾಪಕಿಯೊಬ್ಬಳು ಅನುಭವಿಸುವ ಹಿಂಸೆಗಳೂ ಈ ಕಥೆಗಳಲ್ಲಿ ಸೂಚ್ಯವಾಗಿ ಅಭಿವ್ಯಕ್ತ ಗೊಂಡಿವೆ. 'ಕಾಯುತಿದೆ ಬದುಕು' ಕೂಡ ವಿದ್ಯಾರ್ಥಿ, ಅಧ್ಯಾಪಕರ ಕಥೆಯೇ ಆದರೂ ಕಥೆಯ ಕೇಂದ್ರ ಬೇರೆ. ಲೈಂಗಿಕ ಕಾರ್ಯಕರ್ತೆ ಯೊಬ್ಬಳ ಮಗ ನಾಗರಿಕ ಸಮಾಜದ ಮೌಲ್ಯಗಳ ನಡುವೆ ಪಡುವ ಯಾತನೆ, ಅನುಭವಿಸುವ ಕಷ್ಟಗಳನ್ನು ಲೇಖಕಿ ಬಹಳ ಸೂಕ್ಷ್ಮವಾಗಿ ಚಿತ್ರಿಸಿದ್ದಾರೆ. ತಾಯಿಯ ಬಗ್ಗೆ ಅಸಮಾಧಾನವನ್ನು ಹೊಂದಿದ್ದ ಪರಮೇಶನಿಗೆ ಹಸಿವು, ತಾಯಿಯ ಕಷ್ಟವೇನು ಎಂಬ ಅರಿವು ಮೂಡಿಸಿತು. ಎಂದು ಮುಗಿಯುವ ಕಥೆ, ಪರಮೇಶನಿಗಾಗಿ 'ಬದುಕು ಕಾಯುತಿದೆ' ಎಂಬ ಆಶಾವಾದವನ್ನು ವ್ಯಕ್ತಪಡಿಸುತ್ತದೆ. ಹಾಗೆಯೇ 'ಬದುಕು ಕಾಯುವುದಿಲ್ಲ' ಎಂಬ ನೇಮಿಚಂದ್ರರ ಕಥೆಯನ್ನು ನೆನಪಿಸುತ್ತದೆ.

ಸಂಕಲನದ ಮಹಾತ್ವಾಕಾಂಕ್ಷೆಯ ಕಥೆ 'ಆಕಾಶಮಲ್ಲಿಗೆಯ ಘಮ' ಹೆಸರಿನಂತೆಯೇ ಸುಕುಮಾರ ಅಭಿವ್ಯಕ್ತಿಯನ್ನು ಹೊಂದಿದೆ. 'ಓದುತ್ತಿದ್ದ ಹುಡುಗ ಹುಡುಗಿಯರ ಕನಸುಗಳೇ ಹೂಗಳಾಗಿವೆ ಯೇನೋ ಎಂಬಂತೆ ಮೈತುಂಬ ಹೂ ತುಂಬಿಕೊಂಡಿದ್ದ ಆಕಾಶಮಲ್ಲಿಗೆ ಮರ' ಮನುಷ್ಯರ ಮಾತಿನ ಕೃತ್ರಿಮಕ್ಕಿಂತ ಮೌನದ ಸೃಷ್ಟಿಶೀಲತೆಯ ಮಹತ್ವವನ್ನು ಸಾರುವ ಮರ ಲೇಖಕಿಯ ಆಶಯಕ್ಕೆ ರೂಪಕವಾಗಿದೆ. 'ಆಕಾಶಮಲ್ಲಿಗೆ' ಎಂಬ ಹೆಸರು ನಮ್ಮ ಕೈಗೆ ಸಿಗಲಾರದ ಆದರೆ ನಾವು ಬಯಸುವ 'ಏನೋ ಒಂದನ್ನು' ಸೂಚಿಸುವ ಸುಂದರ ರೂಪಕವಾಗಿ ಇಲ್ಲಿ ಬಳಕೆಯಾಗಿದೆ. ಲೇಖಕಿಯ ಸೂಕ್ಷ್ಮ ಸಂವೇದನೆಯ, ಸದಭಿರುಚಿಯ ಪ್ರತೀಕವಾಗಿ ಈ ಕಥೆ ಮೂಡಿಬಂದಿದೆ. 'ವಿಚಿತ್ರ ಮುಖಗಳು' ನಗರ ಜೀವನದಲ್ಲಿ ಹೊರಗೆ ದುಡಿಯಲು ಹೋಗುವ ಎಳೆಯ ವಯಸ್ಸಿನ ಹೆಣ್ಣುಮಕ್ಕಳು ಅನುಭವಿಸುವ ಮುಜುಗರ, ಅವಮಾನಗಳ ತೀವ್ರ ಅಭಿವ್ಯಕ್ತಿಯಾಗಿದೆ. 'ಕತ್ತಿ' ಕಥೆಯಲ್ಲಿ ಎರಡು ದೋಣಿಯಲ್ಲಿ ಕಾಲಿಟ್ಟ ಪಯಣಿಗಳಂತೆ ಮಮತ ಗಂಡ, ಮನೆ, ಮಕ್ಕಳು ಮತ್ತು ತನ್ನ ವೃತ್ತಿ ಜೀವನ, ಪ್ರವೃತ್ತಿಯಾದ ಬರವಣಿಗೆ ಎಲ್ಲದಕ್ಕೂ ನ್ಯಾಯ ಒದಗಿಸಲು ಹೋಗಿ ತನ್ನ ವ್ಯಕ್ತಿತ್ವವೇ ಎರಡು ಹೋಳಾದಂತಹ ನೋವನ್ನು ಅನುಭವಿಸುತ್ತಾಳೆ. ಸಂಪ್ರದಾಯದ 'ಕತ್ತಿ' ನಮ್ಮ ಸಮಾಜದಲ್ಲಿ ಹೆಣ್ಣಿನ ರೆಕ್ಕೆ ಕತ್ತರಿಸಿ ಅವಳ ಹಾರುವ ಸಂತೋಷವನ್ನು ನಿಯಂತ್ರಣದಲ್ಲಿಡುತ್ತದೆಂಬುದನ್ನು ಈ ಕಥೆ ಮನೋಜ್ಞವಾಗಿ ಹೇಳುತ್ತದೆ. ಗೃಹಿಣಿ ಬದುಕಿನ ಜತೆ ವೃತ್ತಿ, ಪ್ರವೃತ್ತಿ ಎರಡರಲ್ಲೂ ಯಶಸ್ಸುಗಳಿಸುವುದು ಸ್ತ್ರೀಯರಿಗೆ ಕಷ್ಟವಾಗುವುದು ಯಾಕೆನ್ನುವುದಕ್ಕೆ ಈ ಕಥೆಯಲ್ಲಿ ಉತ್ತರವಿದೆ. 'ಬರೆಯುವುದೆಂದರೆ ಇಡಿಯಾಗುವುದು, ಗಮನವನ್ನೆಲ್ಲ ಒಂದೆಡೆ ಕೇಂದ್ರೀಕರಿಸಿ ಒಂದು ಸಲಕ್ಕೆ ಒಂದು ಕೆಲಸ ಮಾಡುವುದು ಬರೆಯುವ ವಿಷಯದ ಮೇಲೆ ಸಂಪೂರ್ಣ ಮನಸ್ಸಿಟ್ಟು ಏಕಾಗ್ರವಾಗಿ, ಕಾಲದ ಪರಿವೆ ಇಲ್ಲದೆ ಕೆಲಸ ಮಾಡುವುದು, ಆಗ ಯಾವ ಕತ್ತಿಯೂ ನೆನಪಾಗುವುದಿಲ್ಲ' (ಪುಟ–45) ಎಂಬಲ್ಲಿ ಆಕೆಗೆ ತನ್ನ ವ್ಯಕ್ತಿತ್ವವನ್ನು ಇಡಿಯಾಗಿ ಇರಿಸಿಕೊಳ್ಳಲು ಬರೆಯುವುದೊಂದೇ ಮಾರ್ಗ ಎಂದು ತಿಳಿದಿದ್ದರೂ ಅವಳ ದಿನಚರಿಯಲ್ಲಿ ಅದಕ್ಕೆ ಅವಕಾಶ ಕಡಿಮೆ. ನಗರವಾಸಿಯಾದ ಉದ್ಯೋಗಸ್ಥ ಗೃಹಿಣಿಯೊಬ್ಬಳು ಸೃಜನಶೀಲ ಚಟುವಟಿಕೆಗಳಿಗೆ ಸಮಯ ವನ್ನು ಹೊಂದಿಸಿಕೊಳ್ಳಲಾರದೆ ಚಡಪಡಿಸುವ ತೀವ್ರವಾದ ಚಿತ್ರಗಳು ಆಕಾಶಮಲ್ಲಿಗೆಯ ಘಮ ಸಂಗ್ರಹದಲ್ಲಿವೆ. ಆದರೆ ಮೀರಾ ಅವರ 'ಕತ್ತಿ' ಕಥೆಯ ಯಶಸ್ಸಿರುವುದು ಕಥೆ ತಾಯಿಯ, ಗೃಹಿಣಿಯ, ಪಾತ್ರವನ್ನೂ ನಿರಾಕರಿಸದೆ ಅದೂ ಉಳಿದೆಲ್ಲ ಸೃಜನಶೀಲ ಕೆಲಸಗಳಂತೆ ದೈನಿಕದ ಅಂಗ ಎಂದು ಭಾವಿಸುವುದರಲ್ಲಿ.

'ಗಾಯ' ಕತೆಯಲ್ಲಿ ಹೆಣ್ಣಿನ ಬೌದ್ಧಿಕತೆಗಿಂತ ಅವಳ ದೈಹಿಕ ಸೌಂದರ್ಯಕ್ಕೆ ಸಮಾಜಕೊಡುವ ಪ್ರಾಮುಖ್ಯತೆ ಅದರಿಂದಾಗಿ,



ಆಕಾಶಮಲ್ಲಿಗೆ ಘಮ

ಎಲ್.ಜಿ. ಮೀರಾ

ಪು: 102, ಬೆಲೆ : ರೂ. 70/–

ಪ್ರ : ಚಿತ್ರನಾಟ್ಯ ಫೌಂಡೇಷನ್
ನಂ. 149, ವಿಜಯನಗರ 2ನೇ ಹಂತ,
ಹಂಪಿನಗರ, ಬೆಂಗಳೂರು–4

ತರುಣ ಅಧ್ಯಾಪಕಿಯೊಬ್ಬಳು ಅನುಭವಿಸುವ ನೋವು ಕಥೆಯಾಗಿದೆ. (ವೀಣಾ ಅವರ 'ಮುಳ್ಳುಗಳು' ಕಥೆ ನೆನಪಾಗುತ್ತದೆ ಈ ಕಥೆಯನ್ನು ಓದುವಾಗ)

'ಸೂಸಿಯಮ್ಮನ ಕಡುಗೆಂಪು ಜರೀಸೀರೆ' ಈ ಸಂಕಲನದ ಇನ್ನೊಂದು ಉತ್ತಮ ಕಥೆ ಅವಳ ಬದುಕಿನ ಏಕತಾನತೆಯನ್ನು ಕತೆ ವಿವರಿಸುವುದು ಹೀಗೆ "ನೈಟಿಯ ಬಣ್ಣ ಬಿಟ್ಟು ಅವಳ ದಿನಚರಿಯಲ್ಲಿ ಹೆಚ್ಚಿನದೇನೂ ಬದಲಾಗುವಂತೆ ಕಾಣುವುದಿಲ್ಲ" ಹೀಗೆ ಕೇರಳದಿಂದ ಬಂದು ಆಯಾ ಕೆಲಸ ಮಾಡುವ ಸೂಸಿಯಮ್ಮನ ಒಂಟಿತನ, ಅವಳೊಳಗಿನ ಹೆಣ್ತನ ಸಂಗಾತಿಗಾಗಿ ಪರಿತಪಿಸುವ ಬಗೆಯನ್ನು ಲೇಖಕಿ ಮನಕರಗುವಂತೆ, ಆದರೆ ಸಂಯಮ ದಿಂದ ನಿರೂಪಿಸಿದ್ದಾರೆ.

'ತಾಯಕಣ್ಣು', 'ಮೌನಕಂಬನಿ', 'ಮರಳು' ತುಂಬ ಆರ್ದ್ರವಾದ ಸಂವೇದನೆಯ ಕತೆಗಳು. 'ವೈರಿಯ ನಾಶ' ಸ್ವಲ್ಪ ವಾಚ್ಯವೆನಿಸುವ ಕಥೆ. 'ಹೊಸ್ತಿಲು' ಸರಳವಾದ ಕಥೆಯಾದರೂ ಇಪ್ಪತ್ತೊಂದನೇ ಶತಮಾನದಲ್ಲೂ ಸಂಪ್ರದಾಯದ ಚೌಕಟ್ಟಿನೊಳಗೆ ಬದುಕಬೇಕಾದ ಹೆಣ್ಣಿನ ಸ್ಥಿತಿಗೆ ಕನ್ನಡಿಯಾಗಿದೆ. ಮೊದಲನೆಯ ಸಂಕಲನದಲ್ಲೇ ವೈವಿಧ್ಯಮಯ ವಸ್ತುಗಳನ್ನು ಕತೆಯಾಗಿಸಿರುವ ಮೀರಾ ಅವರ ಲೇಖನಿಯಿಂದ ಇನ್ನೂ ತೀವ್ರವಾದ ಸಂವೇದನಾಶೀಲ ಕಥೆಗಳು ಮೂಡಲಿ.

ಉನ್ನತ ಶೈಕ್ಷಣಿಕ ಹಿನ್ನೆಲೆಯ ಜತೆಗೆ, ನೃತ್ಯ, ಸಂಗೀತ ಗಳಲ್ಲಿ ಪರಿಶ್ರಮವಿರುವ ಸಂವೇದನಾಶೀಲ ಮನದ ಈ ಲೇಖಕಿಯಿಂದ ಇನ್ನೂ ಹೆಚ್ಚಿನದನ್ನು ನಿರೀಕ್ಷಿಸಬಹುದು. 'ಆಕಾಶಮಲ್ಲಿಗೆಯ ಘಮ'ವನ್ನು ಕಲಾವಿದ ಅಪಾರ ಅವರ ಸುಂದರ ಮುಖಪುಟ ವಿನ್ಯಾಸ ಮತ್ತು ಸಿರಾಜ್ ಅಹಮದ್ ಅವರ ವಿಚಾರಪೂರ್ಣ ಬೆನ್ನುಡಿ ಹೆಚ್ಚಿಸಿವೆ.

> ಈಗ ಮಮತಳಿಗೆ ಸೀಳಿಕೊಂಡು ಬದುಕುವುದು ರೂಢಿಯಾಗಿ ಬಿಟ್ಟಿದೆ. ....ಅವಳು ಸೀಳಿ ಹೋಗಿರುವ ವಿಷಯ ಬೇರೆ ಯಾರಿಗೂ ಗೊತ್ತಾಗುತ್ತಿಲ್ಲವಾದ್ದರಿಂದ ಅವಳ ಜೀವನ ಮೊದಲಿನಂತೆಯೇ ನಡೆಯುತ್ತಿದೆ. ಸಾಮಾನ್ಯವಾಗಿ ತನ್ನ ಸೀಳು ಸ್ಥಿತಿಯಿಂದಾಗಿ ಹಿಂಸೆ ಪಡುತ್ತಲೇ ಇರುವ ಮಮತ, ಎಂದಾದರೊಮ್ಮೆ ಬರೆಯಲು ಬಿಡುವು ಸಿಕ್ಕಿದಾಗ ಮಾತ್ರ ತನ್ನ ಸೀಳಿದ ಗೋಳನ್ನು ಮರೆತು ಇಡಿ ಭಾವದಲ್ಲಿ ಬರೆಯುತ್ತಾಳೆ. ತಾನು ಇಡಿಯಾಗುವ ಕ್ಷಣಗಳಿಗಾಗಿ ಬದುಕಿನೊಂದಿಗೆ ಅವಳ ಚೌಕಾಸಿ ನಡೆದೇ ಇದೆ.
>
> *– 'ಕತ್ತಿ', ಆಕಾಶ ಮಲ್ಲಿಗೆಯ ಘಮ*

❑

ಲೆಕ್ಕ ಸರಿಹೋಗುತ್ತಿಲ್ಲ

ತನ್ನ ಉಸಿರಿಗೂ ಬೆಲೆ ಕಟ್ಟುವಷ್ಟು
ಜಾಣೆ ಈಕೆ ಈಗ.
ಉಸಿರತುಂಬಿ ಅವುಗಳ ಕತ್ತಿಗೊಂದೊಂದು
ಗಂಟು ಹಾಕುತ್ತಲೇ,
ಹಾರಿಹೋಗದಂತೆ ಹಿಡಿಯುವಷ್ಟು ಬಲಿತಿವೆ
ಕೈಗಳೂ
ಹತ್ತರಿಂದ ಹತ್ತರವರೆಗೂ ಇದೇ ಕಾಯಕ
ಬಣ್ಣ ಬೇರೆ-ಬೇರೆಯಾದರೂ ಒಳಗಿನ
ಉಸಿರೊಂದೆ
ಆ ಉಸಿರಿಗೊಂದೇ ಬೆಲೆ

ಹತ್ತಕ್ಕೆ ಎರಡೇ ನಿಮಿಷ
ಈವತ್ತಿಗ್ಗೈವತ್ತಾದರೆ ಸಾಕು
ನಾಳೆಯದು ನಾಳೆಗೆಂದು
ಕಾಯುತ್ತಿದ್ದಾಳೆ ಕೊನೆಯ ಗಿರಾಕಿಗೆ

ಹತ್ತು ರೂಪಾಯಿ ಎಂದರೆ
ನೂರೆನ್ನುತ್ತಿದ್ದಾನೆ ಅವ
ಅವಳು ಹತ್ತು
ಅವ ನೂರು
ಮತ್ತೆ ಅವಳು ಹತ್ತು
ಮತ್ತೆ ಅವ ನೂರು

ಮಾರು ಕೊಡಬಲ್ಲೆ ಈ ಹೊತ್ತಲ್ಲಿ
ನೂರೆಲ್ಲಿಂದ?
ಉಗುಳುನುಂಗುತ್ತಲೇ ಮುಷ್ಠಿಬಿಗಿಗೊಳಿಸುತ್ತಿದ್ದಾಳೆ.

ಅವ ಬಿಡುತ್ತಿಲ್ಲ
ಇನ್ನೂರಾದರೆ? ಎನ್ನುತ್ತಿದ್ದಾನೆ
ಅವನ ಲೆಕ್ಕವನ್ನೆಲ್ಲ ನುಂಗಿಹಾಕುತ್ತಿವೆ
ಬಸ್ಸು, ಲಾರಿ, ಮೋಟಾರು,
ಹೂಂ...
ಕೊನೆಗೂ ಅರ್ಥವಾಗಲೇ ಇಲ್ಲ
ಅವನ ಲೆಕ್ಕ ಇವಳಿಗೆ.

ಉಸಿರಿಗಷ್ಟೇ ಬೆಲೆ ಕಟ್ಟುವುದು ಗೊತ್ತಿದ್ದಾಗ
ಅರ್ಥವಾದೀತಾದರೂ ಹೇಗೆ ಇಂಥ ಲೆಕ್ಕ?

-ಶ್ರೀದೇವಿ ಕಳಸದ

KARNATAKA POWER CORPORATION LTD

ಕೆ.ಪಿ.ಸಿ.ಎಲ್ : ಕರ್ನಾಟಕವನ್ನು ಶಕ್ತಿಯುತಗೊಳಿಸುತ್ತಿದೆ

ಕರ್ನಾಟಕದಲ್ಲಿ ವಿದ್ಯುತ್ ಉತ್ಪಾದನೆಯನ್ನು ಹೆಚ್ಚಿಸುವ ಸಲುವಾಗಿ ಕರ್ನಾಟಕ ವಿದ್ಯುತ್ ನಿಗಮ ನಿಯಮಿತ (ಕವಿನಿನಿ)ವು ನೂತನ ಉಪಕ್ರಮಗಳಿಗೆ ಚಾಲನೆ ನೀಡಿ ಈ ದಿಸೆಯಲ್ಲಿ ಸತತ ಮುಂಚೂಣಿ ಪಾತ್ರವಹಿಸಿರುವ ನಿಗಮ 6000 ಮೆಗಾವಾಟ್ (ಮೆ.ವಾ) ಸ್ಥಾಪಿತ ಸಾಮರ್ಥ್ಯ ಹೊಂದಿದೆ ಮತ್ತು ರಾಜ್ಯದ ವಿದ್ಯುತ್ ಜಾಲದಲ್ಲಿರುವ ಪ್ರತಿಶತ 6.3ರಷ್ಟು ಪಾಲು ನಿಗಮದ್ದಾಗಿದೆ. ಪ್ರಸ್ತುತ ನಿಗಮ 34 ಅಣೆಕಟ್ಟುಗಳನ್ನು ಮತ್ತು 0.35 ಮೆ.ವಾ.ನಿಂದ 1470 ಮೆ.ವಾ.ವರೆಗೆ ವಿವಿಧ ಗಾತ್ರದ ಘಟಕಗಳನ್ನು ಹೊಂದಿರುವ 27 ವಿದ್ಯುದಾಗಾರಗಳನ್ನು ಹೊಂದಿದ್ದು ಇವುಗಳು ಕಾರ್ಯಾಚರಣೆಯಲ್ಲಿವೆ. ಇದರಲ್ಲಿ ತಲಾ 210 ಮೆ.ವಾ. ಸಾಮರ್ಥ್ಯದ 7 ಘಟಕ ಹೊಂದಿರುವ ರಾಯಚೂರು ಶಾಖೋತ್ಪನ್ನ ವಿದ್ಯುತ್ ಕೇಂದ್ರ ಮತ್ತು 500 ಮೆ.ವಾ. ಸಾಮರ್ಥ್ಯದ ಬಳ್ಳಾರಿ ಶಾಖೋತ್ಪನ್ನ ವಿದ್ಯುತ್ ಕೇಂದ್ರ, ಕಪ್ಪತಗುಡ್ಡದಲ್ಲಿ 4.56 ಮೆ.ವಾ. ಪವನ ಶಕ್ತಿ ಕೇಂದ್ರ ಮತ್ತು ಯಲಹಂಕದಲ್ಲಿ 128 ಮೆ.ವಾ. ಸಾಮರ್ಥ್ಯದ ಒಂದು ಡೀಸಲ್ ಕೇಂದ್ರ ಒಳಗೊಂಡಿದೆ.

ನಿಗಮ, ಕರ್ನಾಟಕದ ವಿದ್ಯುತ್ ಯೋಜನೆಗಳನ್ನು ನಿರಂತರವಾಗಿ ಅಭಿವೃದ್ಧಿಗೊಳಿಸುವ ಮೂಲಕ ವಿದ್ಯುತ್ ವಲಯದಲ್ಲಿ ಅಗ್ರಸ್ಥಾನವನ್ನು ಅಲಂಕರಿಸಿದೆ. ತನ್ನ 40 ವರ್ಷಗಳ ಕಾಲಾವಧಿಯಲ್ಲಿ ಕವಿನಿನಿ ದಾಖಲೆಯ ಸಾಧನೆಗೈದಿರುವುದು ಸಂಸ್ಥೆಯ ಉತ್ಕೃಷ್ಟ ಕಾರ್ಯವೈಖರಿಗೆ ಹಿಡಿದ ಕೈಗನ್ನಡಿಯಾಗಿದೆ. ಪ್ರಸಕ್ತ ಕರ್ನಾಟಕ ಸರ್ಕಾರ ಕವಿನಿನಿಗೆ ಗುರುತರ ಜವಾಬ್ದಾರಿಯನ್ನು ವಹಿಸಿರುವ ಕಾರಣ ಮುಂದಿನ ಐದು ವರ್ಷಗಳಲ್ಲಿ ಈ ಹಿಂದೆಂದಿಗಿಂತ ಹೆಚ್ಚಿನ ಸಾಮರ್ಥ್ಯದ ವಿದ್ಯುತ್ತನ್ನು ಉತ್ಪಾದಿಸುವ ಗುರಿ ಹೊಂದಿದೆ.

ಕವಿನಿನಿ ಇತ್ತೀಚೆಗೆ ಸ್ಥಾಪಿಸಿದ ರಾಜ್ಯದ ಪ್ರಪ್ರಥಮ 500 ಮೆ.ವಾ. ಸಾಮರ್ಥ್ಯದ ಬಳ್ಳಾರಿ ಶಾಖೋತ್ಪನ್ನ ವಿದ್ಯುತ್ ಕೇಂದ್ರದ ಮೊದಲ ಘಟಕ ಮತ್ತು 230 ಮೆ.ವಾ. ಸಾಮರ್ಥ್ಯದ ವಾರಾಹಿ ಜಲವಿದ್ಯುತ್ ಯೋಜನೆ-ಎರಡನೇ ಹಂತ ವಿದ್ಯುತ್ ಉತ್ಪಾದನೆಯಲ್ಲಿ ತೊಡಗಿದೆ.

* **ನಿರ್ಮಾಣದಲ್ಲಿರುವ ಪ್ರಸ್ತುತ ಬಳ್ಳಾರಿ ಶಾಖೋತ್ಪನ್ನ ವಿದ್ಯುತ್ ಕೇಂದ್ರದ 500 ಮೆ.ವಾ. ಸಾಮರ್ಥ್ಯದ 2ನೇ ಘಟಕ, 250 ಮೆ.ವಾ. ಸಾಮರ್ಥ್ಯದ ರಾಯಚೂರು ಶಾಖೋತ್ಪನ್ನ ವಿದ್ಯುತ್ ಕೇಂದ್ರದ 8ನೇ ಘಟಕ, ನಾಗಝರಿಯ 30 ಮೆ.ವಾ. ಸಾಮರ್ಥ್ಯದ ಆರ್ ಮತ್ತು ಎಂ, ಹಾಗೂ 9 ಮೆ.ವಾ. ಸಾಮರ್ಥ್ಯದ ಗ್ರಿಡ್ ಸಂಪರ್ಕಿತ ಸೋಲಾರ್ ಫೋಟೋ ವೋಲ್ಟಾಯಿಕ್ ಯೋಜನೆಗಳಿಂದ ನಿಗಮ 2009-10ರೊಳಗೆ 789 ಮೆ.ವಾ. ಸೇರ್ಪಡಿಸಲಿವೆ.**

* **ಪ್ರಸ್ತಾಪಿತ ನೂತನ ಜಲ, ಕಲ್ಲಿದ್ದಲು ಆಧಾರಿತ ಶಾಖೋತ್ಪನ್ನ, ಪಿಟ್ ಹೆಡ್ ಶಾಖೋತ್ಪನ್ನ, ಪಂಪ್ಡ್ ಸ್ಟೋರೇಜ್ ವಿದ್ಯುತ್ ಯೋಜನೆಗಳು, ಸೋಲಾರ್ ಫೋಟೋ ವೋಲ್ಟಾಯಿಕ್ ಮತ್ತು ಪವನ ಶಕ್ತಿ ಯೋಜನೆಗಳ ಪೂರ್ವ ಸಿದ್ಧತೆ ಮತ್ತು ಸ್ಥಾಪನಾ ಪೂರ್ವ ಕೆಲಸಗಳು ಪ್ರಗತಿಯಲ್ಲಿವೆ. 11ನೇ ಮತ್ತು 12ನೇ ಯೋಜನಾ ಆರಂಭದ ಅವಧಿಯಲ್ಲಿ 9000ಕ್ಕೂ ಅಧಿಕ ಮೆ.ವಾ. ಸಾಮರ್ಥ್ಯವು ರಾಜ್ಯದಲ್ಲಿ ಸ್ಥಾಪನೆಗೊಳ್ಳಲಿದೆ.**

ಕವಿನಿನಿ ಪ್ರಪ್ರಥಮ ಬಾರಿಗೆ ಛತ್ತೀಸ್‌ಘಡ ರಾಜ್ಯದಲ್ಲಿ ಅಲ್ಲಿನ ಸರ್ಕಾರದ ಸಹಕಾರದೊಂದಿಗೆ **1200 ಮೆ.ವಾ.** ಸಾಮರ್ಥ್ಯದ ಪಿಟ್‌ಹೆಡ್ ಆಧಾರಿತ ಶಾಖೋತ್ಪನ್ನ ಯೋಜನೆಯನ್ನು ಸ್ಥಾಪಿಸಲು ಒಡಂಬಡಿಕೆ ಮಾಡಿಕೊಂಡಿದೆ. ನಿಗಮ ಇತ್ತೀಚೆಗೆ ಯರಮರಸ್ ಮತ್ತು ಯಡ್ಲಾಪುರದಲ್ಲಿ **2400 ಮೆ.ವಾ.**, ಬಳ್ಳಾರಿಯಲ್ಲಿ **500 ಮೆ.ವಾ.** ಸಾಮರ್ಥ್ಯದ 3ನೇ ಘಟಕ ಮತ್ತು ಗುಂಡ್ಯ ಜಲವಿದ್ಯುತ್ ಯೋಜನೆಗೆ **200 ಮೆ.ವಾ.** ಸಾಮರ್ಥ್ಯದ ಮೊದಲ ಹಂತ ಇವುಗಳ ಶಿಲಾನ್ಯಾಸ ನೆರವೇರಿದೆ. ಈ ಯೋಜನೆಗಳೊಂದಿಗೆ ಘಟಪ್ರಭಾದಿಂದ 20 ಮೆ.ವಾ., ಶಿವಸಮುದ್ರಂ ಜಲವಿದ್ಯುತ್ ಯೋಜನೆಯಿಂದ **345 ಮೆ.ವಾ.**, ಪವನಶಕ್ತಿಯಿಂದ **500 ಮೆ.ವಾ.** ಮತ್ತು ತದಡಿ ಅನಿಲ ಆಧಾರಿತ ವಿದ್ಯುತ್ ಸ್ಥಾವರದಿಂದ **2100 ಮೆ.ವಾ.** ವಿದ್ಯುತ್ ಉತ್ಪಾದಿಸಲು ನಿಗಮ ಯೋಜನೆಗಳನ್ನು ಕೈಗೊಳ್ಳಲಿದೆ. ಕರ್ನಾಟಕದ ಸನ್ಮಾನ್ಯ ಮುಖ್ಯಮಂತ್ರಿಗಳ ಘನ ಅಧ್ಯಕ್ಷತೆಯಲ್ಲಿ, ಕವಿನಿನಿ ತನ್ನ ಕನಸನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ ಮುಂದುವರೆದಿದೆ.

ಕರ್ನಾಟಕ ವಿದ್ಯುತ್ ನಿಗಮ ನಿಯಮಿತ

ಶಕ್ತಿ ಭವನ, ಪ್ರಧಾನ ಕಚೇರಿ ನಂ. 82, ರೇಸ್ ಕೋರ್ಸ್ ರಸ್ತೆ, ಬೆಂಗಳೂರು - 560 001
ದೂರವಾಣಿ : 080-22256568, 22269930-37, ಫ್ಯಾಕ್ಸ್ : 080-22252144
E:mail:cccm@karnatakapower.com Website:www.karnatakapower.com

Registered with Registrar of Newspapers of India under No. KARKAN/2007/22289
'NAMMA MANASA', REGD. No. : MAG(3) NPP/399(A) / 2006-07 KA/BGS/2074/2010-12

ನಮ್ಮ ಮಾನಸ

- ಮಹಿಳೆಯರಿಗೆ ಸಂಬಂಧಿಸಿದ ಲೇಖನಗಳು, ವರದಿಗಳು ವಿಶ್ಲೇಷಣೆಗಳು, ವಿಮರ್ಶೆಗಳು, ಅನುಭವಗಳು, ಕತೆ-ಕವನಗಳನ್ನು ನಮ್ಮ ಪತ್ರಿಕೆಯಲ್ಲಿ ಪ್ರಕಟಿಸಲಾಗಿದೆ.
- ಪತ್ರಿಕೆಯು ವಿಷಯಾಧರಿತವಾಗಿದ್ದು, ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಮಹಿಳೆಯರ ಬದುಕಿನ ಮೇಲೆ ಪರಿಣಾಮ ಬೀರುವ ಸಾಮಾಜಿಕ, ರಾಜಕೀಯ, ಆರ್ಥಿಕ ವಿಚಾರಗಳನ್ನು ಚರ್ಚಿಸಲಾಗಿದೆ.
- ವಿವಾಹ, ಕುಟುಂಬದಂತಹ ಸಾಮಾಜಿಕ ಸಂಸ್ಥೆಗಳು, ಮನೆಗೆಲಸ, ಸಂಬಳರಹಿತ ದುಡಿಮೆ, ಆರ್ಥಿಕ ನೀತಿ, ಜಾತಿ, ವರ್ಗ, ಸೌಂದರ್ಯ, ಲಿಂಗ, ಹೆಣ್ತನ ಮುಂತಾದ ವಿಷಯಗಳನ್ನು ಚರ್ಚೆಗೊಳಪಡಿಸಿ ಪ್ರಕಟಿಸಲಾಗಿದೆ. ಗುತ್ತಿಗೆ ಪೌರಕಾರ್ಮಿಕರ ಹೋರಾಟಗಳಿಗೆ ಸ್ಪಂದಿಸಿ ಲೇಖನಗಳನ್ನು ಪ್ರಕಟಿಸಿದೆ.
- ಆರೋಗ್ಯ, ಲೈಂಗಿಕತೆ, ಅಪಾಯಕಾರೀ ಗರ್ಭ ನಿರೋಧಕಗಳು, ಆರ್ಥಿಕತೆ ಮತ್ತು ಅಭಿವೃದ್ಧಿ, ಅಭಿವೃದ್ಧಿ ಯೋಜನೆಗಳು ಮುಂತಾದ ವಿಚಾರಗಳನ್ನು ವಿಮರ್ಶೆಗೊಳಪಡಿಸಲಾಗಿದೆ.
- ಅಣ್ವಸ್ತ್ರೀಕರಣ, ಮಿಲಿಟರೀಕರಣ, ಜಾಗತೀಕರಣದಂಥ ಬೆಳವಣಿಗೆಗಳನ್ನು ಮಹಿಳಾ ದೃಷ್ಟಿಕೋನದಿಂದ ಪ್ರಶ್ನಿಸಲಾಗಿದೆ.
- ಇತರ ಪ್ರಜಾಸತ್ತಾತ್ಮಕವಾದ ಸಂಘಟನೆಗಳೊಡನೆ ಕೋಮುವಾದ, ಸಮಾನ ನಾಗರಿಕ ಸಂಹಿತೆ, ಮೀಸಲಾತಿ, ಲೈಂಗಿಕತೆ, ಪರಿಸರ, ಸ್ಥಳಾಂತರ ಮುಂತಾದ ವಿವಾದಗಳನ್ನು ಕುರಿತ ಚರ್ಚೆಗಳಲ್ಲಿ, ಆಂದೋಲನಗಳಲ್ಲಿ ಪಾಲ್ಗೊಳ್ಳಲಾಗಿದೆ.
- ಸ್ವಸಹಾಯ ಸಂಘಗಳನ್ನು ರಚಿಸುವ ಮೂಲಕ ಮಹಿಳೆಯರ ಸಬಲತೆಗೆ ಪ್ರೋತ್ಸಾಹ ನೀಡಲಾಗಿದೆ.
- ನಮ್ಮದೇ ಮಿತಿಯಲ್ಲಿ ತೊಂದರೆಗೊಳಗಾದ ಮಹಿಳೆಯರಿಗೆ ಸಲಹೆ, ನೈತಿಕ ಬೆಂಬಲಗಳಲ್ಲದೆ ಕಾನೂನಿನ ನೆರವನ್ನು ನೀಡುತ್ತಿದ್ದೇವೆ.
- ಮಹಿಳೆಯರು ತಾವಿದ್ದೆಡೆಯಲ್ಲಿ ಮಹಿಳಾ ಪತ್ರಿಕೆಗಳನ್ನು ಹೊರತರಲು ಪ್ರಯತ್ನಿಸಿದಲ್ಲಿ, ಗುಂಪುಗಳನ್ನು ರಚಿಸಬೇಕಾದಲ್ಲಿ ಸಹಕರಿಸಲು ಉದ್ದೇಶಿಸಿದ್ದೇವೆ.

Registered
Magazine

Posted on 9th of every month at MBC, Bangalore GPO
Total No. of Pages: 24

ವಿಳಾಸ :
ನಮ್ಮ ಮಾನಸ
114/5, 9ನೇ ತಿರುವು, 2ನೇ ಮುಖ್ಯರಸ್ತೆ,
ಚಾಮರಾಜಪೇಟೆ
ಬೆಂಗಳೂರು - 560 018